ಗೌರಿ ಲಂಕೇಶರ

ಲಂಕೇಶ್

ಜನವರಿ 3, 2007 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ



ಸಾಹಿತ್ಯ ಸಮ್ಮೇಳನ

ಚೆಡ್ಡಿಗಳಿಗೆ ಎದುರೇಟು

ರಾಯಚೂರು-ಕೊಪ್ಪಳ

ಒಂದಂಕಿ ಲಾಟರಿ ಹಾವಳಿ

ಸಂಯುಕ್ತ ಕರ್ನಾಟಕ ಮುಳುಗಿಸಿದ ಹಾರ್ನಳ್ಳಿ



ರಿವೇಂಜ್ ಕಿಲ್ಲಿಂಗ್ಸ್

ತಿಮ್ಮೇನಹಳ್ಳಿ ದಾಯಾದಿ ಕಾಳಗ

ಜೆಸ್ಸಿಕಾ ಲಾಲ್‌ಗೆ ಮರುಗಿದ ಮಾಧ್ಯಮಗಳು ಕಂಬಾಲಪಲ್ಲಿಗಳಿಗೆ ಕರಗುವುದಿಲ್ಲವೇಕೆ?

ಕೊನೆಗೂ ಜೆಸ್ಸಿಕಾ ಲಾಲ್‌ಗೆ ನ್ಯಾಯ ಸಿಕ್ಕಿದೆ. ಅದೂ ಸಾಧ್ಯವಾದದ್ದು ಮಾಧ್ಯಮಗಳಿಂದ. ಆಕೆಗಾದ ಅನ್ಯಾಯದ ವಿರುದ್ಧ ದೃಢವಾಗಿ ನಿಂತು ದೇಶಾದ್ಯಂತ ಜನಾಭಿಪ್ರಾಯವನ್ನು ಸಂಘಟಿಸಿ ಪರೋಕ್ಷವಾಗಿ ನ್ಯಾಯಾಲಯಗಳ ಮೇಲೆ ನೈತಿಕ ಒತ್ತಡವನ್ನು ಹೇರಿದ್ದರಿಂದ. ಇದು ಒಂದು ರೀತಿ ಪ್ರಜಾಪ್ರಭುತ್ವಕ್ಕೆ ಸಂದ ಜಯವೇ ಆಗಿದ್ದರೂ ಮತ್ತೊಂದು ರೀತಿಯಲ್ಲಿ ಈ ದೇಶದ ನ್ಯಾಯಾಂಗದ ತಟಸ್ಥತೆಯ ಮಿಥ್ಯೆಯನ್ನು ಹೊಡೆದುಹಾಕುತ್ತದೆ.



ಅದೇ ರೀತಿ ಜೆಸ್ಸಿಕಾಳಿಗೆ ನ್ಯಾಯ ದೊರಕಿಸಲು ಭೂಮ್ಯಾಕಾಶಗಳನ್ನು ಒಂದು ಮಾಡಿದ ಮಾಧ್ಯಮಗಳನ್ನು ಅಭಿನಂದಿಸುವ ಹೊತ್ತಿನಲ್ಲೇ ನ್ಯಾಯದ ಬಗ್ಗೆ, ಅನ್ಯಾಯಕ್ಕೊಳಗಾದ ಎಲ್ಲರ ಬಗ್ಗೆ ಮಾಧ್ಯಮಗಳಿಗೆ ಯಾವಾಗಲೂ ಇದೇರೀತಿ ಕಾಳಜಿ ಇರುತ್ತದೆಯೇ ಎಂದೇನೂ ಹೇಳುವಂತಿಲ್ಲ. ಉದಾಹರಣೆಗೆ ಜೆಸ್ಸಿಕಾಳ ಕೇಸಿನಲ್ಲಿ ಆರೋಪಿಗಳು ಖುಲಾಸೆಯಾಗಲು ಕಾರಣ ಪ್ರತ್ಯಕ್ಷಸಾಕ್ಷಿಗಳು ಪ್ರತಿಕೂಲ ಸಾಕ್ಷಿ ಹೇಳಿದ್ದಕ್ಕಾಗಿ. ಈಗ ಹೈಕೋರ್ಟು ಸಹಾ ಸತ್ಯವನ್ನು ಮುಚ್ಚಿಟ್ಟು ನ್ಯಾಯದಾನಕ್ಕೆ ಅಡ್ಡಿಪಡಿಸಿದ ಸಾಕ್ಷಿಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳಲು ಹೊರಟಿದೆ.

ಆದರೆ ಕಂಬಾಲಪಲ್ಲಿಯಲ್ಲೂ ಆದದ್ದು ಇದೇ ಅಲ್ಲವೇ? ಅಲ್ಲಿಯೂ ಮೇಲ್ಜಾತಿ ರೆಡ್ಡಿ ಜನಾಂಗಕ್ಕೆ ಸೇರಿದ ಗುಂಪೊಂದು ಏಳು ಜನ ದಲಿತರನ್ನು ಗುಡಿಸಲಿನೊಳಗೆ ಕೂಡಿಟ್ಟು ಜೀವಂತ ದಹನ ಮಾಡಿದ್ದನ್ನು ಕಣ್ಣಾರೆ ಕಂಡ ಪ್ರತ್ಯಕ್ಷದರ್ಶಿಗಳು ನ್ಯಾಯಾಲಯದಲ್ಲಿ ಜೀವಭಯದಿಂದಾಗಿ ಕೊಲೆಪಾತಕರ ವಿರುದ್ಧ ಸಾಕ್ಷ್ಯ ನುಡಿಯಲಿಲ್ಲ. ಹೀಗಾಗಿ ಎಲ್ಲಾ ಕೊಲೆಪಾತಕರು ಖುಲಾಸೆಯಾದರು. ಜೆಸ್ಸಿಕಾ ಕೇಸಿನಲ್ಲಿ ಆದಂತೆ. ಆದರೆ ಆ ನಂತರ ಜೆಸ್ಸಿಕಾ ಕೇಸಿನಲ್ಲಿ ಆದದ್ದು ಕಂಬಾಲಪಲ್ಲಿ ಕೇಸಿನಲ್ಲಿ ಆಗಲಿಲ್ಲ. ಏಕೆಂದರೆ ಅಲ್ಲಿ ಜೆಸ್ಸಿಕಾಗೆ ಆದ ಅನ್ಯಾಯ ತನಗೇ ಆದ ಅನ್ಯಾಯವೆಂದು ಮಾಧ್ಯಮಗಳು ಮತ್ತು ಸುಶಿಕ್ಷಿತ ನಾಗರಿಕ ಸಮಾಜ ಭಾವಿಸಿತ್ತು. ಏಕೆಂದರೆ ಜೆಸ್ಸಿಕಾ ಇದೇ ವರ್ಗಕ್ಕೆ ಸೇರಿದವಳಾಗಿದ್ದಳು. ಕಂಬಾಲಪಲ್ಲಿಯಲ್ಲಿ ಕೊಲ್ಲಲ್ಪಟ್ಟವರು ಹೇಳಿಕೇಳಿ ದಲಿತರು..! ಹೀಗಾಗಿ ನಾಡಿನ ಒಂದೆರಡು ಪತ್ರಿಕೆಗಳನ್ನು ಬಿಟ್ಟರೆ ಬೇರೆ ಯಾವ ಪತ್ರಿಕೆಗಳು ಇದನ್ನು ಅನ್ಯಾಯವೆಂದೂ ಹೇಳಲಿಲ್ಲ. ಜೆಸ್ಸಿಕಾ ಕೇಸಿನಲ್ಲಿ ಸಾಕ್ಷಿಗಳು ಪ್ರತಿಕೂಲವಾಗುವುದರ ಬಗ್ಗೆ ಎಚ್ಚರಿಕೆ ನೀಡಿದ್ದ ನ್ಯಾಯಾಲಯಗಳು ತಾವೇನೂ ಮಾಡಲು ಸಾಧ್ಯವಿಲ್ಲವೆಂದು ಕೈಚೆಲ್ಲಿದವು.


ಚಾರ್ವಾಕ

- ಶಿವಸುಂದರ್-

ದಲಿತರ ಮಟ್ಟಿಗೆ ಕಂಬಾಲಪಲ್ಲಿ ಅಂಥಾ ಅಪರೂಪದ ಪ್ರಕರಣವೇನೂ ಅಲ್ಲ. ವಾಸ್ತವವಾಗಿ ದಲಿತರ ಮೇಲಿನ ಅತ್ಯಾಚಾರಗಳಿಗೆ ಸಂಬಂಧಪಟ್ಟಂತೆ ಅಪರಾಧಿಗಳಿಗೆ ಶಿಕ್ಷೆ ಆಗುವುದು ಆಶ್ಚರ್ಯದ ಸಂಗತಿಯೇ ವಿನಃ ಖುಲಾಸೆಯಾಗುವುದಲ್ಲ. ದಲಿತರ ಮೇಲಿನ ಅತ್ಯಾಚಾರಗಳನ್ನು ತಡೆಗಟ್ಟಲು ತಂದಿರುವ ಕಾಯಿದೆಯ ಅನುಷ್ಠಾನದ ಬಗ್ಗೆ ಮೊನ್ನೆ ತಾನೆ ಬೆಂಗಳೂರಿನ ಕಾನೂನು ಅಧ್ಯಯನ ಸಂಸ್ಥೆಯೊಂದು ಗಾಬರಿಗೊಳಿಸುವ ಅಂಶವೊಂದನ್ನು ಬೆಳಕಿಗೆ ತಂದಿದೆ. ಈ ಸಂಸ್ಥೆಯು ದಕ್ಷಿಣ ಭಾರತದ ನಾಲ್ಕು ರಾಜ್ಯಗಳಲ್ಲಿ ಜಾರಿಯಲ್ಲಿರುವ ದಲಿತರ ಮೇಲಿನ ಅತ್ಯಾಚಾರ ತಡೆ ಕಾಯಿದೆ ಎಷ್ಟು ಪರಿಣಾಮಕಾರಿಯಾಗಿದೆ ಎಂದು ಅಧ್ಯಯನ ಮಾಡಲು ವಿವಿಧ ಠಾಣೆಗಳಲ್ಲಿ ದಾಖಲಾಗಿದ್ದ ಸುಮಾರು ಏಳು ನೂರು ಕೇಸುಗಳ ಅಧ್ಯಯನವನ್ನು ಮಾಡಿತು. ಅವರ ಅಧ್ಯಯನದ ಪ್ರಕಾರ ನೂರಕ್ಕೆ ತೊಂಭತ್ತೊಂಭತ್ತು ಪ್ರಕರಣಗಳಲ್ಲಿ ಆರೋಪಿಗಳು ಯಾವುದೇ ಶಿಕ್ಷೆಯಿಲ್ಲದೆ ಪಾರಾಗಿದ್ದಾರೆ. ಅದರಲ್ಲೂ ಕರ್ನಾಟಕದಲ್ಲಿ 1997-2002ರ ಅವಧಿಯಲ್ಲಿ ಈ ಕಾಯಿದೆಯಡಿ ದಾಖಲಾದ ಪ್ರಕರಣಗಳಲ್ಲಿ ಶಿಕ್ಷೆಗೊಳಗಾದವರು ಒಬ್ಬರೇ ಒಬ್ಬರು! ಕಾರಣ ಸಾಕ್ಷಿಗಳು ಜೀವಭಯದಿಂದಾಗಿ ಹಿಂದೆ ಸರಿದದ್ದು. ಆದರೆ ಈವರೆಗೂ ಇವರಿಗಾದ ಅನ್ಯಾಯಗಳನ್ನು ಸಮಾಜವಾಗಲೀ, ಮಾಧ್ಯಮಗಳಾಗಲೀ, ನ್ಯಾಯಾಲಯಗಳಾಗಲೀ ಅನ್ಯಾಯವೆಂದು ಭಾವಿಸಲಿಲ್ಲವೇಕೆ?

ಪ್ರಾಯಶಃ ಅದಕ್ಕೆ ಕಾರಣ ಈ ಅಂಕಿಅಂಶಗಳಲ್ಲಿರಬಹುದೇ?

ದೇಶದ ಅತ್ಯುಚ್ಚ ನ್ಯಾಯಾಲಯದಲ್ಲಿ ಇತ್ತೀಚೆಗೆ ಮುಖ್ಯ ನ್ಯಾಯಮೂರ್ತಿಯಾದ ಬಾಲಕೃಷ್ಣನ್‌ರನ್ನು ಬಿಟ್ಟರೆ ಇನ್ನೊಬ್ಬ ದಲಿತ ನ್ಯಾಯಾಧೀಶನಿಲ್ಲ. ದೇಶದ ಒಟ್ಟು 481 ಹೈಕೋರ್ಟು ನ್ಯಾಯಾಧೀಶರಲ್ಲಿ ಕೇವಲ ಇಪ್ಪತ್ತು ಜನ ಮಾತ್ರ ದಲಿತ ನ್ಯಾಯಾಧೀಶರು! ಅಷ್ಟು ಮಾತ್ರವಲ್ಲ, ಸಮಾಜದ ಅಭಿಪ್ರಾಯ ರೂಪಿಸುವ ವಿಶ್ವವಿದ್ಯಾಲಯಗಳ ವಿವಿಧ ಜ್ಞಾನಶಿಸ್ತುಗಳಲ್ಲಿ ದಲಿತರ ಪ್ರಮಾಣವೆಷ್ಟು? ಉದಾಹರಣೆಗೆ ದೇಶದ 18 ಕೇಂದ್ರೀಯ ವಿದ್ಯಾಲಯಗಳಲ್ಲಿ ದಲಿತ ಪ್ರೊಫೆಸರುಗಳ ಸಂಖ್ಯೆ ಕೇವಲ 11! ಈ ಸುಶಿಕ್ಷಿತ ದಲಿತರಲ್ಲೂ ದಲಿತ ಪ್ರಶ್ನೆ ಇಟ್ಟುಕೊಂಡ ನ್ಯಾಯಾಧೀಶರೆಷ್ಟು? ಪ್ರೊಫೆಸರುಗಳೆಷ್ಟು? ಕ್ಷಮಿಸಿ.... ಇದರ ಬಗ್ಗೆ ಅಂಕಿಅಂಶ ಸಿಗುವುದು ಕಷ್ಟ. ಏಕೆಂದರೆ ದಲಿತ ಪ್ರಶ್ನೆಯನ್ನು ವರ್ಗ ಪ್ರಶ್ನೆಯನ್ನು ನ್ಯಾಯಾಲಯದೊಳಗೆ ಮತ್ತು ವಿಶ್ವವಿದ್ಯಾಲಯದೊಳಗೆ ಮತ್ತು ಮಾಧ್ಯಮದೊಳಗೆ ಕಡ್ಡಾಯವಾಗಿ ನಿಷೇಧಿಸಲಾಗಿದೆ!



ಬೆಂಗಳೂರು ಗ್ರಾಮಾಂತರ- "ಅಭಿವೃದ್ಧಿಯ" ಬಲಿಪಶು..!

ಇತ್ತೀಚೆಗೆ ಕರ್ನಾಟಕದ ಅಭಿವೃದ್ಧಿಯ ಗತಿಯನ್ನು ತೋರಿಸುವ ವರದಿಯೊಂದನ್ನು ಕರ್ನಾಟಕ ಸರ್ಕಾರ ಪ್ರಕಟಿಸಿದೆ. ಅದರ ಪ್ರಕಾರ ರಾಜ್ಯದಲ್ಲಿ ಅತ್ಯಂತ ಭರದಿಂದ ಪ್ರಗತಿ ಸಾಧಿಸುತ್ತಿರುವ ಜಿಲ್ಲೆ ಯಾವುದೆಂದರೆ ಬೆಂಗಳೂರು ನಗರವಲ್ಲ, ಬದಲಿಗೆ ಇಡಿ ರಾಜ್ಯದಲ್ಲೇ ಪ್ರಗತಿಗಾಮಿಯಾಗಿರುವ ಜಿಲ್ಲೆಯೆಂದರೆ ಬೆಂಗಳೂರು ಗ್ರಾಮಾಂತರ! ಅದು ಅಭಿವೃದ್ಧಿಯಲ್ಲಿ ನಂಬರ್ 1. ಏನಿದು ಸೋಜಿಗ? ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜನ ಅಂದರೆ ನೆಲಮಂಗಲ, ಕನಕಪುರ, ಚನ್ನಪಟ್ಟಣ, ದೇವನಹಳ್ಳಿ ಇನ್ನಿತರ ತಾಲ್ಲೂಕುಗಳ ಜನರು ಇಡೀ ರಾಜ್ಯದ ಜನಕ್ಕಿಂತ ಸುಖ ಸಮೃದ್ಧಿಯಿಂದ ಬದುಕುತ್ತಿದ್ದಾರೆಯೇ?

ಇಲ್ಲ, ಖಂಡಿತಾ ಇಲ್ಲ. ಏಕೆಂದರೆ ಇದೇ ಸರ್ಕಾರವೇ ಮೊನ್ನೆಮೊನ್ನೆ ಇನ್ನೊಂದು ವರದಿಯನ್ನು ಬಿಡುಗಡೆ ಮಾಡಿದೆ. ಅದು ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಜನರ ಶಿಕ್ಷಣ, ಆರೋಗ್ಯ ಆಹಾರ ಬಳಕೆ ಇನ್ನಿತರ ಮಾನದಂಡಗಳನ್ನು ಆಧರಿಸಿ ತಯಾರಿಸಿದ ಮಾನವ ಅಭಿವೃದ್ಧಿ ವರದಿ. ಹಾಗಿದ್ದಲ್ಲಿ ರಾಜ್ಯದಲ್ಲಿ ಅತ್ಯಂತ ಪ್ರಗತಿ ಹೊಂದಿರುವ ಬೆಂಗಳೂರು ಗ್ರಾಮಾಂತರ ಜಿಲ್ಲೆ ಮಾನವ ಅಭಿವೃದ್ಧಿಯಲ್ಲೂ ಪ್ರಥಮ ಸ್ಥಾನದಲ್ಲಿರಬೇಕು ಎಂದುಕೊಂಡರೆ ಅದು ನಿಮ್ಮ ಅಜ್ಞಾನ..! ಪ್ರಗತಿಯಲ್ಲಿ ಮುಂಚೂಣಿಯಲ್ಲಿರುವ ಬೆಂಗಳೂರು ಗ್ರಾಮಾಂತರ ಶಿಕ್ಷಣದಲ್ಲಿರಲಿ ಸಾಕ್ಷರತೆಯಲ್ಲೂ ಕರ್ನಾಟಕದ ಸರಾಸರಿ ಮಟ್ಟಕ್ಕಿಂತ ಕೆಳಗಿದೆ. ಆರೋಗ್ಯದ ವಿಷಯದಲ್ಲಿ ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಿಗಿಂತ ಹಿಂದಿದೆ.



ಬೆಂಗಳೂರಿಗೆ ಕೂಗಳತೆ ದೂರದಲ್ಲಿರುವ ಕೋಲಾರ, ಮಂಡ್ಯ ತುಮಕೂರು ಜಿಲ್ಲೆಗಳು ಈ ಮಾನವ ಅಭಿವೃದ್ಧಿ ಮಾನದಂಡದಲ್ಲಿ ಅನುಕ್ರಮವಾಗಿ 17, 19 ಹಾಗೂ 15ನೇ ಸ್ಥಾನದಲ್ಲಿವೆ. ಬೆಳಗಾವಿ ಇದಕ್ಕಿಂತ ಉತ್ತಮ ಸ್ಥಾನದಲ್ಲಿದೆ. ಬೆಂಗಳೂರು ಗ್ರಾಮಾಂತರ ರಸ್ತೆ ಇನ್ನಿತರ ಮೂಲಸೌಕರ್ಯಗಳ ವಿಷಯದಲ್ಲಿ ಉತ್ತಮ ಸ್ಥಾನವನ್ನು ಪಡೆದುಕೊಂಡರೂ ಆರೋಗ್ಯ ಶಿಕ್ಷಣ ಇನ್ನಿತರ ವಿಷಯಗಳಿಗೆ ಬಂದರೆ ಬೆಂಗಳೂರಿಗಿಂತ ಬೀದರಿಗೆ ಹತ್ತಿರವಾಗಿದೆ!

ಏನಿದರ ಮರ್ಮ? ಪ್ರಗತಿ, ಅಭಿವೃದ್ಧಿಯೆಂಬ ಸೋಜಿಗಕ್ಕೂ ಮಾನವ ಅಭಿವೃದ್ಧಿಗೂ ಏನು ಸಂಬಂಧವೇ ಇಲ್ಲವೇ? ವಾಸ್ತವವೆಂದರೆ ಅವೆರಡಕ್ಕೂ ಸಂಬಂಧವೇನಿಲ್ಲ ಎಂಬುದನ್ನೇ ಈ ವರದಿಗಳು ಸೂಚಿಸುತ್ತವೆ. ಬೆಂಗಳೂರು ಗ್ರಾಮಾಂತರವೆಂಬುದು ಬೆಂಗಳೂರು ನಗರದ ಅಭಿವೃದ್ಧಿಯ ಹಿತ್ತಲು ಅಥವಾ ತಿಪ್ಪೆಗುಂಡಿಯಾಗಿದೆ ಅಷ್ಟೆ. ಇಲ್ಲಿ ಬಂಡವಾಳ ಹೂಡಿಕೆ ಜಾಸ್ತಿಯಾಗಿದೆ. ಏಕೆಂದರೆ ಬೆಂಗಳೂರು ನಗರದಲ್ಲಿ ನೆಲವಿಲ್ಲ. ಹೀಗಾಗಿ ದೇಶವಿದೇಶಿ ಬಂಡವಾಳಿಗರು ಸರಾಗ ಓಡಾಟಕ್ಕೆ ಉತ್ತಮ ಸಾರಿಗೆ, ಅವರ ಉದ್ಯಮಗಳಿಗೆ 24 ಗಂಟೆ ವಿದ್ಯುತ್, ನೀರು ದೊರಕಿಸಲಾಗಿದೆ. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡರೆ ಬೆಂಗಳೂರು ಗ್ರಾಮಾಂತರದಲ್ಲಿ ಅಭಿವೃದ್ಧಿಯೋ ಅಭಿವೃದ್ಧಿ. ಆದರೆ ಇದರ ಫಲ ಜನರಿಗೆ ತೊಟ್ಟಿಕ್ಕುತ್ತಿದೆಯೇ ಎಂಬ ಪ್ರಶ್ನೆಗೆ ಬಂದರೆ ಅದರ ನಿಚ್ಚಳ ಚಿತ್ರಣವನ್ನು ಮಾನವ ಅಭಿವೃದ್ಧಿ ವರದಿ ನೀಡುತ್ತದೆ. ವಾಸ್ತವವಾಗಿ ಈ ಜಿಲ್ಲೆಯ ಬದುಕು ಬೆಳಕಿನ ಕೆಳಗಿನ ಕತ್ತಲಂತೆ ಯಾರ ಗಮನಕ್ಕೂ ಬೀಳದ ಪರಿಸ್ಥಿತಿಯಲ್ಲಿದೆ. ಅಭಿವೃದ್ಧಿಯ ಫಲವಿರಲಿ ಈ ಜಿಲ್ಲೆಯ ರೈತರ ಬದುಕನ್ನೇ ಅಭಿವೃದ್ಧಿಯ ಹೆಸರಿಲ್ಲಿ ಕಿತ್ತುಕೊಳ್ಳುವ ಉಪನಗರ, ಉದ್ಯಮ, ಹೈವೆ ಯೋಜನೆಗಳು ಬರುತ್ತಿವೆ. ಹೀಗಾಗಿಯೇ ಬೆಂಗಳೂರು ನಗರ ಅಭಿವೃದ್ಧಿಯ ಮೈಲಿಯನ್ನು ಸೂಚಿಸಿದರೆ ಬೆಂಗಳೂರು ಗ್ರಾಮಾಂತರ ಅದಕ್ಕೆ ಗಲ್ಲು ಶಿಕ್ಷೆ ಅನುಭವಿಸಬೇಕಾಗಿದೆ. ಇದೇ ಅಭಿವೃದ್ಧಿಯ ಮೈಲಿಗಲ್ಲುಗಳ ನಿಜವಾದ ಅಂತರಾರ್ಥ.

ಕೊನೆ ಮಾತು:




ಮಾಜಿ ಕೇಂದ್ರ ಮಂತ್ರಿ ಹಿರಿಯ ರಾಜಕಾರಣಿ ಶ್ರೀನಿವಾಸ್ ಪ್ರಸಾದ್ ಕಾಂಗ್ರೆಸ್ಸಿಗೆ. ಸಂಸದ, ನಟ ಶಶಿಕುಮಾರ್ ಕಾಂಗ್ರೆಸ್ಸಿಗೆ. ಇನ್ನು ಸುಮಾರು ಪುಡಿ ಪುಕ್ಕ ರಾಜಕಾರಣಿಗಳು ಅತ್ತಲಿಂದ ಇತ್ತಗೆ. ಇತ್ತಲಿಂದ ಅತ್ತಗೆ. ಇದನ್ನು ಕೆಲವು ಮಾಧ್ಯಮಗಳು ರಾಜಕೀಯ ಧ್ರುವೀಕರಣವಾಗುತ್ತಿದೆ ಎಂದು ಬಣ್ಣಿಸುತ್ತಿದ್ದಾರೆ. ಇನ್ನು ಕೆಲವರು ಚುನಾವಣೆ ಸನಿಹದಲ್ಲಿದೆ ಎಂದು ಭವಿಷ್ಯ ನುಡಿಯುತ್ತಿದ್ದಾರೆ. ಇರಬಹುದು. ಚುನಾವಣೆ ಹತ್ತಿರದಲ್ಲಿರಬಹುದು. ಆದರೆ ಇದು ರಾಜಕೀಯ ಧ್ರುವೀಕರಣವೇ..? ಧ್ರುವೀಕರಣವೆಂದರೆ ಎರಡು ಧ್ರುವಗಳಿರಬೇಕಲ್ಲವೇ? ಎರಡು ಧ್ರುವಗಳೆಂದರೆ ಎರಡು ತದ್ವಿರುದ್ಧ ರಾಜಕೀಯ ಚಿಂತನೆಗಳಲ್ಲವೇ? ಕೋಮುವಾದದ ಬಗ್ಗೆ ಸಣ್ಣ ಮತಭೇಧವಿರಬಹುದಾದ ಸಾಧ್ಯತೆಗಳನ್ನು ಹೊರತುಪಡಿಸಿದರೆ ಪರಸ್ಪರ ವಿರುದ್ಧ ರಾಜಕೀಯ ಚಿಂತನೆಗಳನ್ನು ಹೊಂದಿರುವ ವಿಭಿನ್ನ ರಾಜಕೀಯ ಪಕ್ಷಗಳಿವೆಯೇ?



ವಾಸ್ತವವಾಗಿ ನೋಡಿದರೆ ಎಲ್ಲಾ ಚುನಾವಣಾ ರಾಜಕೀಯ ಪಕ್ಷಗಳೂ ಒಂದೇ ಧ್ರುವದಲ್ಲಿವೆ. ಅದಕ್ಕೆ ತದ್ವಿರುದ್ಧ ಧ್ರುವದಲ್ಲಿರುವುದು ಜನತೆಯೇ... ಇದು ಜನತೆಯೇ ವಿರೋಧಪಕ್ಷವಾಗಬೇಕಾದ ಕಾಲ..

ಏಕೆಂದರೆ ಈ ದೇಶ ಮತ್ತೊಮ್ಮೆ ಮೋಸ ಹೋಗಬಾರದು......


No Comments



"ಮೇಲ್ವರ್ಗದ ನಾಲ್ಕು ಜನರನ್ನು ನಂಬಿಕೊಂಡು ಪಕ್ಷವನ್ನು ಸಂಘಟಿಸಲು ಸಾಧ್ಯವಿಲ್ಲ"

-ಯಡಿಯೂರಪ್ಪ

"ಟಿಪ್ಪು? ಕನ್ನಡ ದ್ರೋಹಿಯೇ ಎಂಬ ಚರ್ಚೆಯೇ ಅಪ್ರಸ್ತುತ"



-ವ್ಯಾಸರಾಯ ಬಲ್ಲಾಳ

"ಭೂಕಬಳಿಕೆ ಪತ್ತೆಗೆ ಸಮಿತಿ ನೇಮಕವಾಗಿರುವುದರಿಂದ ಕಾಂಗ್ರೆಸ್‌ನಲ್ಲೇ ಕೆಲವರಿಗೆ ಗಾಬರಿಯಾಗಿದೆ"

-ರೋಷನ್ ಬೇಗ್



"ಮುಖ್ಯಮಂತ್ರಿಗಳ ಬಗ್ಗೆ ಸರ್ಕಾರಿ ಕಾರ್ಯಕ್ರಮಗಳಲ್ಲಿ ಶಿಷ್ಟಾಚಾರ ಅನುಸರಿಸಬೇಕೇ ವಿನಃ ಸ್ವಾಯತ್ತ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮಗಳಲ್ಲ"

-ಚಂಪಾ



"ಜನಸಮುದಾಯಗಳನ್ನು ಉಪ... ಕೆಡವುವುದು ರಕ್ತಪಾತಕ್ಕಿಂತಾ "ಕ... ವಾದದ್ದು"

-ಜಿ.ಎಸ್. ಶಿವರುದ್ರಪ್ಪ

ನಂಬಿದ್ರೆ ನಂಬಿ ಬಿಟ್ರೆ ಬಿಡಿ:

"ನನಗೆ ಮುಖ್ಯಮಂತ್ರಿ ಆಗುವ ಕನಸಿಲ್ಲ. ನನಗಿಷ್ಟೇ ಸಾ...

-ಯಡಿಯೂ...



"ಮುಂದಿನ ವರ್ಷದಿಂದ ಸಾರಾಯಿ-ಲಾಟರಿ ನಿಷೇಧ"

-ಕುಮಾರಸ್ವಾಮಿ

"ಪಶ್ಚಿಮ ಬಂಗಾಳದಲ್ಲಿ ನಮ್ಮ ಸರ್ಕಾರ ಮತ್ತು ಟಾಟಾ ಕಂಪನಿ ಮಾಡುತ್ತಿರುವ ಕಾರ್ ಯೋಜನೆ ದೇಶದ ಇತರ ಎಲ್ಲಾ ಯೋಜನೆಗಳಿಗಿಂತ ಭಿನ್ನ"

-ಬೃಂದಾ ಕಾರಟ್, ಸಿ.ಪಿ.ಎಂ ಪಕ್ಷದ ನಾಯ...

"ಮುಂದುವರೆದ ರಾಷ್ಟ್ರಗಳ ಒತ್ತಡಕ್ಕಂಜಿ ರೈತ... ಕೊಡುತ್ತಿರುವ ಸಾಲವನ್ನು ನಾನು ಹಿಂತೆಗೆದುಕೊಳ್ಳುವುದಿ...

-ಕುಮಾರಸ್ವಾಮಿ

ವಾರದ ಘೋಷಣೆ

"ಧರ್ಮ ನಿರಪೇಕ್ಷತೆಯ ನೆಲೆಯ ಮೇಲೆ ಕನ... ಸಾಹಿತ್ಯ ಪರಿಷತ್ ಸಾಹಿತ್ಯ ಸಮ್ಮೇಳನದ ಸ್ವರೂಪವ... ನಿರ್ಧರಿಸಿದ್ದು ಯಾವುದೇ ರಾಜಕೀಯ ಪಕ್ಷ ಅಥ... ಸಂಘಟನೆ ತನ್ನ ಅಜೆಂಡಾವನ್ನು ಹೇರಲು ಬಿಡುವುದಿ...

-ಚಂ...

ವಾರದ ಹತಾಷೆ

"ಸರಕಾರದ ದಿವ್ಯ ನಿರ್ಲಕ್ಷ್ಯದಿಂದ ಮಲೆನಾಡಿ... ಕಾಡು ಕೆಂಪಾಗುತ್ತಿದೆ. ಅಡಿಕೆ ಹಳದಿಯಾಗು... ನಾಡು ಕೇಸರಿಯಾಗುತ್ತಿದೆ"

-ಪ್ರಕಾಶ್ ಕಮ್ಮರ... ಸಮ್ಮೇಳನದ ಭಾಷಣದ...

ವಾರದ ವಿವೇಕ

"ದಿನದಿಂದ ದಿನಕ್ಕೆ ದೇವಸ್ಥಾನ ಮತ್ತು ಧರ್ಮ... ಹೆಸರಲ್ಲಿ ವಿಜೃಂಭಿಸುತ್ತಿರುವ ಕೋಮುವಾದದ ಅ... ಹುತಗಳು ಮತ್ತು ಜಾಗತಿಕ ಭಯೋತ್ಪಾ... ಯೊಂದಿಗೆ ಅದು ವಿಸ್ತರಿಸಿಕೊಳ್ಳುತ್ತಿರುವ ಸಂಬಂಧಗ... ಅಪಾಯ ಕಾರಿಯಾಗಿವೆ"

-ರಾಷ್ಟ್ರಕವಿ ಜಿ.ಎಸ್. ಶಿವರುದ್ರ...


ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ನ್ಯಾಯಾಂಗ ವ್ಯವಸ್ಥೆ, ಕಾನೂನು, ನ್ಯಾಯಾಧೀಶರು ಇತ್ಯಾದಿಗೆ ಸಂಬಂಧಿಸಿದ ಸೂಕ್ತಿಗಳನ್ನು ನಮ್ಮ ಓದುಗ, ಕೊಪ್ಪಳದ ಅಡ್ವೋಕೇಟ್ ವಿಜಯ ಅಮೃತ್‌ರಾಜ್ ಕಳುಹಿಸಿಕೊಟ್ಟಿದ್ದಾರೆ. ಇವು ನ್ಯಾಯಾಂಗ ವ್ಯವಸ್ಥೆ ಕುರಿತ ನಿಮ್ಮ ಜ್ಞಾನವನ್ನು ಹೆಚ್ಚಿಸಲಿವೆ.

-ಮ...

ಪ್ರಸಿದ್ಧ ನ್ಯಾಯಾಧೀಶರು, ನ್ಯಾಯವಾದಿಗಳು ಸಾಹಿತ್ಯದ ದಾಸರೇ ಆಗಿದ್ದರು -ಮಹಿಪಾಲ ದೇಸಾಯಿ

ಶಿವಮೊಗ್ಗೆಯಲ್ಲಿ ಮನಮುಟ್ಟಿದ ಕ್ಷಣಗಳು....

ಶಿವಮೊಗ್ಗೆಯಲ್ಲಿ ನಿನ್ನೆ ಶನಿವಾರದಂದು ನಡೆದದ್ದನ್ನು ಬಹಳಷ್ಟು ಜನ ಈಗಾಗಲೇ ಟೀವಿಯಲ್ಲಿ ನೋಡಿರುತ್ತೀರಿ, ಪತ್ರಿಕೆಗಳಲ್ಲಿ ಓದಿರುತ್ತೀರಿ. ಆದ್ದರಿಂದ ಇಲ್ಲಿ ನನ್ನ ಮನಮುಟ್ಟಿದ ಹಲವು ಘಟನೆಗಳನ್ನಷ್ಟೇ ದಾಖಲಿಸುತ್ತೇನೆ. ಶನಿವಾರ ಮುಂಜಾನೆ ಶಿವಮೊಗ್ಗೆಯನ್ನು ತಲುಪಿದ ನಂತರ ಸಾಹಿತ್ಯ ಸಮ್ಮೇಳನದ



ಗೋಷ್ಠಿಯ ಮುನ್ನ ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ವತಿಯಿಂದ ಪತ್ರಿಕಾಗೋಷ್ಠಿ ಇದೆ ಎಂದು ನಮ್ಮ ವಾಸು ಹೇಳಿದರು. ಅದೇ ಗುರುವಾರ ಕಲ್ಕುಳಿ ವಿಠಲ ಹೆಗಡೆಯವರ ಸಭೆಯಲ್ಲಿ ಎಬಿವಿಪಿಯವರು ನಡೆಸಿದ ದಾಂಧಲೆ, ಅವರ ವಿರುದ್ಧ ಪೊಲೀಸರು ಕ್ರಮಕೈಗೊಳ್ಳದೇ ನಮ್ಮ ವೇದಿಕೆಯ ಹಲವು ಸದಸ್ಯರ ವಿರುದ್ಧ ಕ್ರಮಕೈಗೊಂಡಿದ್ದನ್ನು ವಿರೋಧಿಸುವ ಪತ್ರಿಕಾಗೋಷ್ಠಿ ಅದಾಗಿತ್ತು.

ರೈತ ಸಂಘದ ಆಫೀಸಿನ ಮೊದಲನೆ ಮಹಡಿಯಲ್ಲಿ ನಡೆಯಲಿದ್ದ ಪತ್ರಿಕಾಗೋಷ್ಠಿ ಶುರುವಾಗುವ ಮುನ್ನ ಮಂಜುಳಾ ಬಂದು "ಪೊನ್ನಮ್ಮಾಳ್‌ರವರು ನಿಮ್ಮನ್ನು ನೋಡಲು ಬಂದಿದ್ದಾರೆ. ಅವರಿಗೆ ಮೆಟ್ಟಲು ಹತ್ತುವುದಕ್ಕಾಗುವುದಿಲ್ಲ, ನೀವು ಬರುತ್ತೀರಾ?" ಎಂದರು.

ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿದ್ದ, ಈಗಲೂ ಜನಪರ ಹೋರಾಟಗಳಲ್ಲಿ ಸಾಧ್ಯವಾದಷ್ಟು ಭಾಗವಹಿಸುವ ಪೊನ್ನಮ್ಮಾಳ್‌ರವರ ಬಗ್ಗೆ ತುಂಬಾ ಕೇಳಿದ್ದೆನಾದರೂ ಅವರನ್ನು ಭೇಟಿ ಆಗಿರಲಿಲ್ಲ. ಆದ್ದರಿಂದ ಅವರೇ ಬಂದಿದ್ದಾರೆಂದು ಕೇಳಿ ಸಂತೋಷಗೊಂಡು ಕೆಳಗೆ ಓಡಿಹೋದೆ. ತಾವು ಬಂದಿದ್ದ ಆಟೋ ರಿಕ್ಷಾದಿಂದಲೂ ಇಳಿಯಲಾಗದೆ ಕೂತಿದ್ದ 90 ರ ಹರೆಯದ ಪೊನ್ನಮ್ಮಾಳ್‌ರವರು 'ಬಾ, ಇಲ್ಲಿ ನನ್ನ ಪಕ್ಕದಲ್ಲಿ ಕುಳಿತುಕೊ" ಎಂದು ಆಹ್ವಾನಿಸಿದರು. ನಾನು ಅವರ ಪಕ್ಕ ಕೂರುತ್ತಿದ್ದಂತೆ ನನ್ನ ಕೈಹಿಡಿದು ``You are not alone. ನಾವೆಲ್ಲ ನಿನ್ನೊಂದಿಗಿದ್ದೇವೆ. ಯಾವುದಕ್ಕೂ ಹೆದರಬೇಡ. ಇವತ್ತು ಎಲ್ಲವೂ ಎಷ್ಟು ಕೆಟ್ಟುಹೋಗಿದೆ ಎಂದರೆ ಅದೆಲ್ಲದರ ವಿರುದ್ಧ ಹೋರಾಡಲೇಬೇಕು....." ಎಂದು ಹೇಳುತ್ತಾ ನೆನಪುಗಳಲ್ಲಿ ಮುಳುಗಿದರು. "ನಾನು ನಿನ್ನನ್ನು ನೋಡಿದಾಗ ನೀನಿನ್ನೂ ಕೈಗೂಸಾಗಿದ್ದೆ, ನಿನ್ನ ಅಪ್ಪ ನನ್ನ ಮಗನಿದ್ದಂತೆ... ಆತ ಇವತ್ತು ಇರಬೇಕಿತ್ತು" ಎಂದು ನನ್ನ ಮುಖ ಸವರಿದರು.

ನಾನು ತುಂಬಾ ಸೆಂಟಿಮೆಂಟಲ್. ತೊಂಭತ್ತು ವರ್ಷಗಳಾಗಿದ್ದರೂ, ಇವತ್ತಿಗೂ ಜನಪರ ಹೋರಾಟಗಳಲ್ಲಿ ಆಸಕ್ತಿ ಹೊಂದಿರುವ ಪೊನ್ನಮ್ಮಾಳ್‌ರವರು ನನ್ನನ್ನು ನೋಡಿ, ಧೈರ್ಯ ತುಂಬಲು ಆಟೋ

ಕಂಡಹಾಗೆ



ಹಿಡಿದು, ನಾನೆಲ್ಲಿದ್ದೇನೆ ಎಂದು ಹುಡುಕಿಕೊಂಡು ಬಂದು ನನ್ನನ್ನು ಮುದ್ದಿಸಿದ್ದನ್ನು ಕಂಡು ಸಂತೋಷದ ಕಣ್ಣೀರು ಹರಿದವು. ಅವರೊಂದಿಗೆ ಸ್ವಲ್ಪ ಸಮಯ ಕಳೆದ ನಂತರ "ಇವತ್ತು busy ಆಗಿರ್ತೀಯಾ, ಮುಂದಿನ ಬಾರಿ ಮನೆಗೆ ಬಾ" ಅಂತ ಹೇಳಿ ಪೊನ್ನಮ್ಮಾಳ್ ಅಲ್ಲಿಂದ ಹೊರಟರು.

ಅವರನ್ನು ಕಳುಹಿಸಿ ಬರುತ್ತಿದ್ದಂತೆ, ಯು.ಆರ್. ಅನಂತಮೂರ್ತಿಯವರು ಫೋನ್ ಮಾಡಿದರು. ಭಾಷಣ ಮಾಡುವುದರಲ್ಲಿ ನಾನು ಎತ್ತಿದ ಕೈ ಅಲ್ಲವಾದ್ದರಿಂದ, ಮತ್ತು ನನ್ನೊಂದಿಗೆ ಜಗಳವಾಡಲು ಬರುವವರಿಗೆ ಹೆದರದೆ ವಾದಕ್ಕೆ ನಿಲ್ಲುವುದರಿಂದಲೋ ಏನೋ, ಅನಂತಮೂರ್ತಿಯವರು ಫೋನ್ ಮಾಡಿದ್ದರು. "ಗೌರಿ, ನೀನು ಧೈರ್ಯವಾಗಿ ಮಾತಾಡು. ನಾವೆಲ್ಲ ನಿನ್ನೊಂದಿಗಿದ್ದೇವೆ. ಯಾರಾದರೂ ನಿನ್ನನ್ನು ಕೆಣಕಿದರೆ ನೀನು ರಿಯಾಕ್ಟ್ ಮಾಡಬೇಡ, ಆಯ್ತಾ?" ಎಂದು ಅವರು ಹೇಳಿದಾಗ ನನಗೆ ಮಾತೇ ಹೊರಡಲಿಲ್ಲ.

ಇದೆಲ್ಲದರ ಮಧ್ಯೆ, ಸಹಜವಾಗಿಯೇ ನನಗೇನಾಗುತ್ತೋ ಎಂದು ಆತಂಕಗೊಂಡಿದ್ದ ಅಮ್ಮನ ಕರೆಗಳು, ಕುವೆಂಪು ರಂಗಮಂದಿರಕ್ಕೆ ಪ್ರವೇಶ ನೀಡುತ್ತಿಲ್ಲ ಎಂಬ ದೂರುಗಳು, ಇದು ನಮ್ಮೆಲ್ಲರ ಹೋರಾಟ ಎಂದು ದೂರದೂರದಿಂದ ಹುರಿದುಂಬಿಸಿದ ಸೌಹರ್ದ ಮಿತ್ರರು, ಚೆಡ್ಡಿಗಳ ವಿರುದ್ಧದ ಸಭೆಯಲ್ಲಿ ಭಾಗವಹಿಸಿ ಐಕ್ಯತೆಯನ್ನು ಪ್ರದರ್ಶಿಸಲು ಸಾಧ್ಯವಾಗದೇ ಹೋದ ಜಾತ್ಯತೀತ ಗೆಳೆಯರು, ಸಭೆಯ ನಂತರ ಗೆದ್ದ ಉತ್ಸಾಹವನ್ನು ತೋರಿದ ಸ್ನೇಹಿತರು, ನನ್ನ ಗೈರುಹಾಜರಿಯಲ್ಲೂ 'ಲಂಕೇಶ್' ಜವಾಬ್ದಾರಿಯನ್ನು ನಿರ್ವಹಿಸಿದ ಸಹೋದರರು..... ಎಲ್ಲರಿಗೂ ಸೌಹಾರ್ದದ ಸಲಾಮ್!

-ಗೌರಿ ಲಂಕೇಶ್

ಸಮ್ಮೇಳನದಲ್ಲಿ ಮಾತನಾಡಿದ್ದು...

ಮೊದಲನೆಯದಾಗಿ, ಸರ್ಕಾರದ ಮತ್ತು ಹಲವು ಶಕ್ತಿಗಳ ಒತ್ತಡಕ್ಕೆ ಮಣಿಯದೇ ಕನ್ನಡ ನಾಡು ಮತ್ತು ನುಡಿ ಎಂದೂ ಯಾವ ಸರ್ಕಾರದ ಅಡಿಯಾಳಾಗಿಲ್ಲ ಎಂಬುದನ್ನು ಮತ್ತೆ ಎತ್ತಿಹಿಡಿದಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಚಂದ್ರಶೇಖರ ಪಾಟೀಲರಿಗೆ ಅಭಿನಂದನೆಗಳು. ಇವತ್ತು ನನಗೆ ಕೊಟ್ಟಿರುವ ವಿಷಯ 'ಕನ್ನಡ ಪತ್ರಿಕೋದ್ಯಮ-ಒಂದು ನೋಟ'. ನಾನು ಹೇಳಬೇಕೆಂದಿರುವುದು ನಿರಾಶಾದಾಯಕವಾಗಿ ಕೇಳಿಸಿದರೂ, ನನ್ನಂತೆಯೇ ಪತ್ರಿಕೋದ್ಯಮದಲ್ಲಿ ಆಗುತ್ತಿರುವುದನ್ನು ಕಂಡು ಆತಂಕಕ್ಕೆ ಒಳಗಾಗಿರುವ ನನ್ನ ಪತ್ರಿಕಾ ಮಿತ್ರರ ದುಗುಡವನ್ನೂ ವ್ಯಕ್ತಪಡಿಸುತ್ತೇನೆ ಎಂದು ನಂಬಿದ್ದೇನೆ. ಹಾಗೆಯೇ ಯಾವುದೇ ಒಂದು ಪತ್ರಿಕೆಯನ್ನು ಹೊಗಳುವುದನ್ನಾಗಲೀ, ತೆಗಳುವುದನ್ನಾಗಲೀ ಮಾಡದೇ ಇವತ್ತು ಪತ್ರಿಕಾರಂಗದಲ್ಲಿ ಏನಾಗುತ್ತಿದೆ ಎಂಬುದನ್ನಷ್ಟೇ ಹೇಳಲು ಇಷ್ಟಪಡುತ್ತೇನೆ.

ಪತ್ರಿಕೋದ್ಯಮವನ್ನು ಪ್ರಜಾಪ್ರಭುತ್ವದ ನಾಲ್ಕನೇ ಸ್ತಂಭ ಎಂದು ಬಣ್ಣಿಸಲಾಗಿದೆ. ಇವತ್ತು ಏನಾಗಿದೆ ಎಂದರೆ, ಶಾಂತಿಯುತವಾಗಿ, ಪ್ರಜಾತಾಂತ್ರಿಕವಾಗಿ ನಡೆದ ನರ್ಮದಾ ಬಚಾವೋ ಆಂದೋಲನವನ್ನು ಕುರಿತು 'ಡ್ಯಾಂನ ಎತ್ತರವನ್ನು ಏರಿಸದಿದ್ದರೆ ವಿದೇಶಿ ಬಂಡವಾಳ ಬರುವುದಿಲ್ಲ' ಎಂದು ನ್ಯಾಯಾಲಯ; ವಿದೇಶಿ ಬಂಡವಾಳಕ್ಕೆಂದೇ ಕಾದಿರುವ, ಭ್ರಷ್ಟಾಚಾರದಲ್ಲೇ ಮುಳುಗಿರುವ ಶಾಸಕಾಂಗ; ಬ್ರಿಟಿಷರ ಕಾಲದಿಂದ ಜನರಿಗೆ ತೊಡರುಗಾಲಾಗುತ್ತಲೇ ಬಂದಿರುವ ಕಾರ್ಯಾಂಗ; ಈ ಮೂರೂ ಅಂಗಗಳು ಜನರ ಆಶಯಯಗಳಿಗೆ ಬೆನ್ನು ತೋರಿಸಿವೆ. ಇಂಥ ಸಂದರ್ಭದಲ್ಲಿ ಪ್ರಜಾಪ್ರಭುತ್ವದ ನಾಲ್ಕನೇ ಅಂಗವಾಗಿರುವ, ನೈತಿಕ ಪ್ರಜ್ಞೆಯಾಗಿರುವ ನಮ್ಮ ಪತ್ರಿಕಾರಂಗವೂ ಸರಕಾರದ, ಸಾಹುಕಾರರ ಕರಪತ್ರಗಳಾಗುತ್ತಿರುವುದು ದುರಾದೃಷ್ಟ.

ನಮ್ಮ ದೇಶದ ಶೇ. 70ಕ್ಕಿಂತಲೂ ಹೆಚ್ಚು ಜನರ ಬದುಕಿನೊಂದಿಗೆ ಸಂಪರ್ಕವನ್ನೇ ಕಳೆದುಕೊಂಡಿರುವ ನಮ್ಮ ಪತ್ರಿಕೋದ್ಯಮ ಎಷ್ಟು ಉಳ್ಳವರ ಪರವಾಗಿದೆಯೆಂದರೆ, ಇವತ್ತು ಜಗತ್ತಿನ ಅತೀ ದೊಡ್ಡ ಭಯೋತ್ಪಾದಕನಾಗಿರುವ ಜಾರ್ಜ್ ಬುಷ್ ಭಾರತಕ್ಕೆ ಭೇಟಿ ನೀಡಿದರೆ ಅದನ್ನು ನಮ್ಮ ಪತ್ರಿಕೆಗಳು ವೈಭವೀಕರಿಸುತ್ತವೆ; ಆತ ಈ ನಾಡಿನಲ್ಲಿ ಹೆಜ್ಜೆ ಇಟ್ಟದ್ದೇ ನಮ್ಮ ಪುಣ್ಯ ಎಂಬಂತೆ ವರ್ಣಿಸುತ್ತವೆ.

ಕರ್ನಾಟಕದಲ್ಲೇ ಕಳೆದ ಹತ್ತು ವರ್ಷಗಳಲ್ಲಿ ಹನ್ನೆರಡು ಸಾವಿರಕ್ಕಿಂತಲೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆದರೆ ಅವರ ಆತ್ಮಹತ್ಯೆಗಳಿಗೆ ಕಾರಣವೇನೆಂದು ನಮ್ಮ ಪತ್ರಿಕೆಗಳು ವಿಚಾರಿಸುವ ಗೋಜಿಗೇ ಹೋಗಿಲ್ಲ. ಬದಲಾಗಿ, ಇಷ್ಟೊಂದು ಸಂಖ್ಯೆಯಲ್ಲಿ ರೈತರನ್ನು ಆತ್ಮಹತ್ಯೆಗೆ ದೂಡುತ್ತಿರುವ ಆರ್ಥಿಕ ನೀತಿಯ ಶಿಲ್ಪಿಯಾದ ಪ್ರಧಾನಿ ಮನಮೋಹನಸಿಂಗ್‌ರವರು ಈ ದೇಶವನ್ನು ಅಭಿವೃದ್ಧಿಯ ಪಥದಲ್ಲಿ ಸಾಗಿಸಿದ್ದಾರೆ ಎಂದು ನಮ್ಮ ಪತ್ರಿಕೆಗಳು ಕೊಂಡಾಡುತ್ತಿವೆ.

ಇವತ್ತು ನಮ್ಮ ದೇಶದಲ್ಲಿ ಪ್ರತಿ ನಿಮಿಷ ಇಬ್ಬರು ಮಹಿಳೆಯರ ಮೇಲೆ ಅತ್ಯಾಚಾರಗಳು ನಡೆಯುತ್ತಿವೆ. ಪ್ರತಿ ದಿನ ಎರಡು ಸಾವಿರ ಮಹಿಳೆಯರು ಅನಿವಾರ್ಯವಾಗಿ ವೇಶ್ಯಾವಾಟಿಕೆಯನ್ನು ಪ್ರವೇಶಿಸುತ್ತಿದ್ದಾರೆ. ಹೀಗೆ ಈ ಮಹಿಳೆಯರ ಬದುಕು ಮೂರಾಬಟ್ಟೆಯಾಗುತ್ತಿರುವ ಸಂದರ್ಭದಲ್ಲೇ ಅವರ ಬದುಕಿನ ವಾಸ್ತವವನ್ನು ಮರೆತು ಪತ್ರಿಕೆಗಳು ಯಾವುದೋ ಫ್ಯಾಷನ್ ಶೋನಲ್ಲಿ ಮೂರಿಂಚು ಬಟ್ಟೆ ಧರಿಸಿದ ರೂಪದರ್ಶಿಯ ಉಡುಪು ಜಾರಿದ್ದರ ಬಗ್ಗೆ ವರದಿ ಮಾಡುತ್ತವೆ, ಗಾಢವಾದ ಚರ್ಚೆ ನಡೆಸುತ್ತವೆ.

ಇಂಥ ವಿಪರ್ಯಾಸಗಳು ಇಲ್ಲಿಗೇ ನಿಲ್ಲುವುದಿಲ್ಲ. ಒಂದೆಡೆ ಏರುತ್ತಿರುವ ಕೋಟ್ಯಾಧಿಪತಿಗಳ ಪಟ್ಟಿ,



ಇನ್ನೊಂದೆಡೆ ಏರುತ್ತಿರುವ ಆತ್ಮಹತ್ಯೆಗಳು.... ಇದೆಲ್ಲ ಏಕಾಗುತ್ತಿದೆ ಎಂಬುದನ್ನು ನಮ್ಮ ಪತ್ರಿಕೆಗಳು ವಿಶ್ಲೇಷಿಸುವುದಿಲ್ಲ.

ಕನ್ನಡ ಪತ್ರಿಕೋದ್ಯಮದ ಇಂದಿನ ದುರಂತ ಯಾವುದೆಂದರೆ ಅವು ಕೂಡ ಇಂಗ್ಲಿಷ್ ಮಾಧ್ಯಮಗಳ ಹಾದಿ ಹಿಡಿದಿರುವುದು. ಇಂಥ ಪತ್ರಿಕೋದ್ಯಮದಲ್ಲಿ ಸೆನ್ಸೇಷನಲೈಸೇಷನ್‌ಗೆ ಜಾಗ ಇರುತ್ತದೆಯೇ ಹೊರತು ಜನಪರವಾದ, ಪ್ರಗತಿಪರವಾದ, ಸೌಹಾರ್ದ-ಸಹಬಾಳ್ವೆ ಪರವಾದ ಹೋರಾಟಗಳಿಗೆ ಜಾಗವೇ ಇಲ್ಲದಂತಾಗಿದೆ. ಅದರಲ್ಲೂ 'ಉಷಾಕಿರಣ' ಎಂಬ ಕನ್ನಡ ಪತ್ರಿಕೆಯನ್ನು ಇಂಗ್ಲಿಷ್‌ನ 'ದಿ ಟೈಮ್ಸ್ ಆಫ್ ಇಂಡಿಯಾ'ದ ಅನುವಾದಿತ ಪತ್ರಿಕೆಯಾಗಿ ತರುತ್ತಿರುವುದು ಕನ್ನಡ ಪತ್ರಿಕೋದ್ಯಮಕ್ಕೆ ಮಾಡುತ್ತಿರುವ ಅವಮಾನ.

ವಿಜಯ ಕರ್ನಾಟಕದ ಬಗ್ಗೆ ನನಗೆ ಹಲವಾರು ಭಿನ್ನಾಭಿಪ್ರಾಯಗಳಿವೆ. ಆದರೆ ಅದಕ್ಕಿಂತ ಮುಖ್ಯವಾದದ್ದು ಏನೆಂದರೆ ಇವತ್ತು ವಿಜಯ ಕರ್ನಾಟಕ, ವಿಜಯ ಟೈಮ್ಸ್ ಮತ್ತು ಉಷಾಕಿರಣವನ್ನು ಕೊಂಡಿರುವ ಬೆನೆಟ್ ಕೋಲ್ಮನ್ ಎಂಬ ಕಂಪೆನಿ ನಾಳೆ ಜಿಲ್ಲಾ ಪತ್ರಿಕೆಗಳನ್ನೂ ಕೊಂಡು ಏಕಸ್ವಾಮ್ಯ ಸ್ಥಾಪಿಸಬಹುದು. ಜಾಗತೀಕರಣದ ಈ ಯುಗದಲ್ಲಿ ಅಂತಹ ಏಕಸ್ವಾಮ್ಯತೆ ಕನ್ನಡ ಪತ್ರಿಕೋದ್ಯಮವನ್ನೇ ನಾಶಮಾಡುತ್ತದೆ.

ಪ್ರಜಾಪ್ರಭುತ್ವದಲ್ಲಿ ಪತ್ರಿಕಾರಂಗದ ಪಾತ್ರ ಮಹತ್ತರವಾದದ್ದು. ಇದಕ್ಕೆ ಉದಾಹರಣೆ ಜೆಸ್ಸಿಕಾ ಲಾಲ್ ಎಂಬ ರೂಪದರ್ಶಿಯ ಕೊಲೆ ಪ್ರಕರಣ. ಹಿಂದೊಮ್ಮೆ ಈ ಪ್ರಕರಣ ಕುರಿತಂತೆ ಪ್ರತ್ಯಕ್ಷ ಸಾಕ್ಷಿಗಳು hostile ಆದರು ಎಂಬ ಕಾರಣಕ್ಕೆ ಕೇಸು ಖುಲಾಸೆಯಾಗಿತ್ತು. ಆಗ ಪತ್ರಿಕೆಗಳು ಮತ್ತು ಟೀವಿ ಚಾನೆಲ್‌ಗಳು ಜನಾಭಿಪ್ರಾಯ ಸಂಗ್ರಹಿಸಿದವು, ಎಸ್ಸೆಮ್ಮೆಸ್ಸುಗಳನ್ನು ಆಹ್ವಾನಿಸಿದವು. ಜೆಸ್ಸಿಕಾಲಾಲ್ ಪ್ರಕರಣ ಮತ್ತೆ ವಿಚಾರಣೆಗೆ ಬರುವಂತೆ ಮಾಡಿ ಆಕೆಯನ್ನು ಕೊಂದ ಮನು ಶರ್ಮನಿಗೆ ಶಿಕ್ಷೆ ಆಗುವಂತೆ ಮಾಡಿದವು. ಆದರೆ ನನ್ನನ್ನು ಕಾಡುವ ಪ್ರಶ್ನೆ ಯಾವುದೆಂದರೆ, ಕಂಬಾಲಪಲ್ಲಿ ಪ್ರಕರಣದಲ್ಲಿ ಹಲವಾರು ದಲಿತರ ಮಾರಣಹೋಮ ನಡೆದು, ಆ ವಿಚಾರಣೆಯಲ್ಲೂ ಪ್ರತ್ಯಕ್ಷ ಸಾಕ್ಷಿಗಳು hostile ಆಗಿ ಕೇಸ್ ಖುಲಾಸೆಯಾದಾಗ, ನಮ್ಮ ಪತ್ರಿಕಾರಂಗ ಜೆಸ್ಸಿಕಾಲಾಲ್ ಪ್ರಕರಣದಲ್ಲಿ ವಹಿಸಿದ್ದ ಆಸಕ್ತಿಯನ್ನು ಯಾಕೆ ವಹಿಸಲಿಲ್ಲ ಎಂಬುದು. ಕಂಬಾಲಪಲ್ಲಿಯಲ್ಲಿ ಸತ್ತವರು ದಲಿತರು, ಮೇಲ್ವರ್ಗಕ್ಕೆ ಸೇರಿಲ್ಲದವರು ಎಂಬ ಕಾರಣಕ್ಕೇ ಈ ನಿರ್ಲಕ್ಷ್ಯವೇ?

ಕಂಬಾಲಪಲ್ಲಿಯಂತೆಯೇ ಮೊನ್ನೆ ಮಹಾರಾಷ್ಟ್ರದ ಖೈರ್‌ಲಾಂಜಿಯಲ್ಲಿ ಸುರೇಖಾ ಎಂಬ ದಲಿತ ಮಹಿಳೆ ಮತ್ತಾಕೆಯ ಕುಟುಂಬದ ಮೂರು ಸದಸ್ಯರ ಮೇಲೆ ಅತ್ಯಾಚಾರ ನಡೆಸಿ ಬರ್ಬರವಾಗಿ ಕೊಲ್ಲಲಾಯಿತು. ಇದನ್ನು ಕುರಿತು ಪ್ರಶ್ನಿಸಿದರೆ ಸುರೇಖಾ ಓರ್ವ ನಕ್ಸಲೈಟ್ ಆಗಿದ್ದಳು ಎಂದು ಸರ್ಕಾರ ಹೇಳಿತು. ಅನಂತರ ಇದನ್ನು ಪ್ರತಿಭಟಿಸಿದ ದಲಿತರನ್ನೂ ನಕ್ಸಲೈಟರೆಂದು ಕರೆದ ಸರ್ಕಾರ ಅವರ ಮೇಲೆ ಲಾಠಿ ಪ್ರಹಾರ ಮಾಡಿತು. ಇದು ಹೀಗೆ ಮುಂದುವರೆದರೆ, ನಾಳೆ ಅಂಬೇಡ್ಕರ್ ಪ್ರತಿಮೆಗೆ ಅವಮಾನ ಮಾಡಲಾಗಿದೆ ಎಂದು ನೀವು ಪ್ರತಿಭಟಿಸಿದರೆ ನಿಮ್ಮನ್ನೂ ಈ ಪ್ರಭುತ್ವ ನಕ್ಸಲೈಟ್ ಎಂದು ಕರೆಯುತ್ತದೆ.

ಈ ವಿಷಯವನ್ನು ಇಲ್ಲಿ ಯಾಕೆ ಪ್ರಸ್ತಾಪಿಸುತ್ತಿದ್ದೇನೆ ಎಂಬುದು ನಿಮಗೆ ಅರ್ಥವಾಗಿರಬೇಕು. ಇವತ್ತು ಎಂಥ ಸ್ಥಿತಿ ನಿರ್ಮಾಣವಾಗಿದೆ ಎಂದರೆ ಯಾರಾದರೂ ಜನಪರವಾಗಿ, ಪ್ರಗತಿಪರವಾಗಿ ಮಾತನಾಡಿದರೆ ಅವರಿಗೆ ತಕ್ಷಣವೇ ಪ್ರಭುತ್ವ 'ನಕ್ಸಲೈಟ್' ಎಂದು ಹಣೆಪಟ್ಟಿ ಕಟ್ಟುತ್ತದೆ. ದುರಾದೃಷ್ಟವಶಾತ್ ನಮ್ಮ ಪತ್ರಿಕೆಗಳೂ ಹಾಗೇ ವರದಿ ಮಾಡುತ್ತವೆ. ಅದೆಲ್ಲವನ್ನೂ ಜನ ನಂಬುತ್ತಾರೆ. ಉದಾಹರಣೆಗೆ: 'ಶಾಂತಿಗಾಗಿ ನಾಗರಿಕ ವೇದಿಕೆ'ಯ ಸದಸ್ಯೆಯಾಗಿ ಈ ರಾಜ್ಯ ಕೂಡ ಹಿಂಸೆ ಮತ್ತು ಪ್ರತಿಹಿಂಸೆಯಲ್ಲಿ ತೊಡಗಿ ಆಂಧ್ರದ ಹಾದಿ ಹಿಡಿಯಬಾರದು ಎಂದಿದ್ದಕ್ಕೆ, ಕುದುರೆಮುಖದಲ್ಲಿ ಆದಿವಾಸಿಗಳ ಸ್ಥಿತಿ ಹೇಗಿದೆ ಎಂದು ಸತ್ಯಶೋಧನೆಗೆ ಹೋಗಿ ನಕ್ಸಲೈಟರನ್ನು ಭೇಟಿಯಾದದ್ದಕ್ಕೆ ನನ್ನನ್ನು ನಕ್ಸಲೈಟ್ ಎಂದು ಕರೆದರು.... But I don't care.

ನಕ್ಸಲೈಟರು ಎಂದರೆ ಯಾರು ಎಂಬುದರ ಬಗ್ಗೆಯೇ ಎಷ್ಟು ಅಜ್ಞಾನ ಇದೆಯೆಂದರೆ, ಒಮ್ಮೆ ಬಿಬಿಸಿ ಮತ್ತು ಟೈಮ್ ಮ್ಯಾಗಜೀನ್‌ನವರು ನನಗೆ ಫೋನ್ ಮಾಡಿ ಅವರ ಅಡ್ರೆಸ್ ಮತ್ತು ಫೋನ್ ನಂಬರ್ ಕೊಡುತ್ತೀರಾ ಎಂದಿದ್ದರು. ಹಾಗೆಯೇ ಬಾಬಾಬುಡನ್‌ಗಿರಿ ವಿಚಾರ ಕುರಿತಂತೆಯೂ ಪತ್ರಕರ್ತರಲ್ಲೇ ಸ್ಪಷ್ಟತೆ ಇಲ್ಲದಿರುವುದರಿಂದ ಅವರು ಏನನ್ನು ವರದಿ ಮಾಡಿಯಾರು?

ನಕ್ಸಲರ ಚಳವಳಿಯನ್ನು ಒಂದು ಅಪರಾಧ ಎಂಬಂತೆ ಪರಿಗಣಿಸುವ ಪತ್ರಿಕೆಗಳು ಅದನ್ನು ವರದಿ ಮಾಡಲು ಕ್ರೈಂ ವರದಿಗಾರರನ್ನು ಕಳಿಸುತ್ತವೆ. ಹಾಗೆಯೇ ಟಿವಿಗಳಲ್ಲೂ ಕ್ರೈಂ ಡೈರಿ ಮತ್ತು ಕ್ರೈಂ ಸ್ಟೋರಿಗಳಲ್ಲಿ ಬಿತ್ತರಗೊಳ್ಳುತ್ತವೆ.

ನಕ್ಸಲರ ಹಾದಿಯನ್ನು ನಾವು ಒಪ್ಪದಿರಬಹುದು. ಆದರೆ ಅವರು ಎತ್ತುವ ವಿಚಾರಗಳ ಬಗ್ಗೆ ಯೋಚಿಸಬೇಕು. ನಮ್ಮ ವಿರುದ್ಧ ಮೊನ್ನೆ ಪ್ರತಿಭಟಿಸಿರುವ ಯುವಕರಂತೆಯೇ ಪೊಲೀಸರಿಂದ ಹತಳಾದ ಪಾರ್ವತಿ ಕೂಡ ಇದೇ ಶಿವಮೊಗ್ಗೆಯ ಹುಡುಗಿ, ಇಲ್ಲೇ ಓದಿದಾಕೆ, ಪತ್ರಿಕೋದ್ಯಮದಲ್ಲಿ ಪದವಿ ಪಡೆದಾಕೆ. ಅಂಥ ಹುಡುಗಿ ಯಾಕೆ ನಕ್ಸಲೈಟ್ ಆದಳು? ಅವಳೊಂದಿಗೆ ಹತ್ಯೆಯಾದ ಹಾಜಿಮಾ ಕೂಡ ರಾಯಚೂರಿನ ಬಡ ಕೂಲಿಕಾರ ಕುಟುಂಬದಿಂದ ಬಂದವಳು. ಕೂಲಿ ಮಾಡುತ್ತಿದ್ದ ಕೈಗಳು ಯಾಕೆ ಬಂದೂಕು ಹಿಡಿದವು? ಎಂದು ಪ್ರಶ್ನಿಸಿದ್ದಕ್ಕೆ ನನಗೆ ನಕ್ಸಲೈಟ್ ಎಂಬ ಹಣೆಪಟ್ಟಿ ದೊರೆಯಿತು. ಓರ್ವ ಆಕ್ಟಿವಿಸ್ಟ್ ಆಗಿ, ಪತ್ರಕರ್ತೆಯಾಗಿ ನನ್ನ ಕರ್ತವ್ಯ-ಸತ್ಯದ ಅನ್ವೇಷಣೆ. ಆ ಕ್ರಿಯೆಯಲ್ಲಿ ನಮ್ಮ ಪ್ರಭುತ್ವ ಹೇಗೆ ಲಾಠಿ ಹಿಡಿದು ಪ್ರಜಾಸತ್ತಾತ್ಮಕ ಹೋರಾಟಗಳನ್ನು ದಮನ ಮಾಡುತ್ತಿದೆ ಎಂದು ಹೇಳಿದ್ದಕ್ಕೆ ನನ್ನನ್ನೂ ನಕ್ಸಲೈಟ್ ಎಂದು ಕರೆದರೆ ಅದಕ್ಕೆಲ್ಲ ಹೆದರುವವಳಲ್ಲ ನಾನು.

ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ. ಚಂಪಾರವರು ನನ್ನನ್ನು ಈ ಗೋಷ್ಠಿಗೆ ಆಹ್ವಾನಿಸಿದಾಗ ಗೋಷ್ಠಿಯು ಗುರುವಾರ 21ನೇ ತಾರೀಖು ಇರುತ್ತದೆಂದು ಹೇಳಿದ್ದಕ್ಕೆ ನಾನು ಒಪ್ಪಿಕೊಂಡಿದ್ದೆ. ಆದರೆ ಆಹ್ವಾನಪತ್ರದಲ್ಲಿ ಗೋಷ್ಠಿಯನ್ನು ಶನಿವಾರಕ್ಕೆ ನಿಗದಿಗೊಳಿಸಿದ್ದನ್ನು ನೋಡಿ, ಪತ್ರಿಕೆಯ ಜವಾಬ್ದಾರಿಗಳಿಂದಾಗಿ ಭಾಗವಹಿಸಲಾಗುತ್ತದೋ, ಇಲ್ಲವೋ ಎಂದು ಚಿಂತಿಸಿದೆ. ಆದರೆ ನಾನು ಇಲ್ಲಿಗೆ ಬರಲೇಬಾರದೆಂದು ಪ್ರತಿಭಟನೆಗಳು ಶುರುವಾದಾಗ ಬಹಳಷ್ಟು ಮಿತ್ರರು ನಾನು ಇಲ್ಲಿಗೆ ಬಂದು ನನ್ನ ಸಾಮಾಜಿಕ ಕರ್ತವ್ಯವನ್ನು ಪೂರೈಸಲೇಬೇಕು ಎಂದರು. ಅದಕ್ಕೆ ಅವರಿಗೆ ಕೃತಜ್ಞತೆಗಳು.


ಹಾಗೆಯೇ ನಾನು ಬರಕೂಡದೆಂದು ಕೆಲವರು ಪ್ರತಿಭಟಿಸಿದ್ದರಿಂದ ನಾನು ಇಲ್ಲಿಗೆ ಬಂದು, ಸಂವಿಧಾನ ನನಗೆ ಕೊಟ್ಟಿರುವ ವಾಕ್ ಸ್ವಾತಂತ್ರ್ಯವನ್ನು ಚಲಾಯಿಸುವಂತೆ ಮಾಡಿದರು. ಅವರಿಗೂ ಧನ್ಯವಾದಗಳು. ಇದೆಲ್ಲವನ್ನೂ ಸಾಧ್ಯವಾಗಿಸಿದ ಎಲ್ಲರಿಗೂ, ಚಂಪಾರವರಿಗೂ ಮತ್ತೊಮ್ಮೆ ಅಭಿನಂದನೆಗಳು.

-ಗೌರಿ ಲಂಕೇಶ್

"ಮನುಷ್ಯನ ಜೀವನ ಜನನ, ಮರಣದ ಎಂಬ ಕಾನೂನಿನ ಎರಡು ಪತ್ರಗಳ ನಡುವೆ ಇರುವ ಒಂದು ಅವಧಿ-ಎಸ್.ಎಚ್. ಮಿಟ್ಟಲಕೋಡ್


ದೇವೇಗೌಡರ ವಿರುದ್ಧ ದಾಸಗೌಡರು

ಕಳೆದ ಹತ್ತಿಪ್ಪತ್ತು ವರ್ಷಗಳಿಂದ ತೆರೆಮರೆಯಲ್ಲೇ ನಡೆಯುತ್ತಿದ್ದ ಹಾಸನದ ಒಕ್ಕಲಿಗರ ಒಳಪಂಗಡಗಳ ಗುದ್ದಾಟಕ್ಕೆ ಒಂದು ಹೊಸ ರೂಪ ಬಂದಿದೆ. 'ಅಖಿಲ ಭಾರತ ದಾಸ ಒಕ್ಕಲಿಗರ ಸಂಘ' ಎಂಬ ಸಂಘವನ್ನು ಹುಟ್ಟುಹಾಕುವುದರ ಮೂಲಕ ಅಲ್ಲಿನ ದಾಸ ಒಕ್ಕಲಿಗರು ಮುಳ್ಳು ಒಕ್ಕಲಿಗರಿಗೆ ಸೇರಿರುವ ದೇವೇಗೌಡರಿಗೆ ಸವಾಲು ಎಸೆದಿದ್ದಾರೆ.




ಕಳೆದ ಮೂರು-ನಾಲ್ಕು ವಿಧಾನಸಭಾ ಚುನಾವಣೆಗಳಲ್ಲಿ ದಾಸಗೌಡ ಮತ್ತು ಮುಳ್ಳುಗೌಡ ಎಂಬ ಪಂಗಡ ಮಾಡಿಕೊಂಡು ರಾಜಕಾರಣಿಗಳು ತಮ್ಮದೇ ಆದ ಓಟ್ ಬ್ಯಾಂಕ್ ರಾಜಕೀಯವನ್ನು ಮಾಡುತ್ತಿದ್ದಾರೆ. ತೆರೆಮರೆಯಲ್ಲೇ ನಡೆಯುತ್ತಿದ್ದ ಪ್ರಕ್ರಿಯೆಯನ್ನು ಜನರು ಥೂ ಇದೆಂಥಾ ಕೆಟ್ಟ ಸಂಸ್ಕೃತಿ ಎಂದು ಕಿಡಿಕಾರುತ್ತಿದ್ದರು. ಹಾಸನದಲ್ಲಿ ದಾಸಗೌಡರು ಮತ್ತು ಮುಳ್ಳುಗೌಡರು ಎಂದು ವಿಂಗಡಿಸಿದ ಕೀರ್ತಿ ಮಾಜಿ ಶಾಸಕ ಹನುಮೇಗೌಡರಿಗೆ ಸಲ್ಲಬೇಕು. ಹಾಸನ ವಿಧಾನಸಭಾ ಕ್ಷೇತ್ರದಲ್ಲಿ ಗಣನೀಯ ಸಂಖ್ಯೆಯಲ್ಲಿರುವ ದಾಸ ಒಕ್ಕಲಿಗರನ್ನು "ಬಾ ತಮ್ಮ" ಎಂದು ತಬ್ಬಿಕೊಂಡು ಅಧಿಕಾರಕ್ಕೆ ಬಂದವರು ಹನುಮೇಗೌಡ. ಹಾಸನದಲ್ಲಿ ಮಾತ್ರ ಮೆಜಾರಿಟಿಯನ್ನು ಹೊಂದಿರುವ ದಾಸ ಒಕ್ಕಲಿಗರು ಹೊಳೆನರಸಿಪುರ, ಚನ್ನರಾಯಪಟ್ಟಣದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿಲ್ಲ. ಈಗ ಹಾಸನದಲ್ಲಿ ಹುಟ್ಟಿರುವ ಈ ದಾಸ ಒಕ್ಕಲಿಗರ ಸಂಘ ಕೇವಲ ಹಾಸನ ವಿಧಾನಸಭಾ ಕ್ಷೇತ್ರಕ್ಕೆ ಮಾತ್ರ ಮೀಸಲಾಗುವ ಸೂಚನೆಗಳಿವೆ.

ದೇವೇಗೌಡರು ಸಹ ಮುಳ್ಳುಗೌಡರೇ. ಆದ್ದರಿಂದ ಹತ್ತಾರು ವರ್ಷಗಳಿಂದ ಹಾಸನವನ್ನು ಮುಳ್ಳುಗೌಡರೇ ಆದ ದೇವೇಗೌಡ, ರೇವಣ್ಣ ಅಥವಾ ಕಾಂಗ್ರೆಸ್‌ನ ಶ್ರೀಕಂಠಯ್ಯ ಆಳುತ್ತಾ ಬಂದಿದ್ದಾರೆ. ಇದರಿಂದಾಗಿ ದಾಸಗೌಡರಿಗೆ ಸರಿಯಾದ ಸ್ಥಾನಮಾನ ಸಿಕ್ಕಿಲ್ಲವೆಂಬುದು ದಾಸಗೌಡರ ಅಳಲು. ಹಾಲಿನ ಡೈರಿಯಲ್ಲಿ ರೇವಣ್ಣ ಕೇವಲ ಮುಳ್ಳುಗೌಡರನ್ನೇ ಕೆಲಸಕ್ಕೆ ತೆಗೆದುಕೊಂಡಿದ್ದಾರೆ. ಇದು ಬೆಂಗಳೂರಿನ ಮದರ್ ಡೈರಿಯಲ್ಲೂ ಆಗಿದೆ. ಕೆಇಬಿಯಲ್ಲೂ ರೇವಣ್ಣ ಮುಳ್ಳುಗೌಡರಿಗೇ ಮಣೆ ಹಾಕಿ ತಮ್ಮ ಮುಳ್ಳು ಪ್ರೇಮವನ್ನು ಮೆರೆದಿದ್ದಾರೆ. ಒಟ್ಟಾರೆ ರೇವಣ್ಣನ ಅಧಿಕಾರದಡಿ ನಡೆದ ಎಲ್ಲಾ ಕೆಲಸಗಳನ್ನು ಮುಳ್ಳುಗೌಡರೇ ಗಿಟ್ಟಿಸಿಕೊಂಡಿದ್ದಾರೆ ಎಂಬುದು ದಾಸಗೌಡ ಸಂಘಟನೆಯ ದೂರು. ಇದರಲ್ಲಿ ಹೆಚ್ಚಿನ ಸತ್ಯಾಂಶವೂ ಇದೆ. ದೇವೇಗೌಡರ ಮನೆಗೆ ಹೋದರೆ ನೇರವಾಗಿ ನೀವು ಯಾವ ಗೌಡ ಎಂದು ಕೇಳದೇ, "ನಿಮ್ಮ ಮನೆಯ ತಿಥಿಗಳಲ್ಲಿ ಸಿಹಿ ಮಾಡುತ್ತೀರೊ, ಮಾಂಸ ಮಾಡುತ್ತೀರೋ" ಎಂದು ಕೇಳಿ ಮುಳ್ಳುಗೌಡರನ್ನೇ ಹುಡುಕಿ ಪೋಷಿಸುವುದು ನಿಜ. ಹಾಗಂತ ಅವರೇನು ಅಖಿಲ ಭಾರತ ಮುಳ್ಳುಗೌಡರ ಸಂಘಟನೆ ಎಂದು ಒಂದು ಸಂಘವನ್ನೇ ಹುಟ್ಟುಹಾಕಿಲ್ಲ.



ನಂಜೇಗೌಡ

ಈ ದಾಸಗೌಡ ಸಂಘ ಎಂದು ಹುಟ್ಟುಹಾಕಿರುವ, ಈ ರೀತಿ ಒಳಮೀಸಲಾತಿಯಿಂದ ನಾವು ಅಧಿಕಾರಕ್ಕೆ ಬರುತ್ತೇವೆ ಎಂದುಕೊಂಡಿರುವ ಇವರಿಗೆ ಒಂದು ವಿಷಯ ಅರ್ಥವಾಗಬೇಕಿದೆ. ಈ ಹಿಂದೆ ಹಾಸನದ ನಾಯಕತ್ವ ವಹಿಸಿದ್ದ ನಲ್ಲೂರೇಗೌಡ, ಎಲ್.ಟಿ. ಕಾರ್ಲೆ ಮುಂತಾದವರು ದಾಸಗೌಡರೇ ಆಗಿದ್ದರು. ಆಗ ಅವರು ಕೇವಲ ದಾಸಗೌಡರ ಮುಖಂಡರಾಗಿರಲಿಲ್ಲ. ಅದೂ ಅಲ್ಲದೇ ಇದುವರೆಗೂ ಹಾಸನ ನಗರಾಭಿವೃದ್ಧಿ ಪ್ರಾಧಿಕಾರ, ನಗರಸಭೆ, ಹಾಸನ ಜಿಲ್ಲಾ ಸಹಕಾರಿ ಬ್ಯಾಂಕು ಮುಂತಾದ ಪ್ರಮುಖ ಸ್ಥಾನಗಳಲ್ಲಿ ದಾಸಗೌಡರೇ ವಿರಾಜಮಾನರಾಗಿದ್ದರು. ಇದರ ಎಲ್ಲಾ ಫಲವನ್ನು ಕೆ.ಡಿ. ಪ್ರಕಾಶ, ದಾಸಪ್ಪ, ಜಿ.ಟಿ. ಕುಮಾರ್, ಬಿ.ಕೆ. ಮಂಜುನಾಥ್, ಕೆ.ಎಂ. ರಾಜೇಗೌಡ ಮುಂತಾದವರು ಅನುಭವಿಸಿದವರೇ. ಅಂತಹ ಸಮಯದಲ್ಲಿ ಇವರು ಕಡಿದುಕಟ್ಟೆ ಹಾಕಿದ್ದು ಏನು?



ಹನುಮೇಗೌಡ


ಒಬ್ಬ ನಿಜವಾದ ನಾಯಕನಾಗಿ ರೂಪುಗೊಳ್ಳಬೇಕೆಂದರೆ ಒಂದು ಸಮಸ್ಯೆಯನ್ನು ಕೈಗೆತ್ತಿಕೊಂಡು ಅದರ ಮೂಲಕ ಜನರಿಗೆ ಸ್ಪಂದಿಸುತ್ತಾ ಹೋರಾಡುವುದು. ಎಸ್.ಎಂ. ಆನಂದ್, ಕೆ.ಎಂ. ರಾಜೇಗೌಡ ಮುಂತಾದ ಮಾಜಿ ಶಾಸಕರು "ನಾವು ದಾಸಗೌಡರು ಒಟ್ಟಾಗಬೇಕು. ಇಲ್ಲದಿದ್ದರೆ ಉದ್ಧಾರ ಸಾಧ್ಯವಿಲ್ಲ" ಎಂದು ಬಂದವರೆದುರಿಗೆ ಭಾಷಣ ಬಿಗಿಯುತ್ತಾ ಕೂರುವ ಬದಲು ಜಿಲ್ಲೆಯ ಸಮಸ್ಯೆಗಳ ಬಗ್ಗೆ ಗಮನಹರಿಸಬೇಕಿದೆ. ಅಲ್ಲಿಂದ ಅಧಿಕಾರಕ್ಕೆ ಬರಬೇಕಿದೆ. ಈಗಲೂ ಎಸ್.ಎಂ. ಆನಂದ್ ಒಬ್ಬ ಎಂ.ಎಲ್.ಸಿ. ಇದು ದಾಸಗ... ರಿಗೆ ಸಿಕ್ಕಿರುವ ಫಲವಲ್ಲವೇ? ಯ... ಗಲೂ ಶ್ರೀಕಂಠಯ್ಯನವರ ಬಾಲಬ... ನಂತೆ ವರ್ತಿಸುವ ಇವರು ... ಸಂಘಟನೆ ಮಾಡಹೊರಟು ನಾ... ಅಭಿವೃದ್ಧಿಯ ಬಗ್ಗೆ ನಿರ್ಲಕ್ಷ್ಯ ವ... ದ್ದಾರೆ.

ಕೇವಲ ಇಂತಹ ಕೀಳರಿಮೆ... ದಲೇ ಬದುಕುತ್ತಿರುವ ಇವರು ಒ... ನಾಯಕರಾಗಿ ಬೆಳೆಯುವ ಯ... ಸಾಧ್ಯತೆಯೂ ಕಂಡುಬರು... ಮುಂದೆ ಈ ಅಖಿಲ ಭಾ... ದಾಸಗೌಡರ ಸಂಘಟನೆ ಒಂದಾಗಿ... ನಡೆಯುತ್ತದಾ... ಎಂದು ನೋಡಿ... ಅದೂ ಸಂಶಯವೇ. ಕೆ.... ರಾಜೇಗೌಡ, ಎಸ್.ಎಂ. ಆನಂದ್, ಜಿ.ಟಿ. ಕುಮಾ... ಮುಂತಾದವರು ಒಂದು ಬಣವಾದರೆ, ಹನುಮೇಗೌ... ರದೇ ಒಂದು ಬಣವಾಗಿದೆ. ಇನ್ನು ಹೆಮ್ಮಿಗೆ ಮೋಹ... ರಂತಹವರು ಇಂತಹ ಕೆಸರಿನ ರಾಡಿಗೆ ಸಿಲುಕ... ತಟಸ್ಥವಾಗಿರುತ್ತಾರೆ.

ಈಗಾಗಲೇ ದಾಸಗೌಡ v/s ಮುಳ್ಳುಗೌಡ ಎಂ... ಜಾತಿ ವಿಂಗಡಣೆ ಮಾಡಿ ಗಿರಿಜಾಶಂಕರ್ ಕೊಲೆಯಾ... ಇಡೀ ನಾಡೇ ನಡುಗುವಂತಹ ದ್ಯಾಪಲಾಪುರ ಗ್ರಾ... ಉರಿದುಹೋದ ಘಟನೆ ನಮ್ಮೆದುರಿಗೆ ಇನ್ನೂ... ಹಸಿಯಾಗಿದೆ. ಈಗ ಸಾಲದಕ್ಕೆ ಒಂದು ಸಂಘ... ಮಾಡಲು ಹೊರಟಿರುವುದು ಇನ್ನೂ ಇಂತಹ ಕೃತ್ಯಗ... ಬೆಂಬಲ ಕೊಟ್ಟಂತಾಗುತ್ತದೆ. ಯಾವ ಊರೇ ಉರಿ... ಹೋಗಲಿ ನಮಗೇನಾಗಬೇಕು? ನಮ್ಮದು ಕು... ಪಾಲಿಸಿ ಎಂಬುದು ಈ ರಾಜಕಾರಣಿಗಳ ಸೂತ್ರ...

-ಹಾ.ನಾ. ಪ್ರಸನ್ನಕುಮಾ...

ಚೆಡ್ಡಿಗಳ ಜೊತೆ ಸೇರಿದ್ದೀರಲ್ಲಾ ಸಾರ್



ಸರ್ಕಾರದ ವಿರುದ್ಧವೇ ತಿರುಗಿಬಿದ್ದಿರುವ ಚಂಪಾರನ್ನು ಮಾತನಾಡಿಸಲೇಬೇಕೆಂದು ಫೋನ್ ಮಾಡಿದರೆ ಸಿಕ್ಕೇಬಿಟ್ಟರು.

"ಹಲೋ ಸಾರ್, ನಾನು ಯಾಹೂ."

"ಯಾಹೂ, ಒಂದೈದು ಮಿನಿಟು ಬಿಟ್ಟು ಫೋನು ಮಾಡ್ರಲಾ."

"ಡೆಡ್‌ಲೈನಲ್ಲಿದಿನಿ ಸಾರ್."

"ಅದೇನು ಹೇಳ್ರಲಾ?"

"ಕನ್ನಡ ಸಾಹಿತ್ಯ ಪರಿಷತ್ತು ಸ್ವಾಯತ್ತ ಸಂಸ್ಥೆ ಅಂದಿದ್ದಿರಿ?"

"ಖರೇ ಹೇಳಿನಲ್ರಿ?"

"ಆದರ ಶಿಷ್ಟಾಚಾರದಲ್ಲಿ ಸರ್ಕಾರಿ ಪ್ರೊಟೋಕಾಲ್ ಅಗತ್ಯ ಇಲ್ಲ ಅಂದಿದ್ದಿರಿ?"

"ಇದೂ ಕೂಡ ಖರೆ ಐತಿ?"

"ಸಾಹಿತ್ಯ ಪರಿಷತ್ ಮತ್ತು ಸರ್ಕಾರದ ನಡುವೆ ಜಗಳ ಬಂದಿರೋದ್ರಿಂದ ಪ್ರೋಟೋಕಾಲ್ ವಿವಾದ ತಗದಿದ್ದಿರಿ?"

"ಹಾಂಗೇನು ಇಲ್ರಿ."

"ಮುಖ್ಯಮಂತ್ರಿ ಬಂದು ಉದ್ಘಾಟನೆ ಮಾಡ್ಬೇಕಿತ್ತು."

"ಆದರ ಸಮಾರೋಪನೂ ಅಷ್ಟ ಮುಖ್ಯತಿ ಖರೆ ಹೌದಿಲ್ಲೊ?"

"ನೀವು ಮಾಡಿದ ಬದಲಾವಣೆ ಇದು."

"ಇರಬವುದು, ಬದಲಾವಣೆ ಮಾಡೊ ಹಕ್ಕು ಸಾಹಿತ್ಯ ಪರಿಷತ್ತಿಗೈತಿ, ಹೊಂದಿಕಳೊದು ಬಿಡೋದು ಮಂದಿಗೆ ಸೇರಿದ್ದು."

"ಯಾಕೆ ನಿಮಗೂ ಸರ್ಕಾರಕ್ಕೂ ಸಂಘರ್ಷ ಏರ್ಪಟ್ಟದಲ್ಲ?"

"ಸಂಘರ್ಷ ಇರಬೇಕ್ರಿ. ಹೊಸ ಆಲೋಚನಿ, ಹೊಸ ಕೆಲಸಗಳು ಆಗಬೇಕಂದ್ರ, ಸಂಘರ್ಷ ಅನಿವಾರ್ಯ."

"ಆದ್ರೆ ನಿಮ್ಮ ಎದುರಾಳಿಗಳು ಇದನ್ನ ಅರ್ಥ ಮಾಡಿಕೊಳ್ಳದೆ ದ್ವೇಷ ಸಾಧಿಸಿದರೆ?"

"ಎಷ್ಟು ದಿನ ಸಾಧಸತರ?"

"ಇದ್ದಷ್ಟು ದಿನವೇ ಆಯ್ತು ಅಂತರೆ?"

"ಅಂಗೇನ?"

"ಹೌದು ಸಾರ್. ಉಷಾರು, ದೇವೇಗೌಡ್ರು ಅವರ ಮಕ್ಕಳಿಗೆ ಯಥೇಚ್ಛವಾಗಿ ದ್ವೇಷ, ಅಸೂಯೆ, ಸೇಡಿನ ರಾಜಕಾರಣಾನೆ ತುಂಬಿ ಅಧಿಕಾರವನ್ನು ಕೈಗೆ ಕೊಟ್ಟವ್ರರೆ. ಅವುರಿಗೆ ಈ ಕಲೆ, ಸಾಹಿತ್ಯ ಸಂಗೀತ, ಸಾಹಿತ್ಯ ಪರಿಷತ್ತು ಇವೆಲ್ಲಾ ಸಣ್ಣಪುಟ್ಟ ಪಾರ್ಟಿ ತರನೆ ಕಂಡು ಅವುಗಳ ವಿರುದ್ಧನೂ ಬೇಕಾದ್ರೆ ಹೋರಾಡ್ತರೆ. ಇಂತ ಟೈಮಲ್ಲಿ ಬಹಳ ಸೂಕ್ಷ್ಮವಾಗಿ ನಡಕೋಬೇಕು."

"ಅಲ್ರೀ, ಸಾಹಿತ್ಯ ಸಮ್ಮೇಳನದ ಆಮಂತ್ರಣ ಪತ್ರ ಕೊಟ್ಟದಿವಿ. ಖುದ್ದು ಹೋಗಿ ಕರದಿವಿ. ಆದ್ರು ಅವುರು ನಮ್ಮ ನಡವಳಿಕಿನ ಉದ್ಧಟತನ ಅಂದ್ರ ಬಂಡಾಯದ ಮನೋಧರ್ಮದ ನಾವು ಅವುರನ ಡುಬ್ಬದ ಮೇಲೆ ಕುಂದಿರಿಸಿಕೊಂಡು ಕರಕೊಂಡ ಬರಲೇನು?"

"ಆಗಲ್ಲ, ಸಿಟ್ಟು ಮಾಡಿಕೊಂಡ ಸಿ.ಎಮ್ಮು ಸಾಹಿತ್ಯ ಪರಿಷತ್ತಿಗೆ ಅನುದಾನ ನಿಲ್ಲಿಸಿದ್ರೆ?"

"ನಿಲ್ಲಿಸ್ಲಿ ನೋಡುನೂ."

"ಸಾಹಿತ್ಯ ಪರಿಷತ್ ಸಿಬ್ಬಂದಿಗೆ ಸಂಬಳ ಇಲ್ಲದಂಗಾದ್ರೆ?"

"ಮುಖ್ಯಮಂತ್ರಿ ನಡವಳಿಕೆ ಬಗ್ಗೆ ಜಾಹೀರಾತು ಕೊಡ್ತಿವಿ. ಐದು ಕೋಟ ಕನ್ನಡಿಗರು ಹೊರಗಡೆ ಇರೊ ಒಂದು ಕೋಟಿ, ಒಟ್ಟು ಆರು ಕೋಟಿ ಕನ್ನಡಿಗರು ತಲಾ ಒಂದು ರೂಪಾಯಿ ಕಳಿಸಿದ್ರೆ ಸಾಕು. ಅದ ರೊಕ್ಕದಲ್ಲಿ ನಾವು ಸಾಹಿತ್ಯ ಪರಿಷತ್ ನಡಿಸಿಕೊಂಡ ಹೋಕ್ಕಿವಿ. ಇನ್ನೂ ಮಜಾ ಇರತೈತಿ."

"ಅಂಗಾದ್ರೆ ಸಿಎಂ ಜೊತೆ ಸಮರಕ್ಕೆ ರಡಿಯಾಗಿದ್ದಿರಿ?"

"ಇಲ್ರಿ, ನಾ ಸಮರಕ್ಕೋಗುದಿಲ್ಲ ಸಮರ ಸಾರೋದಿಕ್ಕ ನಾವು ತಲೆ ಕೆಟ್ಟ ಚೆಡ್ಡಿಗಳೇನ್ರಿ?"



"ಚೆಡ್ಡಿಗಳ ಜೊತೆನೆ ಸೇರಿದ್ದಿರಲ್ಲಾ ಸಾರ್?"

"ಸೇರಿಲ್ಲರಿ, ಅವುರನ ಬಳಸಿಗೊಳಕತ್ತೇನಿ. ಲಾಟಿ... ಏನೈತಲ್ಲಾ ಅದು ಬದಿರಿನ ಲಾಟಿ ರೀ. ನಮ್ಮ... ಯುವರಾಜ ಬದಿರವ್ವ ಅಂತ ಹಾಡೇಳತನ ಕೇಳಿ... ರೇನ?"

"ಕೇಳಿದ್ದಿನಿ ಸಾರ್ ಕಣ್ಣೀರು ಬರಂಗೇಳತನೆ."

"ಹೌದಿಲ್ಲೊ? ಆ ಬದಿರಿನ ಲಾಟಿನ ಹಿಡಿದಿರೊ... ಮಂದಿ ಜುಟ್ಟೇನೈತಿ ಅದನ್ನ ನಾವು ಹಿಡಕೋ... ಬೇಕಾಗೈತಿ. ಅವುರ ಜುಟ್ಟು ಸಿಗತಪ್ಪಾ ಅಂದ್ರಾ... ನಾವು ಆ ಲಾಟಿ ದಿಕ್ಕನಾ ಬದಲಾಯಿಸಬವುದು."

"ಸಾರ್, ನಾಯಿಬಾಲ ನೆಟ್ಟಗೆ ಮಾಡ್ತಿನಿ ಅನ್ನೊ... ಮಾತೇಳತಾ ಯಿದ್ದಿರಿ ನೀವು, ಇದು ಸಾಧ್ಯನಾ... ಸಾರ್?"

"ಯಾಕ್ ಸಾಧ್ಯಾಗುದಿಲ್ಲಾ, ಬಾಲ ಕಟ್ ಮಾಡಿ... ಕೊಂಡಿರೊ ನಾಯಿ ನೋಡಿರಲ್ಲ ನೀವು?"

"ನೋಡಿದ್ದಿನಿ."

"ಹಾಂಗ ಇನ್ ಮುಂದ ಮಾಡ... ಬೇಕಾಗೇತಿ ನಾವು. ಮೊದಲು ನಾಯಿ... ಒಲಿಸಿಕೊಬೇಕ್ರಿ, ಒಲಿಸಿಕೊಂಡು ಆನಂತರ... ಅದರ ಅರಿವಿಗೇ ಬರದಂಗೆ ಬಾಲ... ಕತ್ತರಿಸಬೇಕಾಗೇತಿ."

"ಆ ಈಶ್ವರಪ್ಪ ಎಡೂರಪ್ಪನ ಬಾಲ... ಎಷ್ಟುಗಾತ್ರ ಅವೆ ಗೊತ್ತ ಸಾರ್ ಅವಯ್ಯಗ... ಕತ್ತರಸ್ತಿರಿ?"

"ಕತ್ತರಸುದು ಬೇಕಾಗಿಲ್ಲರಿ. ಅವೇ... ಲಡ್ಡಿಡದ ಹೋಕ್ಕವು. ಯಾವುದೇ ಲಾಟಿಗ... ಒಂದು ಆಯಸ್ಸಂತ ಇರತೈತಿ ಗುರತ್ತೇನ?"

"ಓಹೊ, ಲಾಟಿಗಳು ಆಯುಸ್ಸು... ಮುಗುಸಿ ಹಾಳಾಗದನ್ನ ಕಾಯಬೇಕಾ... ಸಾರ್?"

"ಹೌದ್ರಿ, ಲಾಟಿ ಲಡ್ಡಾಗಿ ಜನಿವಾರಕ್ಕೆ... ನೇತಾಕಿರೊ ಚೆಡ್ಡಿ ಉದರೊ ದಿನ ಬಾಳ... ದೂರಿಲ್ಲ, ಅದು ತಿಳದಾ ನಾನವುರ ಕೂಡ... ಅಡ್ಡಾಡಕತ್ತಿನಿ!"

"ಥೂತ್ತೇರಿ!!!"

-ಯಾಹೂ...

ಸಂ.ಕ. ದುರಂತ

ಹಾರ್ನಳ್ಳಿ ರಾಮಸ್ವಾಮಿಯವರ ಸೌಭಾಗ್ಯ ಮತ್ತು ಕನ್ನಡ ಪತ್ರಿಕೋದ್ಯಮದ ದೌರ್ಭಾಗ್ಯಗಳು ಒಟ್ಟೊಟ್ಟಿಗೆ ಫಲಿಸುವುದಕ್ಕೂ ಸಂಯುಕ್ತ ಕರ್ನಾಟಕದಂಥ ಮೇರು ಪತ್ರಿಕೆಯೊಂದರ ರೋಗ ಉಲ್ಬಣಿಸುವುದಕ್ಕೂ ಕಾಲ-ಗಳಿಗೆಗಳು ಕೂಡಿ ಬಂದಂತಿದೆ!

ಮಂಗಳೂರಿಗೆಂದು ಹೊಸ ಎಡಿಷನ್ನು, ದಾವಣಗೆರೆಗೆಂದು ಮತ್ತೊಂದು ಆವೃತ್ತಿ ಶುರು ಮಾಡಿಯೂ ಎರಡು ಲಕ್ಷದ ಎಂಭತ್ತು ಸಾವಿರದಷ್ಟಿದ್ದ ಸಂಯುಕ್ತ ಕರ್ನಾಟಕದ ಪ್ರಸಾರ ಸಂಖ್ಯೆ ಇದ್ದಕ್ಕಿದ್ದಂತೆ ಒಂದು ಲಕ್ಷಕ್ಕೆ ಕುಸಿಯುತ್ತದೆಯೆಂದರೆ; ಅದು ಕನ್ನಡ ಪತ್ರಿಕೋದ್ಯಮದ ದುರಂತವಲ್ಲದೇ ಮತ್ತೇನು?

ಗುರುಟೀಕ್‌ನ ಸೂರ್ಯೋದಯ, ಚೆಡ್ಡಿಗಳ ಹೊಸದಿಗಂತ, ವಿಜಯ್ ಸಂಕೇಶ್ವರ್ ಸೃಷ್ಟಿಯಾದ ಉಪಾಕಿರಣ, ಕ್ರೈಸ್ತರ ಕೊಡುಗೆಯಾದ ಜನವಾಹಿನಿಯಂಥ ಇತ್ತೀಚಿನ ದಿನಪತ್ರಿಕೆಗಳು ಕಣ್ಣು ಮುಚ್ಚಿದ್ದಕ್ಕೂ ಈಗ ಸಂಕ ಹಾಸಿಗೆ ಹಿಡಿದಿರುವುದಕ್ಕೂ ವ್ಯತ್ಯಾಸವಿದೆ. ಸಂಕ ನಿನ್ನೆ ಮೊನ್ನೆ ಹುಟ್ಟಿದ ಪತ್ರಿಕೆಯಲ್ಲ, ಅದರ ಬೇರುಗಳ ಆಳವೇ ಬೇರೆ, ಅದರ ಸಾಂಸ್ಕೃತಿಕ ಹಿನ್ನೆಲೆಯೇ ಬೇರೆ. ಸ್ವಾತಂತ್ರ ಸಂಗ್ರಾಮ ಮತ್ತು ಕರ್ನಾಟಕ ಏಕೀಕರಣ ಹೋರಾಟದ ಫಲಶ್ರುತಿಯಾದ ಸಂಯುಕ್ತ ಕರ್ನಾಟಕದಿಂದ ಶಾಮರಾಯರನ್ನು ಉಚ್ಚಾಟಿಸಿದ ಲೋಕ ಶಿಕ್ಷಣ ಟ್ರಸ್ಟ್ ಅಧ್ಯಕ್ಷ ಹಾರ್ನಳ್ಳಿ ರಾಮಸ್ವಾಮಿಯೇ ಸದ್ಯ ಇಡೀ ಸಂಕ ದುರಂತಕ್ಕೆ ಕಾರಣಪುರುಷ. ಅದೇ ಕೊರಗಿಗೆ ಬಿದ್ದು ಹಾಸಿಗೆ ಹಿಡಿದ ಶಾಮರಾಯರು ಮತ್ತೆ ಮೇಲೇಳಲೇ ಇಲ್ಲ. ಬಹುಶಃ ಅಲ್ಲಿಗೇ ಸಂಕದ ವೈಭವದ ದಿನಗಳೂ ಮುಗಿದುಹೋಗಿತ್ತೇನೊ!

ಒಂದು ಪತ್ರಿಕೆ ವೃತ್ತಿನಿಷ್ಠ ಪತ್ರಕರ್ತನ ಕೈಯಿಂದ ಅಕ್ಷರ ಹೀನರೂ, ಪುಢಾರಿಗಳೂ ಮತ್ತು ಸ್ವಾರ್ಥಿಗಳ ಕೈಸೇರಿತೆಂದರೆ ಹೇಗೆ ಅದರ ಅವನತಿ ಶುರುವಾಗುತ್ತದೆಯೆಂಬುದಕ್ಕೆ ಅಲ್ಲಿನ ಪತ್ರಕರ್ತರ ಪಾಡಿರಲಿ, ಅದರ ಸದ್ಯದ ಸರ್ಕ್ಯುಲೇಷನ್ನೇ ಸಾಕು. ಶಾಮರಾಯರ ಕಾಲಕ್ಕೆ 60 ಸಾವಿರದಷ್ಟಿದ್ದ ಸಂಕದ ಬೆಂಗಳೂರು ಆವೃತ್ತಿಯೀಗ ಮೂವತ್ತು ಸಾವಿರಕ್ಕೂ, ಬೆಂಗಳೂರು ನಗರವೊಂದರಲ್ಲೇ 25 ಸಾವಿರದಷ್ಟಿದ್ದ ಪ್ರಸಾರ ಸಂಖ್ಯೆ ಇದ್ದಕ್ಕಿದ್ದಂತೆ ಮೂರೂವರೆ ಸಾವಿರಕ್ಕೂ, 13 ಸಾವಿರಕ್ಕಿದ್ದ ಗುಲ್ಬರ್ಗಾ ಆವೃತ್ತಿ 5 ಸಾವಿರಕ್ಕೂ, 1.80 ಲಕ್ಷದಷ್ಟಿದ್ದ ಹುಬ್ಬಳ್ಳಿ ಸಂಕದ ಸರ್ಕ್ಯುಲೇಷನ್ ಏಕಾಏಕಿ 70 ಸಾವಿರಕ್ಕೂ ಕುಸಿಯುತ್ತದೆಯೆಂದರೆ; ಹಾರ್ನಹಳ್ಳಿ ಪಟಾಲಮ್ಮಿನ ಉದ್ದೇಶ ಎಂಥವರಿಗೂ ಅರ್ಥವಾಗಲೇಬೇಕು.

ಹೇಳಿಕೇಳಿ ಸಂಯುಕ್ತ ಕರ್ನಾಟಕದ ಒಡತನವಿರುವುದು ಲೋಕ ಶಿಕ್ಷಣ ಟ್ರಸ್ಟ್ ಕೈಯಲ್ಲಿ, ರಂ.ರಾ. ದಿವಾಕರರಂಥ ಮಹಾನ್ ಚೇತನಗಳು ಹುಟ್ಟುಹಾಕಿದ ಈ ಟ್ರಸ್ಟಿಗೆ ನಿಟ್ಟೂರು ಶ್ರೀನಿವಾಸರಾಯರ ನಂತರ ವಕ್ಕರಿಸಿದ್ದು ಹಾರ್ನಳ್ಳಿ ರಾಮಸ್ವಾಮಿ. ತೋರಿಕೆಗೆ ಕಾಂಗ್ರೆಸ್ ನಾಯಕರಾದರೂ ಆಳದಲ್ಲಿ ಆರೆಸ್ಸೆಸ್ ದೃಷ್ಟಿಕೋನದ ಹಾರ್ನಹಳ್ಳಿಯನ್ನು ಅಲ್ಲಿಗೆ ತಂದದ್ದೂ ಶಾಮರಾಯರೆ. ಅರಬನ ಡೇರೆ ಹೊಕ್ಕ ಒಂಟೆಯಂತೆ ಶಾಮರಾಯರನ್ನೇ ಟ್ರಸ್ಟ್ ಸೆಕ್ರೆಟರಿ ಮತ್ತು ಸಂಕದ ಸಂಪಾದಕ ಸ್ಥಾನದಿಂದ ಹಾರ್ನಳ್ಳಿ ಕಿತ್ತೊಗೆದಾಗ ಪತ್ರಿಕೆಯ ಸಂಪಾದಕತ್ವ ವಿ.ಎನ್. ಸುಬ್ಬರಾವ್‌ರ ಕೈಸೇರಿತ್ತು. ಟ್ರಸ್ಟ್ ಸೆಕ್ರೆಟರಿ ಗಾದಿಗೆ ಬಂದ ಅನಿರುದ್ಧ ದೇಸಾಯಿ ಓರ್ವ ನಿವೃತ್ತ ಐಎಎಸ್ ಅಧಿಕಾರಿಯೇ ಹೊರತು ಪತ್ರಿಕೋದ್ಯಮದ ಗಂಧಗಾಳಿ ಬಲ್ಲವರಲ್ಲ, ಇನ್ನು ಟ್ರಸ್ಟಿಗೆ ವಕ್ಕರಿಸಿದ ಆರ್.ವಿ. ದೇಶಪಾಂಡೆ ಮತ್ತು ಸರಿತಾ ಕುಸುಮಾಕರ ದೇಸಾಯಿ ಹೇಳಿಕೇಳಿ ಕಾಂಗ್ರೆಸ್ ಪುಢಾರಿಗಳು. ಆಜೀವ ಟ್ರಸ್ಟಿಗಳ ಪೈಕಿ ಹಾರ್ನಳ್ಳಿಯನ್ನು ಹೊರತುಪಡಿಸಿದರೆ ಉಳಿಯುವುದು ವಯೋವೃದ್ಧ ಕೆ.ಬಿ. ದೇಸಾಯಿ. ಅಲ್ಲಿಗೆ ಇಡೀ ಲೋಕ ಶಿಕ್ಷಣ ಟ್ರಸ್ಟ್ ನೂರಕ್ಕೆ ನೂರು ಪರ್ಸೆಂಟ್ ಚೆಡ್ಡಿ ಬ್ರಾಹ್ಮಣರ ಮತ್ತು ಪಾಖಂಡಿ ಕಾಂಗ್ರೆಸ್ಸಿಗರ ಸೊತ್ತಾಗಿ ಪತ್ರಿಕೋದ್ಯಮ ಸಂಸ್ಥೆಯೊಂದರ ಮಾಲೀಕತ್ವದಲ್ಲಿ ಪತ್ರಕರ್ತರೇ ಇಲ್ಲದಂತಾಯ್ತು,

ಮೊದಮೊದಲು ಹಾರ್ನಳ್ಳಿಯ ಬಗ್ಗೆ ಗೌರವದಿಂದಿದ್ದ ಸಂಕದ ಸಿಬ್ಬಂದಿಗೆ ದೊಡ್ಡ ಮಟ್ಟದ ಆಘಾತವಾಗಿದ್ದು ಎಚ್.ಎಸ್. ನಾರಾಯಣಮೂರ್ತಿ ಎಂಬ ಸ್ಟೆನೋಗ್ರಾಫರ್‌ನನ್ನು ಅವರು ಟ್ರಸ್ಟ್ ಸೆಕ್ರೆಟರಿ ಹುದ್ದೆಗೆ ತಂದಾಗಲೆ. ಹಾರ್ನಳ್ಳಿ ಅಬಕಾರಿ ಸುಧಾರಣಾ ಆಯೋಗದ ಅಧ್ಯಕ್ಷರಾಗಿದ್ದಾಗ ಈತ ಅವರ ವಿಧಾನಸೌಧದ ಕಚೇರಿಯಲ್ಲಿ ಯಕಶ್ಚಿತ್ ಗುಮಾಸ್ತ. ದುಡ್ಡಿದ್ದ ಸೂಟ್‌ಕೇಸ್ ಒಂದನ್ನು ಮಂಗಮಾಯ ಮಾಡಿದ್ದು, ಟ್ರಾನ್ಸ್‌ಫರ್ ಮಾಡಿಸ್ತೀನಿ ಎಂದು ಮುಂಡಾಮೋಚಿದ್ದು; ಇತ್ಯಾದಿ ಖ್ಯಾತಿಯಿದ್ದ ಈ ನಾರಾಯಣಮೂರ್ತಿಗೆ ಹಾರ್ನಳ್ಳಿಯ ಊರಿನವನು ಮತ್ತು ಜನಿವಾರ ತೊಟ್ಟವನು ಎಂಬುದನ್ನು ಬಿಟ್ಟರೆ ಬೇರೆ ಯೋಗ್ಯತೆ ಅಂತಿದ್ದದ್ದು ಚಮಚಾಗಿರಿಯಲ್ಲೆ. ಈತ ಮಸ್ಕಾ ಹೊಡೆದಿದ್ದನ್ನೇ ನಂಬಿದ ಹಾರ್ನಳ್ಳಿ ಮಹಾನ್ ಅಂಕಣಕಾರರಂತೆ

ಕೋಮುವಾರು ಯೋಜನೆ ಸಂವಿಧಾನ ಬಾಹಿರ ಕ್ರಮ

ಹಾರನಹಳ್ಳಿ ರಾಮಸ್ವಾಮಿ


ಅಂತರಂಗ ಧ್ವನಿ

'ಮುಸ್ಲಿಮರಿಗೆ ಮೊದಲು ಮಣೆ' ಎಂಬ ಪ್ರಧಾನಿಯ ಮಾತು ಒಪ್ಪತಕ್ಕಂತಹದಲ್ಲ. ಇದು ವೋಟುಗಳ ಮೇಲೆ ಕಣ್ಣಿರಿಸಿದ ಮತೀಯ ಭಾವನೆಯೇ ಹೌದು. ಜವಾಬ್ದಾರಿಯುತ ಸ್ಥಾನದಲ್ಲಿರುವವರು ಯಾರೇ ಇರಲಿ, ಹೀಗೆ ಆಶೆ-ಆಮಿಷ ಒಡ್ಡುವುದು ಅನೈತಿಕವೆನಿಸುವುದು. 'ನಾವು ಜಾತ್ಯತೀತರು' ಎಂದು ಹೇಳಿಕೊಂಡು ಅಲ್ಪಸಂಖ್ಯಾತರ ಮತಗಳನ್ನು ಕಬಳಿಸಲು ಗಾಳ ಹಾಕುವುದು ಅಸಂಗತ. ಆಡಳಿತಗಾರರ ಪ್ರೀತಿ ಇಡೀ ದೇಶಕ್ಕೆ ಸಲ್ಲಬೇಕು.


(6ನೇ ಪುಟ)

'ಸಂಯುಕ್ತ ಕರ್ನಾಟಕ'ದಲ್ಲಿ ಪ್ರಕಟಗೊಂಡ ಹಾರ್ನಳ್ಳಿಯ ವಿಚಾರಲಹರಿ


'ಅಂತರಂಗದ ಧ್ವನಿ' ಎಂಬ ಕಾಲಂ ಶುರು ಹಚ್ಚಿಕೊಂಡರೆ ಅದನ್ನೇ ನಾರಾಯಣಮೂರ್ತಿ ಸಂಕದ ಮುಖಪುಟದಲ್ಲಿ ಎಂಟೆಂಟು ಕಾಲಂ ಅಚ್ಚು ಹಾಕಿಸಿಬಿಟ್ಟ. ಬರುಬರುತ್ತ



ದೇಶಪಾಂಡೆ



ಬಾಬುಕೃಷ್ಣಮೂರ್ತಿ



ನಾರಾಯಣಮೂರ್ತಿ

ಇಡೀ ಪತ್ರಿಕೆ ಕಾಂಗ್ರೆಸ್‌ಮಯವಾಯಿತು. ತಮಾಷೆಯೆಂದರೆ ಕಾಂಗ್ರೆಸ್ ಗುಣಗಾನ ಮಾಡಿಕೊಂಡಿದ್ದೇ ಹಾರ್ನಳ್ಳಿ ತಮ್ಮ 'ಅಂತರಂಗದ ಧ್ವನಿ'ಯಲ್ಲಿ ಆರೆಸ್ಸೆಸ್‌ನ ಮುಸ್ಲಿಂ ವಿರೋಧವನ್ನು ಪ್ರತಿಪಾದಿಸತೊಡಗಿದರು.


ಇನ್ನು ಭಟ್ಟಂಗಿ ನಾ.ಮೂ. ಸುಮ್ಮನಿರುತ್ತಾನಾ? ಇದರ ವಾಸನೆ ಹಿಡಿದದ್ದೇ ಆತನಕ ಕರ್ಮವೀರಕ್ಕೆ ಸಂಪಾದಕಿಯಾಗಿದ್ದ ಸಾವಿತ್ರಿಯನ್ನು ಕಿತ್ತು ಹಾಕಿ ಆ ಜಾಗಕ್ಕೆ ಪಕ್ಕಾ ಚೆಡ್ಡಿ ಬಾಬುಕೃಷ್ಣಮೂರ್ತಿಯನ್ನು ತಂದ. ಕರ್ಮವೀರದ ಕರ್ಮವೆಂಬಂತೆ ಬಾಬು ಕೃಷ್ಣಮೂರ್ತಿ ಯಾವುದೋ ಕಾಲಕ್ಕೆ ಕೇಸರಿ-ಕಾದಂಬರಿ ಬರೆದ ಅಜೇಯ ಅನ್ನೋ ಧಾರಾವಾಹಿಯಾಗಿ ಮುದ್ರಿಸಲಾಯ್ತು.

ಇಂಥ ಮಹಾನ್ ಕೃತಿ ಕರ್ಮವೀರದಲ್ಲಿ ಧಾರಾವಾಹಿಯಾಗಿ ಬರುತ್ತೆ ಎಂದು ಪೋಸ್ಟರುಗಳನ್ನು ಮುದ್ರಿಸಿ ರಾಜ್ಯಾದ್ಯಂತ ಅಂಟಿಸಲಾಯ್ತು, ಸರ್ಕ್ಯುಲೇಷನ್ನು ಲಕ್ಷಕ್ಕೇರುತ್ತೆ ಎಂದು ಎಲ್ಲೆಂದರಲ್ಲಿ ಬಂಡಲ್ ಬಿಟ್ಟಿದ್ದ ಬಾಬುಕೃಷ್ಣಮೂರ್ತಿಗೆ ಓದುಗರು ಎಂಥಾ ಲಾತಾ ಕೊಟ್ಟರೆಂದರೆ ಆರೇ ತಿಂಗಳಲ್ಲಿ 18 ಸಾವಿರದಷ್ಟಿದ್ದ ಕರ್ಮವೀರದ ಪ್ರಸಾರ ಸಂಖ್ಯೆ ಹತ್ತು ಸಾವಿರಕ್ಕಿಳಿದಿತ್ತು!

ಹಳೇ ಚೆಡ್ಡಿ ಬಾಬುಕೃಷ್ಣಮೂರ್ತಿಯಿಂದ ಕರ್ಮವೀರಕ್ಕಿಂತಲೂ ಅಧಿಕ ಲಾಭವಾಗಿದ್ದು ರದ್ದಿ ಅಂಗಡಿಗೆ! ಇದಕ್ಕೆ ತಕ್ಕಂತೆ ಸೆಕ್ರೆಟರಿ ನಾ.ಮೂ. ಶ್ರೀಕರಭಟ್ಟ ಎಂಬ ವಿಚಿತ್ರ ಪ್ರಾಣಿಯನ್ನು ಹಿಡಿದು ಸಂಕಕ್ಕೆ ಕರೆತಂದು ಈತನಿಂದ ಮತ್ತೊಂದು ಅಂಕಣವನ್ನು ಬರೆಸಿದ. ಈತನ ಯಮ ಭಯಂಕರ ಅಂಕಣ ಓದಿದ್ದೇ ತಡ, ಅನೇಕರು ಸಂಕ ಓದುವುದನ್ನೇ ಬಿಟ್ಟುಬಿಟ್ಟರು. ಒಂದೆಡೆ ಹಾರ್ನಳ್ಳಿ ಕಾಲಮ್ಮು ಮತ್ತೊಂದೆಡೆ ಶ್ರೀಕರಭಟ್ಟನ ಕಾಲಮ್ಮುಗಳಿಂದಾಗಿ ಸಂಕದ ಇಡೀ ಗೋಡೌನು ರದ್ದಿಮಯವಾಯಿತು.


ಬರುಬರುತ್ತ ನಾರಾಯಣಮೂರ್ತಿಯ ಹುಚ್ಚಾಟ ಯಾವ ಮಟ್ಟ ಮುಟ್ಟಿತೆಂದರೆ; ಮಿಷಿನ್ ಸೆಕ್ಷನ್ನಿನ ಬಸವರಾಜ ಮತ್ತು ಸರ್ಕ್ಯುಲೇಷನ್ ಚೀಫ್ ಭೋಜ ಶೆಟ್ಟಿಯನ್ನು ತನ್ನ ಆಪ್ತ ಸಲಹೆಗಾರರನ್ನಾಗಿ ಮಾಡಿಕೊಂಡ. ಈ ಕರಟಕ-ದಮನಕ ಜೋಡಿ ದಿನ ಬೆಳಗಾಗೆದ್ದರೆ ಪ್ರಜಾವಾಣಿಯನ್ನು ಓದಿ ನೋಡಿ ಇಂತಿಂಥಾ ಸುದ್ದಿ ನಮ್ಮಲ್ಲಿ ಬಂದೇ ಇಲ್ಲ ಎಂದು ನಾ.ಮೂ. ಕಿವಿ ಕಚ್ಚತೊಡಗಿದರು. ಒಂದೊಂದು ಪತ್ರಿಕೆಗೂ ಒಂದೊಂದು ವ್ಯಕ್ತಿತ್ವವಿರುತ್ತದೆ ಎಂಬುದು ಈ ಘಡವರಿಗೆಲ್ಲಿ ಗೊತ್ತಾಗಬೇಕು? ಬರುಬರುತ್ತ ಒಬ್ಬೊಬ್ಬರೇ ವರದಿಗಾರರ ಮೇಲೆ ಸಲ್ಲದ ಚಾಡಿ ಚುಚ್ಚಲಾರಂಭಿಸಿದರು. ಸಂಕದ ಆಯಕಟ್ಟಿನ ಹುದ್ದೆಗಳಿಗೆಲ್ಲ ನಾ.ಮೂ. ಸಂಬಂಧಿಕರೇ ವಕ್ಕರಿಸಿದರು. ಹೀಗೆ ನಾ.ಮೂ. ಮೂಲಕ ಹಾಸನ ಮತ್ತು ಮಂಡ್ಯಗಳಿಗೆ ನೇಮಕಗೊಂಡ ಬಹುತೇಕ ಪುಡಿ ಪತ್ರಕರ್ತರಿಗೆ ವಶೀಲಿಬಾಜಿಯ ಹೊರತಾಗಿ ಮತ್ತೊಂದು ಗೊತ್ತಿರಲೇ ಇಲ್ಲ.

ಇದೆಲ್ಲ ಒಂದೆಡೆಯಾದರೆ ಮತ್ತೊಂದೆಡೆ ಸಂಕದ ಕೆಚ್ಚಲನ್ನೇ ಕುಯ್ಯಲು ನಾ.ಮೂ. ಅಣಿಯಾದ. ವಿನಾಕಾರಣ ಸರಿಸುಮಾರು ಒಂದು ಡಜನ್ ಹೊಸ ಕಂಪ್ಯೂಟರ್ ತಂದಿದ್ದೇ ಅದಕ್ಕೆ ನಾಲ್ಕೂವರೆ ಲಕ್ಷದ ಬಿಲ್ಲು ಜಡಿದ. ಸರ್ಕಾರವೇ ಉಚಿತವಾಗಿ ಕೊಡುವ 'ನುಡಿ' ಎಂಬ ಸಾಫ್ಟ್‌ವೇರ್‌ಗೆ ತಿಂಗಳಿಗೆ ಒಂದು ಲಕ್ಷದ ಬಿಲ್ ಹಾಕಿ ನುಂಗಲಾರಂಭಿಸಿದ. ಮಳೆನೀರು ನುಗ್ಗದಂತೆ ಸೆಲ್ಲಾರ್‌ಗೆ ಕಟ್ಟಿದ ಕಟ್ಟೆಗೆ 5 ಮೂಟೆ ಸಿಮೆಂಟ್ ಖರ್ಚಾದರೆ ಈತ 60 ಮೂಟೆಯ ಬಿಲ್ಲು ಜಡಿದ. ಅಧ್ಯಕ್ಷ ಹಾರ್ನಳ್ಳಿಯ ಎರಡೂ ಖಾಸಗಿ ಕಾರುಗಳಿಗೆ ಪೆಟ್ರೋಲ್ ಎಂದು ತಿಂಗಳೊಂದಕ್ಕೆ 30 ಸಾವಿರ ರೂಪಾಯಿಗಳನ್ನು ಸಂಕ ಭರಿಸಬೇಕಾಯಿತು. ಸಾಲದ್ದಕ್ಕೆ ಹಾರ್ನಳ್ಳಿ ಬಳಸದೇ ಕೆಟ್ಟು ನಿಂತಿದ್ದ ಹಳೇ ಫಿಯೆಟ್ ಕಾರೊಂದನ್ನು 2 ಲಕ್ಷಕ್ಕೆ ಖರೀದಿಸಿ ಅದನ್ನು ಸಂ.ಕ.ದ ಗೋಡೌನಿಗೆ ತಂದು ನಿಲ್ಲಿಸಲಾಯ್ತು.



ಶ್ಯಾಮರಾಯರು

ಶಾಮರಾಯರಿದ್ದಾಗ ಕಚೇರಿಗಷ್ಟೇ ಬಳಕೆಯಾಗುತ್ತಿದ್ದ ಒಂದು ಅಂಬಾಸಿಡರ್ ಕಾರೆಲ್ಲಿ? ಈಗ ಸೆಕ್ರೆಟರಿಗೊಂದು ಕಾರು, ಅಧ್ಯಕ್ಷರ ಎರಡು ಕಾರಿಗೂ ಪೆಟ್ರೋಲು ಜೊತೆಗೆ ಕೆಟ್ಟು ನಿಂತಿದ್ದ ಮತ್ತೊಂದು ಕಾರು ಇತ್ಯಾದಿ ವ್ಯರ್ಥ ಖರ್ಚೆಲ್ಲಿ?



ಹಾರ್ನಳ್ಳಿ ರಾಮಸ್ವಾಮಿ

ಇತ್ತ 2.80 ಲಕ್ಷದಷ್ಟಿದ್ದ ಸಂಕದ ಸರ್ಕ್ಯುಲೇಷನ್ನು ಇದ್ದಕ್ಕಿದ್ದಂತೆ ಒಂದು ಲಕ್ಷಕ್ಕೆ ಕುಸಿದರೆ, ಮತ್ತೊಂದೆಡೆ ಶಾಮರಾಯರು ಕೂಡಿಟ್ಟಿದ್ದ 5 ಕೋಟಿ ದುಡ್ಡನ್ನು ಹಾರ್ನಳ್ಳಿ ಪಟಾಲಂ ಮುಂಡಾ ಮೋಚಿತ್ತು, ಸಂಕದ ಸಿಬ್ಬಂದಿಗೆ ಕೊಡುತ್ತಿದ್ದ ಬೋನಸ್ ನಿಂತಿರಲಿಲ್ಲ, ಆದರೆ ಕಳೆದ ವರ್ಷ ಐದು ಸಾವಿರ ಕೊಡುತ್ತಿದ್ದಲ್ಲಿ ಬರೇ 1 ಸಾವಿರ ಬೋನಸ್ ಕೊಟ್ಟು ಅದನ್ನು ಈ ವರ್ಷಕ್ಕೆ ಎರಡು ಸಾವಿರಕ್ಕೇರಿಸಿದ್ದಾರಷ್ಟೇ. ಶಾಮರಾಯರ ಕಾಲಕ್ಕೆ ಸಿಗುತ್ತಿದ್ದ ಐದು ಸಾವಿರದ ಬೋನಸ್ಸನ್ನು ಕೂಡ ಹಾರ್ನಳ್ಳಿ ಪಟಾಲಮ್ಮಿಗೆ ಕೊಡಲಾಗುತ್ತಿಲ್ಲ, ಹೀಗಾಗಿ ಪತ್ರಕರ್ತರ‍್ಯಾರಿಗೂ ಬರೆಯುವ ಆಸಕ್ತಿಯಿಲ್ಲ, ನ್ಯಾಯ ಕೇಳಿದ ಯಾರಿಗೂ ಉಳಿಗಾಲವಿಲ್ಲ.


ಯಾವತ್ತು ಪ್ರಸಾರ ಸಂಖ್ಯೆ ನೆಲಕಚ್ಚಿತೋ ಸಂಕದ ದುಷ್ಟಕೂಟ ಜಾಹೀರಾತು ಕಲೆಕ್ಷನ್ನಿಗೆ ನಿಂತಿದ್ದು ಮತ್ತೊಂದು ದುರಂತ. ಕರ್ಮವೀರದ ವಿಶೇಷಾಂಕದ ನೆಪದಲ್ಲಿ ಒಮ್ಮೆ 60 ಲಕ್ಷ ರೂ.ನ ಜಾಹೀರಾತು ಸಂಗ್ರಹಿಸಿದ ನಾ.ಮೂ. ಕೂಟ ಹೊಸ ಕಟ್ಟಡದ ಉದ್ಘಾಟನೆಗೆಂದು ಮತ್ತೊಂದು ಸ್ಮರಣ ಸಂಚಿಕೆ ಹೊರಡಿಸಿ ಈ ಬಾರಿ 80 ಲಕ್ಷ ರೂ. ಸಂಗ್ರಹಿಸಿತು. ಈಗ ಏಕೀಕರಣ ವಿಶೇಷಾಂಕದ ನೆಪದಲ್ಲಿ 3 ನೇ ರೌಂಡಿನ ಜಾಹೀರಾತು ಯಜ್ಞಕ್ಕೆ ಕೈಹಾಕಿದ್ದಾರೆ ನಾರಾಯಣಮೂರ್ತಿ.

ಇದು ಪತ್ರಿಕೆಯೊಂದರ ಕೆಚ್ಚಲನ್ನೇ ಕುಯ್ದಂತೆ. ಪ್ರಸರಣ ಕಳಕೊಂಡ ಪತ್ರಿಕೆಯೊಂದು ಪದೇಪದೇ ಈ ರೀತಿ ಜಾಹೀರಾತು ಸಂಗ್ರಹಕ್ಕಿಳಿಯಿತೆಂದರೆ ಅದು ಅವನತಿಯ ಪರಮಾವಧಿಯಷ್ಟೇ. ತನ್ನ ಗಟ್ಟಿತನದಿಂದ ಪ್ರಸಾರ ಸಂಖ್ಯೆಯಿಂದ ಬದುಕಲಾಗದ ಪತ್ರಿಕೆಯೊಂದು ಹೇಗೆ ಕೊನೆಯುಸಿರೆಳೆಯುತ್ತಿದೆ ಎಂಬುದಕ್ಕೆ ಇದಕ್ಕಿಂತ ಉದಾಹರಣೆ ಬೇಕೆ?

ಸದ್ಯ ಹಾರ್ನಳ್ಳಿಗೆ ಆರುಳುಮರುಳು. ಅವರ ಪಟಾಲಮ್ಮಿಗೆ ಕೆಟ್ಟ ಹಸಿವು. ಜನರೇ ಸಾಕಿ ಬೆಳೆಸಿದ ಸಂಸ್ಥೆಯೊಂದು ಹೀಗೆ ನೆಲಕಚ್ಚಬೇಕೆ?

-ರಾ. ಸೋಮನಾಥ್

ಡೈತೋಟನ ಪೀಕಲಾಟ



ಸಂಯುಕ್ತ ಕರ್ನಾಟಕ

ಸಂಯುಕ್ತ ಕರ್ನಾಟಕವನ್ನು ಇಂಥ ಪಾತಾಳಕ್ಕಿಳಿದು ತಂದ ಕೀರ್ತಿಯ ಅರ್ಧಪಾಲಾದರೂ ಅದರ ಸಂಪಾದಕ ಈಶ್ವರ ಭಟ್ಟ ಯಾನೇ ಈಶ್ವರ ದೈತೋಟರಿಗೆ ಸಲ್ಲಬೇಕು. ಸಾಹೇಬರು ತುಂಬಾ ಬಿಜಿ. ಉದಯ ಟೀವಿಯಲ್ಲಿ ಪಂಚಾಯ್ತಿ ಕಟ್ಟೆ, ಸುರಾನಾ ಕಾಲೇಜಿನ ಲೆಕ್ಚರರ್‌ಗಿರಿ ಮತ್ತು ಅಭಿಮಾನಿಗಳ ಕುಶಲೋಪರಿ ಇತ್ಯಾದಿ ಮುಗಿಸುವ ಹೊತ್ತಿಗೆ ತಾನು ಸಂಕ ಸಂಪಾದಕ ಎಂಬುದೇ ಅವರಿಗೆ ಮರೆತಿರುತ್ತೆ.

ಸದ್ಯ ಸಂಕದ ಅಷ್ಟೂ ಸಿಬ್ಬಂದಿಗಳ ಪಾಲಿಗೆ ದೈತೋಟ ವಿಜಿಟಿಂಗ್ ಎಡಿಟರ್. ಕರಾವಳಿಯಲ್ಲಿ ಉದಯವಾಣಿಯನ್ನೇ ಮುಳುಗಿಸ್ತೀನಿ ಎಂದು ಶಪಥಗೈದರು ದೈತೋಟ. ಅದನ್ನು ಹಾರ್ನಳ್ಳಿ ನಂಬಿಬಿಟ್ಟರು. ಸಂಯುಕ್ತ ಕರ್ನಾಟಕದ ಮಂಗಳೂರು ಆವೃತ್ತಿ ಭರ್ಜರಿಯಾಗೇ ಶುರುವಾಯ್ತು. ಅದಕ್ಕೆಂದು ದೈತೋಟ ನೇಮಿಸಿದ ವರದಿಗಾರರ ಪೈಕಿ ಬಹುಸಂಖ್ಯಾತರು ಅಡಿಗ, ಚಡಗ, ಪಡಗ, ಭಟ್ಟ, ಹೆಗಡೆಗಳೇ ಇದ್ದರು. ಏನೆಲ್ಲಾ ಸರ್ಕಸ್ ಮಾಡಿ ಲಕ್ಷಗಟ್ಟಲೇ ಸುರಿದು ಆರಂಭಿಸಿದ ಮಂಗಳೂರು ಆವೃತ್ತಿಯ ಪ್ರಸಾರ ಸಂಖ್ಯೆ ಸಾವಿರವನ್ನು ದಾಟಲೇ ಇಲ್ಲ. ಹತಾಶ ಸಂಪಾದಕರು ಧರ್ಮಸ್ಥಳ ಮಂಜುನಾಥನಿಗೆ ಹರಕೆ ಹೊತ್ತು ತಲೆ ಬೋಳಿಸಿಕೊಂಡಿದ್ದೇ ಬಂತು. ಮಂಗಳೂರು ಸಂಕ ಉದ್ಧಾರವಾಗಲೇ ಇಲ್ಲ!


ಕೊನೆಗೆ ಯಾರೋ ಜ್ಯೋತಿಷಿಯೊಬ್ಬ ಸಂಯುಕ್ತ ಕರ್ನಾಟಕದ ಲಾಂಛನವೇ (logo) ಸರಿ ಇಲ್ಲ ಎಂದಿದ್ದನ್ನೇ ನಂಬಿದ ದೈತೋಟರು ಒಂದಲ್ಲ ಮೂರು ಬಾರಿ ಲೋಗೋ ಬದಲಿಸಿದರೂ ಕುಸಿತ ನಿಲ್ಲಲಿಲ್ಲ.

ದೈತೋಟ ಮಾಡಿದ ಒಂದೇ ಒಂದು ಘನ ಕಾರ್ಯ ಎಂದರೆ [illegible] ಶಾಂತಲಾ ಎಂಬ ವರದಿಗಾರ್ತಿಯ [illegible] ರೆಕ್ಕೆಪುಕ್ಕ ಕಟ್ ಮಾಡಿದ್ದು. ಈಕೆಯ [illegible] ಕರ್ನಾಟಕದ ಪ್ರಳಯಾಂತಕ ರಿಪೋರ್ಟರ್ [illegible] ಇಬ್ಬರೂ ಸೇರಿ ವಿಧಾನಸೌಧ ಪಕ್ಕದಲ್ಲೇ ಆಯಾಮ್ ಫ್ರಂ ವಿಜಯ ಕರ್ನಾಟಕ ಶಿ ಈಸ್ ಫ್ರಂ ಸಂಯುಕ್ತ ಕರ್ನಾಟಕ' ಎಂದು ಕಂಡಕಂಡ ಮಂತ್ರಿಗಳ ಛೇಂಬರಿಗೆ ನುಗ್ಗಿ ಹಾವಳಿಯಿಡುತ್ತಿದ್ದನ್ನು ಶಾಶ್ವತವಾಗಿ ನಿಂತು ಹೋಯಿತು.

ದೈತೋಟನ ಸಂಕ ಈಗ ಕೇವಲ dry ತೋಟ!

ಎಷ್ಟು ಬೇಕಷ್ಟು ಮಾತಾಡದ ಸಾಯಿತಿಗಳು ಕಲಿಲಿಲ್ಲ

ಎಳೆ ಬಿಸಿಲು ಹೋಟೆಲ್ ಜಗಲಿಗೆ ಬೀಳುತ್ತಿದ್ದಂತೆ ದುಪಟಿ ಸಡಿಲಿಸಿದ ಕಾಳಮೂವ ಮತ್ತು ಸೀರ ಚೆಕ್ಕಿನಂತೆ ಮೈಕಾಯಿಸಲು ತಯಾರಾಗುತ್ತಿರುವಾಗ, ಉಗ್ರಿ ಜುಮ್ಮಿ ಹಾಜರಾಗಿ ಬಿಸಿ ಕಾಫಿಗೆ ಆರ್ಡರ್ ಮಾಡಿದರು. ಕಾಫಿಯನ್ನು ಸೊರಗರಿಯುತ್ತ ಹೀರುತ್ತಿರಬೇಕಾದರೆ, ಕೆಂಗಣ್ಣಿನ ಪಾಟಿಸ್ಪೆ ಕಾಣಿಸಿಕೊಂಡ.



"ಇದೇನ್ಲ ಬೀದಿಲಿ ಬದ್ದಿದ್ದು ಎದ್ದು ಬಂದಂಗೆ ಕಾಣ್ತೀ" ಎಂದಳು ಜುಮ್ಮಿ.

"ಕರಟ್ ಕಣಕ್ಕ ನೀನೇಳಿದ್ದು."

"ಎಲ್ಲಿ ಬಿದ್ದು ಬಂದೆ?"

"ಶಿವಮೊಗ್ಗ ಸಾಯಿತ್ಯ ಸಮ್ಮೇಳನಕ್ಕೆ ಹೋಗಿದ್ದೆ ಕಣಕ್ಕ. ಇನ್ನು ಮ್ಯಾಲೆ ಈ ಸಾಯಿತ್ಯ ಸಮ್ಮೇಳನಕ್ಕೆ ಹೋಗದಿಲ್ಲ ಕಣಕ್ಕ."

"ನೀನೋಗದೆಯಿದ್ರೆ ಅದು ನಿಂತೋಯ್ತದೇನೊ? ಅದರ ಪಾಡಿಗದು ನ್ಯಡದೇ ನ್ಯಡಿತದಪ್ಪ" ಎಂದ ಉಗ್ರಿ.

"ನ್ಯಡಕಂಡೋಗ್ಲಿ ಕಣೊ, ಸಾಯಿತ್ಯ ಸಮ್ಮೇಳನ ಸಾಯಿತ್ಯ ಸಮ್ಮೇಳನದಂಗಾಗಿರಬೇಕು, ಅದುಬುಟ್ಟು ಚಾಮುಂಡೇಶ್ವರಿ ಚುನಾವಣೆಯಂಗಾದ್ರೆ ನಾನು ಹೋಗದಿಲ್ಲ."

"ಚುನಾವಣೆಯಂಗಾಗಕ್ಕೆ ಅಲ್ಯಾರು ಎದುರಾಬದುರಾ ಇದ್ರೊ?"

"ಬಜೆಪಿ ವರ್ಸಸ್ ಜೆಡಿಎಸ್ಸು ಕಣೊ ಉಗ್ರಿ, ಅಂಗೇ ಸುಕುಸ್ಮೆಲಿ ನೋಡಿದ್ರೆ, ಅಲ್ಲೆಲ್ಲ ಬಜೆಪಿಗಳೇ ಸೇರಿಕಂಡು ಜೆಡಿಎಸ್‌ನವ್ರು ಅದ್ರುಸಿಲ್ದಂಗಾಗಿದ್ರು"

"ಶಿವಮೊಗ್ಗದಲ್ಲಿ ಜೆ.ಡಿ. ಎಸ್ಸಿಲವಂತಲ್ಲೊ?"

"ಇಲ್ಲ, ಆದರುವೆ ಸಮಾರಂಭಕ್ಕೆ ಕುಮಾರಸ್ವಾಮಿನೆ ಕರದಿಲವಂತೆ ಇದಕೇನೇಳ್ತೀ?"

"ಕರದೆ ಅಂತ ಅವ್ರುನಂತನೆ, ಕರದಿಲ್ಲ ಅಂತ ಇವ್ರುನಂತನೆ, ಯಾರ ಮಾತ ನಂಬನ?" ಎಂದ ಉಗ್ರಿ.

"ಮುಗಿತಲ್ಲ ಬುಡತ್ತಗೆ" ಎಂದಳು ಜುಮ್ಮಿ.

"ಜನ ಭಾರಿ ಸೇರಿದ್ರ?" ಎಂದ ಸೀರ.

"ಜನ ಅಂದ್ರೆ ಚಿಗಪ್ಪ, ನಾನು ಒಂದ್ಯರಡಮೂರು ಸಾಯಿತ್ಯ ಸಮ್ಮೇಳನ ನೋಡಿದ್ದಿನಿ. ಆದ್ರು ಇಷ್ಟೊಂದು ಜನ ನೋಡಲಿಲ್ಲ."

"ಊಟ ಚೆನ್ನಾಗಿತ್ತ?"

"ಊಟದ ಕ್ಯೂ ನೋಡಿ ಹೆದ್ರಿಕಂಡು ಹೋಟ್ಯಗೋಗಿ ಚಿತ್ರಾನ್ನ ತಿಂದು ಬಂದೆ ಕಣೊ."

"ಮತ್ತೆ ಟಿವಿಲ್ಯಲ್ಲ ವಬ್ಬಟ್ಟು, ಲಾಡು, ಚಿರೋಟಿ ಮಾಡಿ ಹ್ಯಾರಾಕದ ತೋರತಿದ್ರು"

"ಅದ್ಯಲ್ಲ ಹಿಟ್ಟಿನ ಚೀಟಿ ತಗಂಡೋರಿಗೆ ಕಣೊ. ನಾನು ಹಿಟ್ಟಿನ ಚೀಟಿ ತಗಂಡಿರಲಿಲ್ಲ."

"ಹೋಗ್ಲಿ ಸಮ್ಮೇಳನ ಯಂಗಾಯ್ತು ಅದ್ನಾರ ಹೇಳು?"

"ಸಮ್ಮೇಳನ ಯಂಗಾಯ್ತು ಅಂದ್ರೆ ನಾನೇನು ಪೂರಾ ನೋಡಕೊಗ್ಲಿದ್ನೆ, ನನಿಗೆ ಬೇಕಾದ್ದ ನೋಡಿಕಂಡು ಬಂದೆ ಕಣೊ."

"ನಿನಿಗೆ ಬೇಕಾದ್ದೇನಿತ್ತಪ್ಪ ಅಲ್ಲಿ?"

"ನೋಡಕ್ಕ, ಸಮ್ಮೇಳನದ ಅಧ್ಯಕ್ಷ ಏನೇಳ್ತನೆ ಅಂತ ಕೇಳನ ಅಂತ ಹೋಗಿದ್ದೆ ಕೇಳಿಕಂಡೆ ಬಂದೆ."

"ಅಧ್ಯಕ್ಷ್ಯಾರಾಗಿದ್ರಾ?" ಎಂದ ಸೀರ.

"ನಿಸಾರಮದ್ದಂತ ಚಿಗಪ್ಪ."

"ಸಾಬರೋನೆ?"

"ಇಲ್ಲ ಕಿರುಸ್ತಾನರೋನು. ನಿಸ್ಸಾರಮದ್ ಅಂತ ಇಸ್ಯಾರೆಸರಿಟ್ಟ ಗಂಡರು ಚಿಗಪ್ಪ?"

"ಲೇ ತಲಿಯಲ್ಲ ಮಾತಾಡ ಬ್ಯಾಡ, ಇಲ್ಲಬ್ಬ ಪಕೀರಪ್ಪ ಅಂತ ಅವ್ರುನೆ. ಅವ್ರುನು ಕುರುಬರೋನು. ಇದಕೇನೇಳ್ತಿಲ?" ಎಂದು ಸೀರ ಸಿಟ್ಟಾದ.

"ಅಂಗರೆ ಸಾಬರೋನದ್ಯಕ್ಷ್ನಾಗಿದ್ನೆ?" ಎಂದಳು ಜುಮ್ಮಿ.

"ಅಧ್ಯಕ್ಷ್ನಾಗಿರಲಿಲ್ಲ ಕಣಕ್ಕ ಮಾಡಿದ್ರು."

"ಅವ್ರುನು ವಳ್ಳೊನೇನ್ಲ?"

"ಊ ಕಣಕ್ಕ, ಜೋಗದ ಸಿರಿ ಬೆಳಕಿನಲ್ಲಿ ಅಂತ ಹಾಡು ಕೇಳಿದ್ದಿಯಾ. ಅದು ಬರದೋನವ್ರುನೆಯ."

"ಪರವಾಗಿಲ್ಲ, ಸಾಬರಾದ್ರು ಚೆನ್ನಾಗಿ ಬರದವ್ರುನೆ."

"ಕವಿಯಾದೋನಿಗೆ ಜಾತಿ ಇರದಿಲ್ಲ ಕಣಕ್ಕ. ಈ ಮುಂಡೆಮಕ್ಕಳು ಅವ್ರುನು ಸಾಬಿ, ಇವ್ರುನು ಕಿರುಸ್ತಾನ ಅವ್ರುನದರೋನು, ಇವ್ರುನು ಇದರೋನು ಅಂತ ಬೇದ ಮಾಡ್ತವೆ. ಆದ್ರೆ ನಮ್ಮ ಜನ ಅವ್ರುನ್ನ ಎಷ್ಟು ಚೆನ್ನಾಗಿ ಮ್ಯರವಣಗೆ ಮಾಡಿದ್ರು ಅಂದ್ರೆ, ನಿಜವಾಗ್ಲು ಸಾಯಿತ್ಯ ಗ್ರೇಟು ಕಣಕ್ಕ. ನಾನು ಏನೇಸಾರ ಬರದು ಹಿಂಗಾಗಬೇಕಾಗಿತ್ತು ಅನ್ನುಸ್ತು"

"ನಿನಿಗೇನಾಗಬೇಕು ಅನ್ನಿಸಿಲ್ಲ ಹೇಳು. ಆ ಕಾಲದಲ್ಲಿ ಬಂಗಾರಪ್ಪನಂಗಾಗಬೇಕು ಅಂತಿದ್ದೆ. ಆದ್ಯ?"

"ಥೂ ನೀನು ತಪ್ಪು ತಿಳಕಂಡಿದ್ದಿ ಕಣಕ್ಕ. ನಾವೆ ಆಗಬೇಕು ಅಂತ ಏನುಯಿಲ್ಲ. ಯಾರಾದ್ರು ಆದರಾಯ್ತು, ನಮ್ಮ ಮಾತ ಯಾರಾದ್ರು ಆಡಿದರಾಯ್ತು. ಒಟ್ಟನಲ್ಲಿ ನಮ್ಮ ಭಾವನೆ ಎಲ್ಲಾದ್ರು ಪ್ರಕಟ ಆದರಾಯ್ತು."

"ಪರವಾಗಿಲ್ಲ, ಶಿವಮೊಗ್ಗಕ್ಕೋಗಿ ಒಸಿ ತಿಳಕಂಡು ಬಂದಿದ್ದಿ."

"ಅಲ್ಲಿ ನಾನು ವಸದಾಗಿ ತಿಳಕಳೊ ಅಂತದ್ದೇನೂ ಇರಲಿಲ್ಲ ಕಣಕ್ಕ. ಆ ನಿಸಾರ್ ಅಹಮದ್ ಏನೋ ವಸದಾಗಿ ಹೇಳತನೆ ಅಂತ ನೋಡಿದ್ರೆ, ಅವ್ರುನು ಹೆಚ್ಚುಕಮ್ಮಿ ನೂರುಪುಟ ಭಾಷಣ ಓದಿದ್ರು ನನಿಗೇನೂ ಅನ್ನಸಲಿಲ್ಲ."



"ನೂರುಪುಟ ಓದಿದನೇನೊ?"

"ಊ ಕಣೊ ಉಗ್ರಿ. ಈಗ ನಮ್ಮ ನಡುವೆ ಇರೋ ಭೀಕರವಾದ ಜ್ವಲಂತ ಸಮಸ್ಯೆ ಏನಪ್ಪ ಅಂದ್ರೆ, ಓದಿಕಂಡೋರು, ತಿಳಕಂಡೋರು ಎಷ್ಟು ಬೇಕೊ ಅ... ಮಾತಾಡ್ತಯಿಲ್ಲ ಕಣೊ, ಅದರಲ್ಲೂ ಈ ಸಾಯಿತಿಗ... ಅದ್ಯಾವತ್ತು ಬುದ್ಧಿ ಕಲಿತರೊ ಏನೋ. ಎದುರು... ನಿಂತಿರೋನಿಗೂ ಬಾಯದೆ. ಜ್ವತೆಲಿ ಕುಂತಿರೋ... ಮಾತಾಡಬೇಕು ಅನ್ನದ ಇನ್ನು ತಿಳಕಳಲಿಲ್ಲ... ಹೇಳು?"

"ಅಂಗರೆ ನಿಸ್ಸಾರ್ ಅಮದ್ ಭಾರಿ ಮಾತಾಡಿದ್..."

"ಮಾತಾಡಿದ ಅನ್ನದಕ್ಕಿಂತ, ತನ್ನ ಸುದ್ದಿನೆ ಕ್ವರದಾ... ಕಣೊ. ನಾನು ಈಗ ಮುಗುಸ್ತನೆ, ಆಗ ಮುಗು... ಅಂತ ಕಾದು ಸಾಕಾಗ್ಯದೆ."

"ಅದೇನು ಮಾತಾಡಿದ?"

"ಅವ್ರುನು ಮಾತಾಡಿದ್ದ ಪ್ರಿಂಟಾಕ್ಯವುನೆ ತ... ಗಂಡೋದು ಅತ್ತಗೆ. ಆದರೆ ನಿಜವಾಗ್ಲು ನಮ್ಮ ... ಗುರುನ ಅಪ್ರಿಸಿಯೇಟ್ ಮಾಡಬೇಕು ಕಣೊ."

"ಹಳೆ ಗುರು ಯಾರಪ್ಪ?"

"ಬಂಗಾರಿ ಕಣೊ ಉಗ್ರಿ. ಅದೆಷ್ಟು ಚ... ಸ್ಪೀಚ್ ಮಾಡಿದ ಅಂದ್ರೆ ನಿಜವಾಗ್ಲು ಅವ್ರು... ಸಾಯಿತಿ ಆಗಬೇಕಾಗಿತ್ತು ಅನ್ನುಸ್ತು."

"ಸಾಯಿತಿಯಾಗಿದ್ರೆ ಅದ್ನೂ ವಡ... ಮೂರು ಭಾಗ ಮಾಡೋನು ಕಣೊ."

"ಈಗೇನು ಭಾಗಾಗಿಲವೆ, ವಸಿ ಜನ ಅನಂತಮೂರ್ತಿ ಜ್ವತೆಲವ್ರುರೆ, ವಸಿ ಜನ ಚಂಪನಿಂದವ್ರುರೆ, ಇನ್ನೊಸಿ ಜನ ಚಿ.ಮು. ಹಿಂದವ್ರುರೆ ಗೊತ್ತೆ?"

"ಚಿ.ಮು ಅಂದ್ಯಾರಲ?" ಎಂದಳು ಜುಮ್ಮಿ.

"ಅವ್ರುನು ಚಿದಾನಂದಮೂರ್ತಿ ಅ... ಕಣಕ್ಕ. ಆಕ್ಟುವಲಿ ಅವ್ರುನೆ ಸಾಯಿತ್ಯ ಸಮ್ಮೇಳನ... ಅಧ್ಯಕ್ಷ್ನಾಗಬೇಕಾಗಿತ್ತಂತೆ. ತನ್ನ ಮಾಡಲಿಲ್ಲ... ಸಾಬಿ ಮಾಡಿದ್ರು ಅಂತ ಮುನಿಸಿಗಂ... ಮನೆಲಿದ್ದನಂತೆ."

"ಸಾಬರ ಕಂಡ್ರಾಗದಿಲವೆ ಅವ್ರುನಿಗೆ?"

"ಅಯ್ಯೋ ಸಾಬರು ಅಂದ್ರು ಸಾಕು. ನಿದ್ದೆಲಿದ್ರು ಎದ್ದು ದ್ವಣ್ಣೆ ಹುಡುಕ್ತನೆ."

"ಅದ್ಯಾಕಂಗಾದ?"

"ಆರೆಸೆಸ್‌ನೋರ ಜ್ವತೆ ಸೇರಿಕಂಡು ಅಂಗಾದ."


"ಪಾಪ" ಎಂದು ಜುಮ್ಮಿ ಲೊಚಗರಿದಳು.

"!?"

–ಬಿ. ಚಂದ್ರೇಗ...

Zero Hour ಮುನ್ನಿ

1. ಸಾಹಿತ್ಯ ಸಮ್ಮೇಳನದಲ್ಲಿ ಇಕ್ಕಿಸಿಕೊಂಡ ಎಬಿವಿಪಿಗಳ ಬಗ್ಗೆ ಒಂದು ಸಾಲು ಬರೆಯಿರಿ



a) ಚಿಕ್ಕಮಗಳೂರಲ್ಲಿ ಕುಕ್ಕರಿಸಿಕೊಂಡು, ಚಾಮುಂಡೇಶ್ವರಿಯಲ್ಲಿ ಕ್ಯಾಕರಿಸಿ ಉಗಳಿಸಿಕೊಂಡು, ಶಿವ...ಗ್ಗದಲ್ಲಿ ಇಕ್ಕಿಸಿಕೊಂಡಿವೆ
b) ಹಸಿವು, ಶೋಷಣೆ ಬಗ್ಗೆ ಮಾತಾಡುವುದೂ ಅಪರಾಧವಂತೆ ಈ ಪಾಪಿ ಪಿಂಡಗಳಿಗೆ
c) ಅಕ್ಷರ ವ್ಯಭಿಚಾರಗಳು ಸಾಹಿತ್ಯ ಸಮ್ಮೇಳನಕ್ಕೆ ಎಂಟ್ರಿ ಹೊಡೆದರೆ ಇಕ್ಕದೇ ಬಿಡೋಕಾಗುತ್ತಾ?
d) ಮರಿ ಪಾಸರರನ್ನು ನೋಡಿ ರಾಜ್ಯವೇ ನಗುತ್ತಿದೆ

2. ಡಿಸೆಂಬರ್ 23 ರಂದು ಸರ್ಕಾರಗಳು ರೈತ ದಿನಾಚರಣೆ ಮಾಡಿದವಂತೆ?



a) ರೈತರ ಆತ್ಮಹತ್ಯೆಗಳ ಸಂಖ್ಯೆ ಎಷ್ಟು ಎಂಬುದನ್ನು ತಿಳಿಯಲು ಈ ಆಚರಣೆಯೆ?
b) ಅಮೆರಿಕ ತನ್ನ ರೈತರಿಗೆ ಶೇ. 60 ರಷ್ಟು ಸಬ್ಸಿಡಿ ಕೊಡುತ್ತದೆ ಎಂಬುದನ್ನು ಈ ಗೊಡ್ಡು ಸರ್ಕಾರಗಳಿಗೆ ಹೇಳುವವರಾರು?
c) ರೈತರಿಗೇ ಗೊತ್ತಿಲ್ಲ ಈ ರೈತ ದಿನಾಚರಣೆ!
d) ವಿಶೇಷ ಆರ್ಥಿಕ ವಲಯಗಳನ್ನು ವಿಸ್ತರಿಸುವ ಹುನ್ನಾರ ಮುಚ್ಚಲು ಈ ಆಟವಷ್ಟೇ

3. "ಹಿಂದೂಗಳು ಮೂರುಮೂರು ಮಕ್ಕಳನ್ನು ಹೆತ್ತು ಮುಸ್ಲಿಂ ರಾಷ್ಟ್ರವಾಗುವುದನ್ನು ತಪ್ಪಿಸಿ....-ಸುದರ್ಶನ, ಆರ್‌ಎಸ್‌ಎಸ್
a) ಅರೆ, ಆರ್‌ಎಸ್‌ಎಸ್‌ನವರಿಗೆ ಈ ಮಾತು ಹೇಳೋದು ಅಂದ್ರೆ ಏನಿದು?
b) ಇನ್ನು ಶಾಖಾಗಳಲ್ಲಿ ಪ್ರೇಮ ಪ್ರಸಂಗಗಳು ಹೆಚ್ಚಿ 'ಫೈರ್' ಹೆಚ್ಚಲಿದೆ
c) ಅಲ್ಲಾ, ಶಾಖಾದ ಕಾರ್ಯಕರ್ತರಿಬ್ಬರು ಇದನ್ನು ಪಾಲಿಸಲು ಹೋದರೂ ಮಕ್ಕಳಾಗುತ್ತವಾ?
d) ಕರ್ಣನಂತಹ ಮಕ್ಕಳನ್ನು ಹೆರಬೇಕೇನೊ?

4. ಜೆಡಿಎಸ್‌ನಿಂದ ಗೌಡರ ವಜಾ ಆಯ್ತಂತೆ?
a) ಯಾವುದು ಜೆಡಿಎಸ್, ವಜಾ ಮಾಡೋರ್ಯಾರು?
b) ಗೌಡರ ಕುಟುಂಬದ ಪಕ್ಷ ಜೆಡಿಎಸ್ ಅದ್ಯಾವಾಗ ರಾಷ್ಟ್ರೀಯ ಪಕ್ಷ ಆಯ್ತುರೀ...
c) ಫ್ಯಾಸಿಸ್ಟ್ ಗೌಡರು 'ವಜಾ' ಅಂದೊಡನೆ 'ಜಾವ್ ಜಾವ್' ಅಂತಾರೆ
d) ಇದೇನ್ ಮಹಾ? ಚಾಮುಂಡೇಶ್ವರಿ ಮತದಾರ ಗೌಡರನ್ನು ರಾಜಕೀಯದಿಂದಲೇ ವಜಾ ಮಾಡಿಯಾಯ್ತಲ್ಲ!

5. ದೋಹಾ ಏಷ್ಯನ್ ಗೇಮ್ಸ್‌ನ ಪದಕಪಟ್ಟಿಯಲ್ಲಿ ನಮ್ಮ ಸ್ಥಾನ ನೋಡಿದಿರಾ?
a) ನೋಡೋದೇನ್ ಬಂತು, ಅದೇ ರಾಗ ಅದೇ ಹಾಡು
b) ಮತ್ತೆ ಜಿಡಿಪಿ ದರ 10 ರಷ್ಟಾಗುತ್ತಿದ್ದರೂ ಪದಕಾನೇ ಬರ್ಲಿಲ್ಲವಲ್ಲ
c) ಆರ್ಥಿಕ ಅಭಿವೃದ್ಧಿಯಲ್ಲಿ ಚೀನಾ ಜೊತೆ ಸ್ಪರ್ಧೆ ಅಂತಾರೆ!
d) ಆಟದಲ್ಲೂ ಪಾಲಿಟಿಕ್ಸ್ ಇದ್ರೆ ಇನ್ನೇನಾಗುತ್ತೆ?

ಉತ್ತರಗಳು: 1.c 2.a 3.c 4.d 5.a

ಹಲೋ ಚಂಪಾ ಮಾವ,



ಕಂಗ್ರಾಟ್ಸ್‌ರಿ.. ಬಾಳಾ ದಿನದ ಮ್ಯಾಗ ಫಸ್ಟ್ ಟೈಮ್ ಒಂದ್ ಒಳ್ಳೇ ಧೋರಣೆ ತಳೆದು ಎಲ್ರ ಮೆಚ್ಚಿಗೆ ಪಡದ್ರಿ ನೋಡ್ರಿ... ಚೆಡ್ಡಿಗಳಿಗೆ ಸರಿಯಾಗಿ ಇಕ್ಕಿದ್ರಿ... ಕ.ಸಾ.ಪ. ಮ್ಯಾಲೆ ಚೆಡ್ಡಿ ಅಜೆಂಡಾ ಹೇರಾಕ ಬಿಡಾದಿಲ್ಲ ಅಂತಾ ಬೀಜ ಮಾತು ಹೇಳಿ... ಅದರ್ಹಂಗ ನಡಕೊಂಡಿದ್ದು ಗ್ರೇಟಂದ್ರ ಗ್ರೇಟು ನೋಡ್ರಿ...

ನಮ್ ಗೌರಕ್ಕ, ಕಲ್ಕುಳಿಯವ್ರು, ಈ ಯಡ್ಡಿ... ಗ್ಯಾಂಗ್‌ಗೆ ಕ್ಯಾರೆ ಎನ್ನದೇ ಮುಂದುವರಿದಿದ್ದು ಎಲ್ಲಾ... ಸೇರಿ ಅಂತೂ ಸಾಹಿತ್ಯ ಸಮ್ಮೇಳನ ಸಕ್ಸಸ್ ಆಗಿದ್ದು... ನಮ್ಗೆಲ್ಲಾ ಖುಷಿ ತಂದೈತಿ....

ಇನ್ಮುಂದನು ನೀವ್ ಹಿಂಗ್ ಗಡಸು ಆಗಿ... ಇರ್ತೀರಿ ಅಂತಾ ಅನಕೋಂತೀವಿ.

ನಮ್ ಧಾರ್ವಾಡದವ್ರು ನೀವು ಅಂತಾ ಒಂದೀಟು ಹೆಚ್ಚಿಗೆ ಖುಷಿಯಾತು ನೋಡ್ರಿ....

–ಇತಿ ಮುನ್ನಿ...
ಧಾರವಾಡ...

ಒಂದು 'ಗಾದಿ' ಮಾತು...

(ಶಿವಮೊಗ್ಗ ಎಬಿವಿಪಿಗಳ ಕುರಿತು)
ಶಾಲೆ ಕಲಿಯಿರೋ ಮಕ್ಳಾ ಅಂದ್ರೆ,
ಮೂಲೆಗುಂಪಾಗ್ತೀವಿ ಅಂದ್ರಂತೆ....

ನಂಬುಗೆ ಉಳಿಸಬಹುದಾದ ಸಂಸ್ಥೆ ಮತ್ತು ವ್ಯವಸ್ಥೆ ಇದ್ದರೆ, ಅದು ನ್ಯಾಯಾಂಗ ಒಂದೇ-ಕೋ ಚೆನ್ನಬಸಪ್ಪ

ಗೌರವಾನ್ವಿತ ವೇಶ್ಯೆ. ಆಕೆಯ ಮುಖದ ತುಂಬ ಪತಿವ್ರತೆಯ ಕಳೆ. ಕೆಣಕಿದರೆ ರಸಿಕತೆಯ ಕಾರಂಜಿ. ಜನತಂತ್ರದಲ್ಲಿ ಆಕೆಗೆ ಅಪಾರ ನಂಬಿಕೆ. ಆದರೆ ತನ್ನಷ್ಟಕ್ಕೆ ಮಾತ್ರ ಈ ಜನತಂತ್ರ. ಇತರರು 'ಜನತಂತ್ರಿ'ಗಳಾದೊಡನೆ, ದುಡಿದು ಊರ್ಜಿತವಾದೊಡನೆ ಕೆಂಡವಾಗುತ್ತಾಳೆ ಈಕೆ. ಈಕೆಯ ಹೆಸರು ಅಮೆರಿಕಾ. ಇದನ್ನು ಆಗಾಗ ರಷ್ಯಾ ಎಂದು ಓದಿಕೊಂಡರೂ ಅಷ್ಟು ತಪ್ಪಾಗುವುದಿಲ್ಲ, ಇವೆರಡೂ ನಿಜಕ್ಕೂ ಮಹಾ ರಾಷ್ಟ್ರಗಳು. ಮಹಾವೇಶ್ಯೆಯರು.

ನಿಮಗೆ ನೆನಪಿರಬಹುದು. 1953ರಲ್ಲಿ ಸ್ವೀಡನ್ನಿನ ವಿಚಿತ್ರ ವ್ಯಕ್ತಿಯೊಬ್ಬ ವಿಶ್ವಸಂಸ್ಥೆಯ ಮಹಾ ಕಾರ್ಯದರ್ಶಿಯಾದ. ಈತನ ಹೆಸರು ಡ್ಯಾಗ್ ಹ್ಯಾಮರ್‌ಶೀಲ್ಡ್, ಸ್ವೀಡನ್ನಿನ ಶ್ರೀಮಂತ, ಸುಸಂಸ್ಕೃತ ಕುಟುಂಬದಿಂದ ಬಂದ ವ್ಯಕ್ತಿ ಈತ. ಸ್ವೀಡನ್ನಿನಲ್ಲಿ ತನ್ನ ಗೆಳೆಯರೊಂದಿಗೆ ಪುಟ್ಟಕ್ರಾಂತಿಯನ್ನು ಮಾಡಿದ್ದ, ಭಾರತ ಸಾವಿರಾರು ವರ್ಷಗಳಿಂದ ಕನಸುತ್ತಿರುವ ರಾಮರಾಜ್ಯ ಮತ್ತ ಸುಖೀ ರಾಜ್ಯವನ್ನು ಈತ ತನ್ನ ಸ್ವೀಡನ್‌ಗಾಗಿ ಕಂಡರಿಸಿದ್ದ; ಶ್ರೀಮಂತರ ವೈಭವ, ಬಡವರ ಅಸಹಾಯಕತೆ ಎರಡರಿಂದಲೂ ಮುಕ್ತವಾದ ಎಲ್ಲರ ಬದುಕಿಗೂ ನೆಮ್ಮದಿ ಚಾಲನೆ ನೀಡುವ, ನ್ಯಾಯವಂತ ಸಮಾಜವನ್ನು ನಿರ್ಮಿಸಲು ನೆರವಾಗಿದ್ದ. ಈತನ ದಕ್ಷತೆ ಮತ್ತು ಸೂಕ್ಷ್ಮಜ್ಞತೆಯನ್ನು ಅರಿತ ವಿಶ್ವ ಸಂಸ್ಥೆ ಇವನನ್ನು ಮಹಾಕಾರ್ಯದರ್ಶಿಯನ್ನಾಗಿ ಸ್ವೀಕರಿಸಿತು.


ಡ್ಯಾಗ್ ಹ್ಯಾಮರ್‌ಶೀಲ್ಡ್

ಅಂತರರಾಷ್ಟ್ರೀಯ ಮೌನದಲ್ಲಿ


ವಿಶ್ವಸಂಸ್ಥೆ ಅನ್ನುವುದು ಒಂದು ರೀತಿಯಲ್ಲಿ ಕಾಲ್ಪನಿಕವಾದದ್ದು; ಇನ್ನೊಂದು ರೀತಿಯಲ್ಲಿ ವಿವಿಧ ರಾಷ್ಟ್ರಗಳ ಹರಟೆಕಟ್ಟೆ, ಮತ್ತೊಂದು ರೀತಿಯಲ್ಲಿ ಮೇಲೆ ಕಾಣಿಸಿದ ಗೌರವಾನ್ವಿತ ವೇಶ್ಯೆಯರ ಬೇಟೆಯ ಅರಣ್ಯ. ಹ್ಯಾಮರ್‌ಶೀಲ್ಡ್ ಈ ಜಗತ್ತಿನ ರಾಷ್ಟ್ರಗಳ ಒಕ್ಕೂಟವನ್ನು ಅದನ್ನು ನಡೆಸುವ ಸಂಕೀರ್ಣ ಕ್ರಿಯೆಯನ್ನು ಕಂಡು ಹೇಳಿದ, "ಇವತ್ತಿನ ಮಾನವನ ಮುನ್ನಡೆಗಾಗಿ ಕೆಲಸ ಮಾಡುವುದು ಅನೂಹ್ಯದ ಅಂಚಿನಲ್ಲಿ ಕೆಲಸ ಮಾಡಿದಂತೆ." ಯಾಕೆಂದರೆ ಬೇರೆ ಬೇರೆ ರಾಷ್ಟ್ರಗಳಿಗೆ ಮುನ್ನಡೆ, ಅಭಿವೃದ್ಧಿಯ ಬೇರೆ ಬೇರೆ ಕಲ್ಪನೆಗಳೇ ಇವೆ. ಸೋಮಾರಿಯ ಜನಕ್ಕೆ ಅಲೆಮಾರಿತನವೇ ಸುಖವೆನ್ನಿಸಿದರೆ ಜರ್ಮನಿಯ ಜನಕ್ಕೆ ಉತ್ಪಾದನೆಯೇ ಸ್ವರ್ಗವೆನ್ನಿಸುತ್ತದೆ...

ಈ ಹ್ಯಾಮರ್‌ಶೀಲ್ಡ್ ಬಗ್ಗೆ ಬರೆಯಲು ಕಾರಣವಿದೆ. ಆಫ್ಘಾನಿಸ್ತಾನ ಪ್ರಾಣಸಂಕಟ ಅನುಭವಿಸುತ್ತಿದೆ. ದಕ್ಷಿಣ ಆಫ್ರಿಕಾ ನೋವಿನಿಂದ ಒದ್ದಾಡುತ್ತಿದೆ, ಪಾಕಿಸ್ತಾನ, ಅಂಗೋಲಗಳು ಅನಿಶ್ಚಯತೆಯಿಂದ ನಡುಗುತ್ತಿವೆ; ಪ್ಯಾಲಸ್ತೀನ್ ಹಿಂಸೆಯಿಂದ ತುಂಬಿದೆ. ಇಲ್ಲಿ ಜಾಗತಿಕ ಪಂಚಾಯಿತಿ ಕೂಡ ಸಾಧ್ಯವಾಗುತ್ತಿಲ್ಲ, ಹ್ಯಾಮರ್‌ಶೀಲ್ಡ್ ತರಹದವರು ಈಗ ಇಲ್ಲ, ಈತನ ಬಗ್ಗೆ ಎರಡು ಅಂಶ ನೆನಪಾಗುತ್ತಿದೆ. ಕವಿ, ವಿಮರ್ಶಕ, ಅರ್ಥಶಾಸ್ತ್ರಜ್ಞನಾಗಿದ್ದ ಈ ಮುತ್ಸದ್ದಿ ಹ್ಯಾಮರ್‌ಶೀಲ್ಡ್ ಒಬ್ಬಂಟಿಯಾಗಿದ್ದ; ಅವಿವಾಹಿತನಾಗಿದ್ದ; ಬುದ್ಧಿಜೀವಿಯಾಗಿದ್ದ ಈತ ನೋಡಲು ಸೌಮ್ಯವಾಗಿದ್ದರೂ ವಜ್ರ ಕಠೋರತೆ ಪಡೆದಿದ್ದ.

ಕೊರಿಯಾ ಯುದ್ಧದಲ್ಲಿ ಚೀನಾ ಅಮೆರಿಕದ ಕೆಲವರು ವಿಮಾನ ಚಾಲಕರನ್ನು ವಿಮಾನಗಳಿಂದ ಬೀಳಿಸಿ ಸೆರೆ ಹಿಡಿದಿತ್ತು, ಅಮೆರಿಕಾ ಎಂದರೆ ಬೆಂಕಿಯಾಡುತ್ತಿದ್ದ ಚೀನಾ ಈ ಬಂಧಿಗಳನ್ನು ಬಿಡಲು ನಿರಾಕರಿಸಿತು. ವಿಶ್ವಸಂಸ್ಥೆ ಒಂದು ನಿರ್ಣಯ ಅಂಗೀಕರಿಸಿ ಹ್ಯಾಮರ್‌ಶೀಲ್ಡ್ ಈ ಬಂಧಿಗಳ ಬಿಡುಗಡೆಗೆ ಪ್ರಯತ್ನಿಸಬೇಕೆಂದು ಹೇಳಿತು. ಹ್ಯಾಮರ್‌ಶೀಲ್ಡ್ ಭಾಷಣ ಮಾಡಲಿಲ್ಲ; ಚೈನಾವನ್ನು ಹೆದರಿಸಲಿಲ್ಲ, ತನ್ನ ಜಾಣತನವನ್ನೆಲ್ಲ ಬಳಸಿಕೊಂಡು ಆಗ ಚೀನಾದ ಪ್ರಧಾನಿಯಾಗಿದ್ದ ಚೌ ಎನ್-ಲಾಯ್‌ನನ್ನು ಭೇಟಿ ಮಾಡಿದ, ಚೌ ಕೂಡ ಹ್ಯಾಮರ್‌ಶೀಲ್ಡ್ ತರಹದವನೇ. ಹ್ಯಾಮರ್‌ಶೀಲ್ಡ್ ಸ್ವೀಡನ್ನಿನ ಸುಸಂಸ್ಕೃತ ಮುತ್ಸದ್ದಿಯಾಗಿದ್ದರೆ ಚೌ ಎನ್ ಚೀನಾದ ಸಂಕೀರ್ಣ, ಸುಸಂಸ್ಕೃತ ರಾಜಕಾರಣಿ, ಮಾತು ರಾಜಕೀಯವನ್ನು ಮುಟ್ಟದೆ ಮಾನವನ ಅಸ್ತಿತ್ವದ ಸುತ್ತ ತಿರುಗಿತು. ಪರಸ್ಪರ ಅನ್ಯೋನ್ಯವಾದ ಇಬ್ಬರೂ ಅಮೆರಿಕದ ವೈಮಾನಿಕರನ್ನು ಬಿಡುಗಡೆ ಮಾಡಿದರು.

ಐವತ್ತರ ದಶಕದಲ್ಲಿ ಅನೇಕ ಆಫ್ರಿಕಾದ, ಏಷ್ಯಾದ ರಾಷ್ಟ್ರಗಳು ಸ್ವಾತಂತ್ರ್ಯ ಪಡೆದು ವಿಶ್ವಸಂಸ್ಥೆಯ ಸದಸ್ಯರಾದವು, ಅಮೆರಿಕಾ, ರಷ್ಯಾಕ್ಕೆ ಇದು ನುಂಗಲಾರದ ತುತ್ತಾಯಿತು. ಏಷ್ಯಾದ ಅನಾಮಿಕ ಬಡ ರಾಜ್ಯಗಳು ಮತದ ಹಕ್ಕು ಪಡೆದು ರಷ್ಯಾ, ಅಮೆರಿಕಾಗಳಂತೆಯೇ ಹಕ್ಕು ಚಲಾಯಿಸುವುದನ್ನು ನೋಡಿ ಸಹಿಸದಾದರು. ಅವರ ಮತವನ್ನು ದುರ್ಬಲಗೊಳಿಸಲು ಈ ಬಲಿಷ್ಟ ರಾಷ್ಟ್ರಗಳು ಪ್ರಯತ್ನಿಸಿದವು. ಆಗ ಹ್ಯಾಮರ್‌ಶೀಲ್ಡ್ ಹೇಳಿದ; "ಯಾವುದೇ ರಾಷ್ಟ್ರದ ವಿಸ್ತಾರ, ಶ್ರೀಮಂತಿಕೆ, ಚರಿತ್ರೆ ಅಥವಾ ವಯಸ್ಸು ಅದರ ಪ್ರಾಮುಖ್ಯವನ್ನು ನಿರ್ಧರಿಸಕೂಡದು."

ಒಂದು ರೀತಿಯಲ್ಲಿ ಜಗತ್ತಿನ ನಾಯಕನಾಗತೊಡಗಿದ್ದ ಮಹಾ ಮೌನಿಯಾದ, ಆದರೆ ಹೃದಯದ ಆಳದಿಂದ ಧ್ವನಿ ಹೊರಡಿಸುತ್ತಿದ್ದ, ದಿಗ್ಭಮೆಗೊಂಡವನಂತೆ ಕಂಡರೂ ಚಕ್ರದ ಕೇಂದ್ರ ಬಿಂದುವಿನಂತೆ ನಿಶ್ಚಲನಾಗಿದ್ದ ಈತ ಸಂಧಾನಕ್ಕಾಗಿ ಆಫ್ರಿಕಾದ ಕಾಂಗೋ ರಾಷ್ಟ್ರಕ್ಕೆ ಹೋಗುತ್ತಿದ್ದಾಗ ಈತನ ವಿಮಾನ ವಿಧ್ವಂಸಕರ ಗುಂಡಿಗೆ ತುತ್ತಾಗಿ ಉರಿದು ಬಿತ್ತು.




ಸೆಪ್ಟಂಬರ್ 4, 1988

ಎಲ್ಲ "ಸುಗಮ"


ನಾನು ಈ ಸಭೆಗೆ ಹೋಗಿರಲಿಲ್ಲ, ಅಲ್ಲಿ ನಡೆದ ಒಂದು ಸುದ್ದಿ ಕೇಳಿ ವಿಸ್ಮಿತನಾದೆ. ಆ ಸಭೆ ಕಾವ್ಯವನ್ನು ಚರ್ಚಿಸುತ್ತಿತ್ತು, ನಮ್ಮ ಕಾವ್ಯವಾದಿ ಕಿ.ರಂ.ನಾಗರಾಜ ಚರ್ಚೆಯನ್ನು ಗಮನಿಸುತ್ತಿದ್ದ, ಕಾವ್ಯವನ್ನು ಹಾಡಿಗಾಗಿ ಬರೆಯಬೇಕೆ, ಸಂಗೀತ ರೆಡಿ ಮಾಡಿಕೊಂಡು ಪದ್ಯ ಹೊಸೆಯಬೇಕೆ ಎಂಬ ಮಾತು ಬಂತು. ಕಾವ್ಯ ಸಂಗೀತದ ಸಹಾಯದಿಂದ ಜನಪ್ರಿಯವಾಗಿರುವುದು ಎಲ್ಲರ ಮನಸ್ಸಿನಲ್ಲಿತ್ತು, ಲಕ್ಷ್ಮಣರಾವ್, ವೆಂಕಟೇಶಮೂರ್ತಿ, ದೊಡ್ಡರಂಗೇಗೌಡ ಮುಂತಾದವರು ಜನಪ್ರಿಯವಾಗಿದ್ದಾರೆ; ಅಲ್ಪಸ್ವಲ್ಪ ಹಣ ಮಾಡುತ್ತಿರಬಹುದು ಎಂದು ಹೇಳಲಾಗುತ್ತಿದೆ. ಇವರು ಬರೆದದ್ದರಲ್ಲಿ ಯಾವುದು ಕಾವ್ಯ, ಯಾವುದು ಸಂಗೀತ, ಯಾವುದು ಬರೀ ಹುಡುಗಾಟ ಎಂಬುದೂ ಅನೇಕರಿಗೆ ತಿಳಿಯುತ್ತಿಲ್ಲ,

ಈ ಚರ್ಚೆಯಲ್ಲಿ ಭಾಗವಹಿಸಿದ ಕಿ.ರಂ. ನಾಗರಾಜ್ ಹುಡುಗಾಟದ ಕವಿಗಳನ್ನು ತರಾಟೆಗೆ ತೆಗೆದುಕೊಂಡು ಬೇಂದ್ರೆ, ನರಸಿಂಹಸ್ವಾಮಿ, ಕುವೆಂಪು ಬರೆದ ಅನೇಕ ಕವನಗಳನ್ನು ಸಂಗೀತ ಜೀವದಂತೆ ಅಡಗಿತ್ತು, ಅವುಗಳನ್ನು ಹಾಡದೆ ಹೇಳಿದರೂ ಸಂಗೀತದ ಇಂಪು ಹೃದಯ ತಟ್ಟುತ್ತಿತ್ತು, ಈಗಿನ ಅನೇಕ ಜನಪ್ರಿಯ ಕ್ಯಾಸೆಟ್ ಕವಿಗಳನ್ನು ತಮ್ಮ ಕವನದಲ್ಲಿನ ವಸ್ತುಗಳಾದ ಆಗಮನ, ನಿರೀಕ್ಷೆ, ಮಿಲನ, ನದಿ, ಸಮುದ್ರ, ಆಕಾಶಗಳನ್ನು ಕೂಡ ಕೆ.ಎಸ್. ನರಸಿಂಹಸ್ವಾಮಿಯವರಿಂದ ತೆಗೆದುಕೊಂಡಿದ್ದಾರೆ. ನುಡಿಕಟ್ಟು, ಪದಸಮೂಹ ಎಲ್ಲವೂ ಅವರಿಂದ ಬಂದಿವೆ; ಹೀಗಾಗಿ ಇಲ್ಲಿರುವುದೆಲ್ಲ ಕೃತಕ ಸಮುದ್ರ, ಕಡ ಪಡೆದ ಚಂದ್ರ, ಕಾಗದದ ಪ್ರಾಣಿಗಳು.... ಕಾವ್ಯೋತ್ಸಾಹದ ಕಿ.ರಂ. ಕೇವಲ ಅಭಿಪ್ರಾಯ ಹೇಳುವವನಲ್ಲ, ಇವರ ಕವನಗಳಿಂದ ಸಾಲುಗಳು, ಪದಜೋಡಣೆ ಇತ್ಯಾದಿಗಳನ್ನೆಲ್ಲ ಪಟ್ಟಿಮಾಡಿ ಬೃಹತ್ ಲೇಖನವನ್ನೇ ತಯಾರಿಸಿದ್ದನಂತೆ...



ಕಳ್ಳನ ಹೆಂಡತಿ ಎಂದಿದ್ದರೂ.... ಅಲ್ಲವೇ?

ಮಾಗಿಯ ಚಳಿ ಗಂಡು-ಹೆಣ್ಣಿಗೆ ವರವೋ? ಶಾಪವೋ?



ಓದು ಸಿದ್ದೇಗೌಡ, ಕಬ್ಬೇಹಳ್ಳಿ
ಉಪಚುನಾವಣೆಯಲ್ಲಿ ಗೆದ್ದಿದ್ದು ಚಾಮುಂಡೇಶ್ವರಿಯೋ, ಲಂಕೇಶ್ವರಿಯೋ?
* ಖಂಡಿತವಾಗಿಯೂ..... ಚಾಮುಂಡೇಶ್ವರಿಯ ಜನ!

ಪಿ.ಅಣ್ಣಪ್ಪ ಪ್ರಭು, ಬೆಂಗಳೂರು
ಎಂ.ಪಿ. ಪ್ರಕಾಶ್‌ರನ್ನು 'ನಾಜೂಕಯ್ಯ' ಪಾತ್ರಧಾರಿಗೆ ಹೋಲಿಸಬಹುದೆ?
* ಕೋ-ಜಾ ಸರ್ಕಾರದಲ್ಲಿ ಚಪ್ಪಾಳೆ ಹೊಡೆಯುವವ ಅಂದರೂ ನಡೆಯುತ್ತೆ!

ಸಾಬಿಯಾ ಬೇಗಂ, ದೇವದುರ್ಗ
ರಾಜಕಾರಣಿಗಳನ್ನು ಜಾಹೀರಾತುಗಳಲ್ಲಿ ಬಳಸುವುದಿಲ್ಲ ವೇಕೆ?
* ಹರಾಜಿಗೂ, ಮಾರಾಟಕ್ಕೂ ವ್ಯತ್ಯಾಸ ಇರುವುದರಿಂದ.

ಆ.ರೆಡ್ಡಿ, ಬೆಂಗಳೂರು
ರಾಜಕಾರಣಿಗಳಿಗೇಕೆ ಗೌರವ ಡಾಕ್ಟರೇಟ್ ಪ್ರಶಸ್ತಿ ನೀಡುವುದಿಲ್ಲ?
* ಡಾಕ್ಟರೇಟ್ ಕೊಡೋದು ವಿಷಯ ತಜ್ಞರಿಗೆ, ಸಕಲಕಲಾವಲ್ಲಭರಿಗಲ್ಲ,

ಎ.ಎಸ್. ಸ್ವಾಮಿ, ಕೋರಾಪೂರ
ಹುಡ್ಗೀರಿಗೆ ಬ್ರಹ್ಮಚಾರಿ ಆಂಜನೇಯನಲ್ಲಿ ಭಕ್ತಿ ಹೆಚ್ಚೇಕೆ?
* ಮಂಗಗಳ ಬಗ್ಗೆ ಇರುವ ಭಯ!

ಬಸವರಾಜ್ ಬೆಸ್ತರ್, ಗುಲ್ಬರ್ಗಾ
ಮಣ್ಣಿನ ಮಗನ ಬೊಮ್ಮಗ ಮಣ್ಣು ಮುಕ್ಕಲು ಕಾರಣ?
* ಮಣ್ಣಿನ ಋಣ!

ವಿದ್ಯಾಶ್ರೀ, ಸುರಪೂರ
ಗರ್ಭಿಣಿಯಾದ ಹೆಣ್ಣು ಹುಳಿ ಮಾವಿನ ಕಾಯಿ ಇಷ್ಟಪಟ್ಟರೆ ಗಂಡು?
* ಹುಳಿ ಉಪ್ಪಿನಕಾಯಿಯನ್ನು.

ಎಚ್.ಸಿ.ಭಾಗ್ಯಕುಮಾರ್, ಬೆಂಗಳೂರು
ಮಹಿಳಾ ಕಂಡಕ್ಟರ್‌ಗಳಿರುವ ಬಸ್ಸುಗಳಿಗೇ ರಷ್ ಜಾಸ್ತಿ ಏಕೆ?
* ಅದು ನಿಮ್ಮ 'ಭಾಗ್ಯ' ಅಲ್ಲವೇ 'ಕುಮಾರ್'.

ಆ.ರಾ.ಮಂಜುನಾಥ, ಗೆದರೆ
ಹಣ ಇದ್ದೋರೆ ಗೆಲ್ತಾರೆ, ಗುಣ ಇದ್ದೋರ್‍ಯಾಕೆ ಸೋಲ್ತಾರೆ?
* ನಮ್ಮ ಪ್ರಜಾಪ್ರಭುತ್ವದ ಮರ್ಮ ಅದು.

ಕೆ.ಎಸ್. ಪ್ರೇಮ, ಚಿತ್ರದುರ್ಗ
ಶಿವಮೊಗ್ಗ ಸಾಹಿತ್ಯ ಸಮ್ಮೇಳನಕ್ಕೆ ಗೌರಿ ಹೋಗಬಾರದು ಅಂತ ಚೆಡ್ಡಿಗಳು ಗಲಾಟೆ ಮಾಡುತ್ತಿವೆಯಲ್ಲಾ?
* ಚೆಡ್ಡಿಗಳು ದೊಡ್ಡ ತಲೆನೋವು ಕಂಡ್ರಿ. ಅವರು ಗಲಾಟೆ ಮಾಡಿದ್ದಕ್ಕೆ, ಗೌರಿ ಅಲ್ಲಿಗೆ ಹೋಗಿದ್ದು.

ಡಿ.ಎಲ್. ಚಂದ್ರಿಕಾ, ಹರಪನಹಳ್ಳಿ
ಹೈಕಮಾಂಡ್ ಅನುಮತಿಗಾಗಿ ದೆಹಲಿಗೆ ದಂಡೆಯಾತ್ರೆ ಹೋಗುವ ಬಿಜೆಪಿ ಸಂಸದರನ್ನು ಏನನ್ನಬೇಕು?
* ಲಾಡಿ ಇಲ್ಲದ ಚೆಡ್ಡಿಗಳು.

ಚಾಂದಪಾಶಾ, ದೇವದುರ್ಗ
ಮುತ್ತಿಗೂ ಮತ್ತಿಗೂ ನಂಟೇನು?
* ಹೂವಿಗೂ, ಸುಗಂಧಕ್ಕೂ ಏನು ಸಂಬಂಧ ಅಂತ ಕೇಳಿದಂತಾಗಿದೆ.

ಆಶಾ ಚಂದ್ರಶೇಖರ್, ಚಿಕ್ಕಮಾವಳ್ಳಿ
ದೇವೇಗೌಡರು ನಿಮ್ಮ ಪತ್ರಿಕೆಯನ್ನು ಕೊಂಡು ಓದುತ್ತಾರಾ ಅಥವಾ ನೀವು ಉಚಿತವಾಗಿ ಕಳುಹಿಸುತ್ತೀರಾ?
* ಬೇರೆಯವರು ಕೊಂಡು ಓದದಂತೆ ತಡೆಯುತ್ತಾರಂತೆ!

ದಯಾನಂದ, ಮೈಸೂರು
ಹುಡುಗರು ಪರೀಕ್ಷೆಗಳಲ್ಲಿ ಹಿಂದೆ ಬೀಳುವುದಕ್ಕೆ ಕಾರಣವೇನು?
* ವಧು ಪರೀಕ್ಷೆಯಲ್ಲಿ ಗೆದ್ದರಾಯಿತು ಎಂಬ ಧೋರಣೆ!

ಗಾಯತ್ರಿ ಪ್ರಕಾಶ್, ಬೆಂಗಳೂರು
ದೇವೇಗೌಡರಿಗೆ ನಿಮ್ಮ ಮೇಲೆ ತುಂಬಾ ಕೋಪವಂತೆ ಯಾಕೆ?
* ಕಂಡದ್ದನ್ನು ಕಂಡಹಾಗೆ ಹೇಳಿದ್ದಕ್ಕೆ.

ಜೆ.ಸದಾಶಿವ, ಮಂಗಳೂರು
ಹುಡುಗಿಯರು ಯಾಕೆ ಶಿಳ್ಳೆ ಹಾಕುವುದಿಲ್ಲ?
* ಶಿಳ್ಳೆಯ ವಿಮರ್ಶೆಯೇ ಆ ತುಟಿಗಳಿಗೆ ಚೆಂದ.

ಕೆ.ಎಸ್. ಗೌರಿ, ಬೆಂಗಳೂರು
ಕಳ್ಳರ ಸುತ್ತ ಪೊಲೀಸರಿರುವುದಕ್ಕೂ ರಾಜಕಾರಣಿಗಳ ಸುತ್ತ ಕಳ್ಳರಿರುವುದಕ್ಕೂ ಏನು ಸಂಬಂಧ?
* ಅಲ್ರೀ, ಇವತ್ತು ಕಳ್ಳರು ಪೊಲೀಸ್ ಧರಿಸಿನಲ್ಲಿ, ಪೊಲೀಸರು ಖಾದಿಯಲ್ಲಿ, ರಾಜಕಾರಣಿಗಳು ಜೈಲಿನಲ್ಲಿರುವಾಗ ಯಾಕೆ ಪ್ರಶ್ನೆ.

ಕೆ.ಶ್ರೀನಿವಾಸ್, ಮಂಡ್ಯ
ಮಾಗಿಯ ಚಳಿ ಗಂಡು-ಹೆಣ್ಣಿಗೆ ವರವೋ? ಶಾಪವೋ?
* ಹಮ್ಮು ನೀಲು ಪ್ರಕಾರ ಆಸೆ ಚಿಗುರುವ ಕಾಲ!


ಬಹುಮಾನಿತ ಪ್ರಶ್ನೆ.

ಛೀ ತುಂಟಿ!

ಖ್ಯಾತ ಉದ್ಯಮಿಯ ಮಗ ವಿದೇಶದಿಂದ ಹಿಂದಿರುಗಿದ್ದ. ಮಗ ಮುಂದೆ ಏನಾಗಲಿದ್ದಾನೆ ಎಂದು ಅರಿಯಲು ತಂದೆ ಮಗನ ಕೊಠಡಿಯಲ್ಲಿದ್ದ ಮೇಜಿನ ಮೇಲೆ ನಾಲ್ಕು ವಸ್ತುಗಳನ್ನು ಇಟ್ಟಿದ್ದ. ಮಗ ಹಣವನ್ನು ಆಯ್ಕೆ ಮಾಡಿಕೊಂಡರೆ ಉದ್ಯಮಿ ಆಗುತ್ತಾನೆಂದೂ, ವಿಸ್ಕಿ ಆಯ್ಕೆ ಮಾಡಿಕೊಂಡಿರೆ ಕುಡುಕನಾಗುತ್ತಾನೆಂದೂ, ಬಂದೂಕನ್ನು ಆಯ್ಕೆ ಮಾಡಿಕೊಂಡರೆ ಗೂಂಡಾ ಆಗುತ್ತಾನೆಂದೂ, ಧಾರ್ಮಿಕ ಗ್ರಂಥವನ್ನು ಆಯ್ಕೆ ಮಾಡಿಕೊಂಡರೆ ಗುರು ಆಗುತ್ತಾನೆಂದೂ ಅಂದಾಜಿಸಿದ್ದ ತಂದೆ ತೆರೆಮರೆಯಲ್ಲಿ ನಿಂತು ಮಗನಿಗಾಗಿ ಕಾದ.

ಸ್ವಲ್ಪ ಹೊತ್ತಿನ ನಂತರ ಕೊಠಡಿಯನ್ನು ಪ್ರವೇಶಿಸಿದ ಮಗ, ಹಣವನ್ನು ತನ್ನ ಜೇಬಿನಲ್ಲಿ ಇಟ್ಟುಕೊಂಡು, ವಿಸ್ಕಿಯ ಬಾಟಲಿಯಿಂದ ಹೀರಿ, ಬಂದೂಕನ್ನು ಕೈಯಲ್ಲಿ ಇಟ್ಟುಕೊಂಡು ಧರ್ಮಗ್ರಂಥವನ್ನು ಬೇರೆಯವರಿಗೆ ಕೊಡಲು ಹೊರಟ.

ಇದನ್ನು ನೋಡಿದ ತಂದೆ ಕಂಗಾಲಾಗಿ "ಅಯ್ಯೋ, ನನ್ನ ಮಗ ರಾಜಕಾರಣಿ ಆಗಲಿದ್ದಾನೆ" ಎಂದು ರೋದಿಸಲಾರಂಭಿಸಿದ.



ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ವಾರದ ಪ್ರಶ್ನೆ:

ಯಡಿಯೂರಪ್ಪನವರು ಸಾಹಿತ್ಯ ಪರಿಷತ್ ಅಧ್ಯಕ್ಷರಾದಾಗ ನಡೆಯುವ ಗೋಷ್ಠಿಗಳ್ಯಾವುವು?

ಡಿಸೆಂಬರ್ 13ರ ಸಂಚಿಕೆಯ ನಮ್ಮ ಪ್ರಶ್ನೆ: ಸಿದ್ದು ಪಡೆದ 1,15,512 ಮತಗಳಿಗೂ, ಶಿವಬಸಪ್ಪ ಪಡೆದ 1,15,255 ಮತಗಳಿಗೂ ಇರುವ ವ್ಯತ್ಯಾಸವೇನು?
ನಿಮ್ಮ ಉತ್ತರ: 'Opening' ನಂಬರಲ್ಲಿ ಇಬ್ಬರೂ ಸಮನಾದರೂ 'Closing'ನಲ್ಲಿ ಸಿದ್ದುಗೆ "ದೋ-ನಂಬರ್" ಶಿವಬಸಪ್ಪನಿಗೆ "ನಂಬರ್ ಐದು ಎಕ್ಕ".
ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಎಚ್.ಸಿ. ಭಾಗ್ಯಕುಮಾರ್, ಬೆಂಗಳೂರು

ಸಂಸ್ಕೃತಿ ಹೀನರ, ಸಾಹಿತ್ಯ ದ್ವೇಷಿಗಳ, ಜನವಿರೋಧಿಗಳ ಕೃತ್ಯ.... ಖಂಡನಾರ್ಹ




ಗೌರಿ ಲಂಕೇಶ್

ಎಬಿವಿಪಿಗಳ ಸಾಂಸ್ಕೃತಿಕ ದಬ್ಬಾಳಿಕೆ (cultural fascism) ಮತ್ತು ಅದನ್ನು ಸಮರ್ಥಿಸಿ ಕುಮ್ಮಕ್ಕು ನೀಡಿದ ಉಪಮುಖ್ಯಮಂತ್ರಿ ಯಡಿಯೂರಪ್ಪನವರ ಸಾಂಸ್ಕೃತಿಕ ಸೆನ್ಸಾರ್‌ಶಿಪ್ ವಿರುದ್ಧ ನಾಡಿನಾದ್ಯಂತ ತೀವ್ರ ವಿರೋಧ ವ್ಯಕ್ತವಾಗುತ್ತಿದೆ. ಹಾಗೆಯೇ ಪ್ರಗತಿಪರರೆಲ್ಲ ಸಂಘ ಪರಿವಾರದ ಹುನ್ನಾರಗಳನ್ನು ಮೆಟ್ಟಿ ನಿಂತು ಪ್ರಜಾಪ್ರಭುತ್ವದ ಮೌಲ್ಯಗಳ ಗೌರವ ಕಾಪಾಡಿದ್ದಕ್ಕೆ ಮೆಚ್ಚುಗೆಯೂ ವ್ಯಕ್ತವಾಗುತ್ತಿದೆ.


ರಾಜ್ಯದ ಪ್ರಮುಖ ಸಾಹಿತಿಗಳು, ಪತ್ರಕರ್ತರು, ವಕೀಲರು, ಚಳವಳಿಗಾರರ ಅಭಿಪ್ರಾಯವನ್ನು ಸಂಗ್ರಹಿಸಿ ಕೊಡುತ್ತಿದ್ದೇವೆ.

ಸಂಘ ಪರಿವಾರದ ಹುನ್ನಾರಗಳಿಗೆ ಕಡಿವಾಣ ಹಾಕಿ, ಪ್ರಜಾತಾಂತ್ರಿಕ ವ್ಯವಸ್ಥೆಯನ್ನು ಎತ್ತಿ ಹಿಡಿಯುವುದು 'ಲಂಕೇಶ್'ನ ಕರ್ತವ್ಯ.... ಹಾಗೆಯೇ ಅದು ನಿಮ್ಮ ಕರ್ತವ್ಯ ಕೂಡ.....



ಕಲ್ಕುಳಿ ವಿಠಲ್ ಹೆಗಡೆ

ಗೌರಿ ಧೈರ್ಯದಿಂದ ನಮ್ಮೆಲ್ಲರನ್ನು ಪ್ರತಿನಿಧಿಸಿದ್ದಾಳೆ




ಎಬಿವಿಪಿ ಮತ್ತು ಇತರೆಲ್ಲ ಸಂಘ ಪರಿವಾರದವರ ಈ ನಿಲುವು ಅಪಾಯಕಾರಿ. ವಾಕ್ ಸ್ವಾತಂತ್ರ್ಯಕ್ಕೆ ಇಂತಹ ಅಡ್ಡಿಗಳಿರಲಿಲ್ಲ. ಇದು ತುರ್ತುಪರಿಸ್ಥಿತಿಯನ್ನು ನೆನಪಿಸುತ್ತದೆ. ಜನಪರ ಕಾಳಜಿಗಳನ್ನು ನಕ್ಸಲಿಸಂ ಎಂದು ಕರೆದು ಅಭಿಪ್ರಾಯ ಮಂಡನೆಗೆ ಅಡ್ಡಿ ಮಾಡಲೆತ್ನಿಸಿದ್ದು ಖಂಡನಾರ್ಹ. ಗೌರಿ ಧೈರ್ಯದಿಂದ ಭಾಗವಹಿಸಿ ನಮ್ಮೆಲ್ಲರ ಪರವಾಗಿ ಮಾತಾಡಿದ್ದಾಳೆ.

-ಯು.ಆರ್. ಅನಂತಮೂರ್ತಿ

ಸರ್ವಾಧಿಕಾರಿ ಮನೋಭಾವ

"ಇದು ಸಂಪೂರ್ಣ ಸರ್ವಾಧಿಕಾರಿ ಮನೋಭಾವ. ಸಾಹಿತ್ಯದ ಬಗ್ಗೆ ಎಂದೂ ಕಾಳಜಿ ಇರದ ಇವರಿಗೆ ಸಾಹಿತ್ಯ ಸಮ್ಮೇಳನದ ಬಗ್ಗೆ ಆಸಕ್ತಿ ಬಂದಿರುವುದೇ ಆತಂಕ. ಇದುವರೆಗೆ ಪುಸ್ತಕ ದಹನ ಮಾಡಿ ಗೊತ್ತಿದ್ದ ಎಬಿವಿಪಿಗಳು ಈಗ ಸಾಹಿತ್ಯದ ವೇದಿಕೆ ಹತ್ತಿ ದೈಹಿಕವಾಗಿ ತಡೆಯುವುದಕ್ಕೆ ಮುಂದಾಗಿದ್ದಾರೆ. ನಾಳೆ ಡಿ.ಎಚ್. ಶಂಕರಮೂರ್ತಿಗಳೇ ಯಾರಿಗೆ ಯಾವ ಸಾಹಿತ್ಯದ ಬಹುಮಾನ ಎಂದೂ ನಿರ್ಧರಿಸಬಹುದು. ಅದಕ್ಕೆ ಪೂರ್ವಭಾವಿಯಾಗಿ ಇದು ನಡೆದಿದೆ. ಇನ್ನು ಮುಂದೆ ಸಾಹಿತ್ಯ ಸಮ್ಮೇಳನದಲ್ಲಿ ಬೌದ್ಧಿಕ ಚರ್ಚಾಕೂಟಕ್ಕಿಂತ ಮಾಂಸಖಂಡದ ಕಸರತ್ತುಗಳಿಗೆ ಇಳಿಯಬಹುದು.



ಈ ಗೂಂಡಾ ಸಂಸ್ಕೃತಿಯನ್ನು ಖಡಾಖಂಡಿತವಾಗಿ ವಿರೋಧಿಸಲೇಬೇಕು. ಇದರ ಬಗ್ಗೆ ಸಾಹಿತ್ಯ ಪರಿಷತ್ ಮತ್ತು ಸಾರ್ವಜನಿಕರು ಒಂದು ನಿಲುವು ತೆಗೆದುಕೊಳ್ಳಲೇಬೇಕು."

-ಜೆ. ರಾಮಕೃಷ್ಣ

ಫ್ಯಾಸಿಸ್ಟರ ತಾಳ್ಮೆಗೇಡಿ ಕೃತ್ಯ

ಸಾಹಿತ್ಯ ಸಮ್ಮೇಳನಕ್ಕೆ ನುಗ್ಗಿ ದಾಂಧಲೆ ಮಾಡುವ ಮೂಲಕ ಎಬಿವಿಪಿ ನಡೆಸಿದ ಗೂಂಡಾಗಿರಿಯನ್ನು ಪ್ರತಿಯೊಬ್ಬರೂ ಖಂಡಿಸಲೇಬೇಕು. ಇದು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಾದ ಹಲ್ಲೆ, ಫ್ಯಾಸಿಸ್ಟರ ತಾಳ್ಮೆಗೇಡಿ ಕೃತ್ಯ. ಭಿನ್ನಾಭಿಪ್ರಾಯಗಳನ್ನು ವಾದ, ಚರ್ಚೆಯ ಮೂಲಕ ಬಗೆಹರಿಸಿಕೊಳ್ಳಬೇಕು. ಇಡೀ ಸಮ್ಮೇಳನವನ್ನು ಬಿಜೆಪಿ, ಸಂಘ ಪರಿವಾರಗಳು ಹೈಜಾಕ್ ಮಾಡಲು ಕಸರತ್ತು ನಡೆಸಿ ಅಪಹಾಸ್ಯಕ್ಕೀಡಾಗಿವೆ. ಜವಾಬ್ದಾರಿ ಸ್ಥಾನದಲ್ಲಿರುವ ಯಡಿಯೂರಪ್ಪನವರ ಧೋರಣೆ ಖಂಡನಾರ್ಹ.

-ವೈ. ಗುರುಶಾಂತ್,

ಸಿಪಿಎಂ ರಾಜ್ಯ ಕಾರ್ಯಕಾರಿ ಮಂಡಳಿ ಸದಸ್ಯರು

ರಾಜ್, ಕುವೆಂಪುಗೆ ಅವಮಾನ

ಸಾಹಿತ್ಯ ಸಮ್ಮೇಳನದಲ್ಲಿ ಪ್ರತಿಭಟನೆಗಳು ಸಾಮಾನ್ಯ. ಸಾಹಿತ್ಯ ಅನ್ನೋದೇ ಒಂದು ಪ್ರತಿಭಟನೆ. ಆದರೆ ಈ ಸಲ ವೇದಿಕೆಗೆ ನುಗ್ಗಿ ಅಸಹ್ಯಕರ ಕೃತ್ಯ ಎಸಗಿದ ಎಬಿವಿಪಿಗಳ ಧೋರಣೆ ಖಂಡನಾರ್ಹ.


ಡಾ. ರಾಜ್ ವೇದಿಕೆ, ಕುವೆಂಪು ವೇದಿಕೆಗಳಿಗೆ ನುಗ್ಗುವ ಮೂಲಕ ರಾಜ್ ಬೋಧನೆ, ಕುವೆಂಪು ಚಿಂತನೆಗಳಿಗೆ ಸಾಂಕೇತಿಕವಾಗಿ ವಿರೋಧ ಮಾಡಿದಂತಾಗಿದೆ. ಸಾಹಿತ್ಯ ಶಿಕ್ಷಣ ಎಲ್ಲ ತಮ್ಮ ಮೂಗಿನ ನೇರಕ್ಕಿರಬೇಕೆಂಬ ಸಂಘ ಪರಿವಾರದವರ ಈ ಧೋರಣೆ ಅನಿರೀಕ್ಷಿತವೇನಲ್ಲ.

ಆದರೆ ದೈಹಿಕವಾಗಿ ತಡೆಯಲೆತ್ನಿಸುವುದು ಅಪಾಯ... ಬೆಳವಣಿಗೆ. ಬೇರೆಲ್ಲ ಕಡೆ ಅಸ್ತಿತ್ವ ಕಳೆದುಕೊ... ಸಾಹಿತ್ಯಿಕ ವೇದಿಕೆಯಲ್ಲಿ ಅಸ್ತಿತ್ವ ತೋರಲು ಯ... ನಗೆಪಾಟಲಿಗೀಡಾಗಿದ್ದಾರೆ. ಗೌರಿ ಇರಲಿ, ಯಾರೇ ... ಎಲ್ಲರ ಅಭಿಪ್ರಾಯ ಮಂಡನೆಗೆ ನನ್ನ ಬೆಂಬಲವಿ...

-ಸಿದ್ಧನಗೌಡ ಪಾಟೀ...

ನಕ್ಸಲಿಸಂ ಬಗ್ಗೆ ಸಿಂಪಥಿ ಇದ್ದ... ಕೇಳಲು ಇವರ್ಯಾರು?

ಪ್ರಜಾಪ್ರಭುತ್ವದಲ್ಲಿ ಏನನ್ನಾದರೂ ಹೇಳಲು... ಹಕ್ಕಿದೆ. ಅವರು ನಕ್ಸಲೈಟ್ ಬೆಂಬಲಿಗರೋ ಅಲ್ಲವೊ ಅದಿಲ್ಲಿ ಪ್ರಸ್ತುತವಲ್ಲ. ಗೌರಿ, ವಿಠಲ ಇವರ್ಯಾರು ಹಿಂಸಾ ಕೃತ್ಯದಲ್ಲಿ ಭಾಗವಹಿಸಿದ ನಿದರ್ಶನಗಳಿವೆಯಾ? ನಕ್ಸಲರ ಬಗ್ಗೆ ಸಿಂಪಥಿ ಇಟ್ಟುಕೊಂಡರೆ ತಪ್ಪೇನು? ಅದನ್ನು ಪ್ರಶ್ನಿಸಲು ಈ ಸಂಘ ಪರಿವಾರಿಗಳ್ಯಾರು? ಸಂಘ ಪರಿವಾರದ... ಫ್ಯಾಸಿಸ್ಟ್ ಬುದ್ಧಿ ಹೆಚ್ಚಾಗಿದೆ. ಅವರಿಗೆ ಅವಕಾಶ ಸಿ... ಸಾಕು, ಪ್ರಚಾರಕ್ಕಾಗಿ ಏನಾದರೂ ಮಾಡುತ್ತಿದ್ದಾರೆ...




ಇಂತಹ ವೇಳೆಯಲ್ಲಿ ಗಟ್ಟಿ ನಿಲುವು ತೆಗೆದುಕೊ... ಕ.ಸಾ.ಪ. ಅಧ್ಯಕ್ಷ ಚಂಪಾ ಮತ್ತು ಪದಾಧಿಕಾರಿಗ... ಅಭಿನಂದಿಸಲೇಬೇಕು.

-ಕೆ. ಮರುಳಸಿ...

ಚರ್ಚೆ ಮಾಡಬೇಕು

ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಅಡ್ಡಿ ಮಾಡುವುದನ್ನು ಎಲ್ಲರೂ ವಿರೋಧಿಸಲೇಬೇಕು. ಪ್ರತಿಯೊಬ್ಬರಿಗೂ ಅಭಿಪ್ರಾಯ ಮಂಡನೆಗೆ ಸ್ವಾತಂತ್ರ್ಯವಿದೆ. ಚರ್ಚೆಯ ಮೂಲಕ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಳ್ಳಬೇಕು. ಅದು ಬಿಟ್ಟು ದೈಹಿಕವಾಗಿ ತಡೆಯಲು ನೋಡುವುದು ಅಕ್ಷಮ್ಯ.



-ವಿವೇಕ್ ರೈ,

ಹಂಪಿ ವಿ.ವಿ.ಉಪಕುಲಪತಿ

ಧೃತಿಗೆಟ್ಟವರ ತರಲೆ....

ಎಬಿವಿಪಿಯ ಮೂಲಭೂತ ಸಿದ್ಧಾಂತವೇ ಪ್ರಜಾಪ್ರಭುತ್ವ ವಿರೋಧಿಯಾದುದು. ಸಂಘ ಪರಿವಾರದ ಸಿದ್ಧಾಂತಗಳೇ ಅದಕ್ಕೆ ಆದರ್ಶ. ಅದೆಂದೂ ಜನಮುಖಿ ಅಲ್ಲವೇ ಅಲ್ಲ. ಅನ್ನ, ನೀರಿನ ಸಮಸ್ಯೆ ಅದಕ್ಕೆ ಮುಖ್ಯವಲ್ಲ; ಕೋಮುವಾದಿ ಸಿದ್ಧಾಂತವೇ ಅದರ ಉಸಿರು.

ವೈದಿಕಶಾಹಿಯ ಕನ್ನಡಕ ಧರಿಸಿಯೇ ಎಲ್ಲವನ್ನೂ ನೋಡುವ ಯಡಿಯೂರಪ್ಪನಂತಹ ಚಿಡ್ಡಿಗಳಿಗೆ ಅಭಿವ್ಯಕ್ತಿ ಸ್ವಾತಂತ್ರ್ಯದ ಅರ್ಥವೇ ಗೊತ್ತಿಲ್ಲ. ಸಂಘ ಪರಿವಾರದ ರಿಮೋಟ್ ಕಂಟ್ರೋಲ್‌ನಿಂದ ನಿಯಂತ್ರಿಸಲ್ಪಡುವ ಚಿಡ್ಡಿಗಳಿಂದ ಒಳ್ಳೆದನ್ನು ನಿರೀಕ್ಷಿಸೋದೆ ತಪ್ಪು. ಬಾಬಾಬುಡನ್‌ಗಿರಿ, ಚಾಮುಂಡೇಶ್ವರಿಯಲ್ಲಿ ಇಕ್ಕಿಸಿಕೊಂಡು ಧೃತಿಗೆಟ್ಟಿರುವ ಚಿಡ್ಡಿಗಳು. ಸಾಹಿತ್ಯದ ವೇದಿಕೆಗಳಲ್ಲಿ ತರಲೆ ಮಾಡುವ ಮೂಲಕ ಗೌರಿ ಲಂಕೇಶ್, ವಿಠಲ ಹೆಗಡೆಯವರಿಗೆ ಅಡ್ಡಿಪಡಿಸಲು ಯತ್ನಿಸುವ ಮೂಲಕ ತಮ್ಮ ಹತಾಶೆಯನ್ನು ಪ್ರಕಟಿಸಿವೆ. ಇದು ಚಿಡ್ಡಿಗಳ ನಾಶದ ಸಂಕೇತ.

-ಸಿ.ಎಸ್. ದ್ವಾರಕಾನಾಥ್,


ಪತ್ರಕರ್ತರು ಮತ್ತು ಅಡ್ವೊಕೇಟ್

ಹಸಿವು, ಬಡತನ, ಬದುಕು ಇತ್ಯಾದಿ ಚರ್ಚೆಗಳೇ ಇಲ್ಲದ ಸಮ್ಮೇಳನ ಸಾಹಿತ್ಯ ಸಮ್ಮೇಳನವೇ ಅಲ್ಲ. ಅಂತಹ ಚರ್ಚೆಗಳಿಗೆ ಅಡ್ಡಿಪಡಿಸಲೆತ್ನಿಸಿದವರನ್ನು ಒಕ್ಕೊರಲಿನಿಂದ ಖಂಡಿಸೋಣ.

-ಬಿ.ಎಂ. ಬಶೀರ್, ವಾರ್ತಾ ಭಾರತಿ

ಆಂತರಿಕ ಪ್ರಜಾಪ್ರಭುತ್ವ ದಮನ

49 ವರ್ಷ ಕಾಲ ವಿರೋಧ ಪಕ್ಷದಲ್ಲಿದ್ದು ಈಗ ಆಕಸ್ಮಿಕ ಅಧಿಕಾರಕ್ಕೇರಿರುವ ಬಿಜೆಪಿಗೆ ಅಭಿವ್ಯಕ್ತಿ ಸ್ವಾತಂತ್ರ್ಯ ಎಷ್ಟು ಅಮೂಲ್ಯವಾದದ್ದೆಂಬ ಅರಿವಿಲ್ಲದಿರುವುದು ದುರಂತ. 25 ವರ್ಷ ಕಾಲ ವಿರೋಧ ಪಕ್ಷದ ಮುಂದಾಳಾಗಿ ಸಮೃದ್ಧ ಅಭಿವ್ಯಕ್ತಿ ಸ್ವಾತಂತ್ರ್ಯ ಅನುಭವಿಸಿರುವ ಯಡಿಯೂರಪ್ಪ ಎಬಿವಿಪಿಗಳಿಗೆ ಕುಮ್ಮಕ್ಕು ಕೊಡುವ ಮೂಲಕ ತಮ್ಮ ಸೀಮಿತ ಮೈಂಡ್‌ಸೆಟ್ ಪ್ರದರ್ಶಿಸಿದ್ದಾರೆ. ಗುಂಡೂರಾವ್ ಕಾಲದಲ್ಲೂ ಇಂತಹ ಪರಿಸ್ಥಿತಿ ಇರಲಿಲ್ಲ. ಒಟ್ಟಿನಲ್ಲಿ ಸಂಘ ಪರಿವಾರ ಆಂತರಿಕ ಪ್ರಜಾಪ್ರಭುತ್ವದ ದಮನ ಮಾಡಲು ಯತ್ನಿಸಿದೆ.



ಪ್ರಜಾಪ್ರಭುತ್ವದಲ್ಲಿ ಹಿಂಸೆಗೆ ಅವಕಾಶಗಳೇ ಇಲ್ಲ ಎಂಬುದನ್ನು ಎಲ್ಲರೂ ಅರಿಯಬೇಕಾಗಿದೆ.

-ರವೀಂದ್ರ ರೇಶ್ಮೆ

ಗೌರವ ಸಂಪಾದಕರು, ವಿಕ್ರಾಂತ ಕರ್ನಾಟಕ

ಸಾವಿರಾರು ಜನರ ಕೊಂದವರಿಗೆಲ್ಲಿದೆ ನೈತಿಕತೆ?

ಅಭಿವ್ಯಕ್ತಿ ಸ್ವಾತಂತ್ರ್ಯ ಪ್ರತಿಪಾದನೆಗೆ, ಅಭಿಪ್ರಾಯ ಮಂಡನೆಗೆ ಸಮನಾದ ವೇದಿಕೆ ಸಾಹಿತ್ಯ ಸಮ್ಮೇಳನ. ಯಡಿಯೂರಪ್ಪ ಮತ್ತು ಗ್ಯಾಂಗ್ ಸಮ್ಮೇಳನವನ್ನು ರಾಜಕೀಕರಣಗೊಳಿಸಲು ಯತ್ನಿಸಿದ್ದು ಅಕ್ಷಮ್ಯ.

ಬಾಬ್ರಿ ಮಸೀದಿ ಕೆಡವಿ ಸಾವಿರಾರು ಜನರ ಸಾವಿಗೆ ಕಾರಣರಾದವರಿಂದ ಸಾಹಿತ್ಯಿಕ ಶಿಸ್ತು ನಿರೀಕ್ಷಿಸೋದೇ ತಪ್ಪೇನೊ? ಅಭಿಪ್ರಾಯಗಳನ್ನು ಬೇಕಾದರೆ ವಿರೋಧಿಸಲಿ,


ಅವಿವೇಕಿಗಳ ಉದ್ಧಟತನ

ದುಷ್ಟರು ಮಾತ್ರ ಈ ರೀತಿ ಮಾಡಬಲ್ಲ... ಉಪಮುಖ್ಯಮಂತ್ರಿ ಯಡಿಯೂರಪ್ಪನಿಗೆ ಡೆಮಾಕ್ರ... ಪರಿಜ್ಞಾನ ಕೂಡ ಇಲ್ಲ. ಇದು ಅವಿವೇಕಿ... ಉದ್ಧಟತನವಷ್ಟೇ. ಯಾವುದೇ ವಿಚಾರಧಾರೆಯ... ಚರ್ಚೆ ನಡೆಯಬೇಕು. ನಕ್ಸಲರೇನೂ ದೇಶದ್ರೋಹಿಗ... ಪತ್ರಿಕೋದ್ಯಮದ ಜವಾಬ್ದಾರಿ ಕುರಿತು ಮಾ... ಡೋದಕ್ಕೂ ಅಡ್ಡಿ ಮಾಡೋದಾ? ಕಳ್ಳಕಾಕರೆಲ್ಲ ವಿಧಾನ... ಸೌಧದಲ್ಲಿ ನೆರೆದಿರುವಾಗ ಇಂತಹ ಹಿಟ್ಲರ್ ... ಕೃತ್ಯಗಳು ನಡೆಯುತ್ತವೆ. ಇವರನ್ನೆಲ್ಲ ಸಹಿಸೋಕಾ... ಕ.ಸಾ.ಪ. ಅಧ್ಯಕ್ಷರ ನಿಲುವು ಸ್ವಾಗತಾರ್ಹ. ಮನುಷ್ಯರ... ವಿಚಾರಧಾರೆಯಲ್ಲಿನ ವೈವಿಧ್ಯತೆಯೇ ನಮ್ಮ ಸಂಪ... ಎಲ್ಲವೂ ತಮ್ಮ ಮೂಗಿನ ನೇರಕ್ಕೆ ಇರಬೇಕು ಎನ್ನುವ... ಪ್ರಜಾಪ್ರಭುತ್ವ ವಿರೋಧಿಗಳು. ಇಂತಹ ಗೂಂಡಾಗ... ನಾಗರಿಕ ಸಮಾಜ ಸಹಿಸಬಾರದು. ಇಂತಹ ಕೃತ್ಯಗ... ಬೆಂಬಲಿಸುವ ಮೂಲಕ ಯಡಿಯೂರಪ್ಪ ತಾ... ಉಪಮುಖ್ಯಮಂತ್ರಿ ಆಗಲು ಅನ್‌ಫಿಟ್ ಎಂ... ಸಾಬೀತು ಮಾಡಿದ್ದಾರೆ. ಇವರೆಲ್ಲರಿಗೆ ವಿವೇಕ ಬ...

-ಇಂದೂಧರ ಹೊನ್ನಾಪು...

ಸಾಂಸ್ಕೃತಿಕ ಹಲ್ಲೆ

ಎಬಿವಿಪಿಗಳ ವರ್ತನೆ ಖಂಡನೀಯ. ಕಸಾಪ ಎಲ್ಲರಿಗೂ ಸೇರಿದ ಸಾಂಸ್ಕೃತಿಕ ಸಂಘಟನೆ. ಯಾವುದೇ ವ್ಯಕ್ತಿ ಬದ್ಧತೆ, ನಿಲುವಿನ ಆಧಾರದಲ್ಲಿ ಮಾತಾಡಬಾರದು ಎನ್ನುವುದು ಫ್ಯಾಸಿಸ್ಟ್ ಮನೋಭಾವ. ರಾಜಕೀಯ ಸಿದ್ಧಾಂತ ಪ್ರತಿಪಾದನೆಗೆ ಸಮ್ಮೇಳನ ವೇದಿಕೆಯಲ್ಲ. ಮಲೆನಾಡು ಸಮ... ಪತ್ರಿಕೋದ್ಯಮ ವಿಷಯ ಕುರಿತು ಮಾತಾಡಬಾರದೆ... ಹೇಗೆ? ಕೋಮುವಾದಿಗಳೆಲ್ಲ ಸಾಹಿತ್ಯ ಸಮ್ಮೇಳನ... ಓಡಾಡಿಕೊಂಡಿದ್ದನ್ನು ಯಾರಾದರೂ ವಿರೋಧಿಸಿದ...




ಯಶಸ್ವಿಗೊಂಡ ಊಟದ ಗೋಷ್ಠಿಗಳು

ಶಿವಮೊಗ್ಗ ಸಾಹಿತ್ಯ ಸಮ್ಮೇಳನ ಹಲವು ದಾಖಲೆಗಳನ್ನು ನಿರ್ಮಿಸಿ ಅಂತ್ಯಗೊಂಡಿದೆ. ಅದರಲ್ಲಿ ಉಂಡವರ ದಾಖಲೆಯು ತನ್ನ ಹಿಂದಿನ ದಾಖಲೆಯನ್ನೂ ಮುರಿದಿದೆ. ಸಾಹಿತ್ಯ ಸಮ್ಮೇಳನ ಶಿವಮೊಗ್ಗದಲ್ಲಿ ನಡೆಯುತ್ತದೆ ಎಂಬ ಅಧಿಕೃತ ಘೋಷಣೆ ಹೊರಬಿದ್ದ ಕೆಲವು ತಿಂಗಳಲ್ಲಿ ಶುರುವಾದ ಸದಸ್ಯತ್ವ ನೊಂದಣಿ ಕಾರ್ಯ ನೋಡಿ ದಂಗುಬಡಿದ ನಾವು ಸಂಬಂಧಪಟ್ಟವರನ್ನು ಕಂಡು "ಅಲ್ರೀ ಸದಸ್ಯತ್ವದ ನೊಂದಣಿಯನ್ನು ಗಲ್ಲಿಗಲ್ಲಿಗಳಲ್ಲಿ ಒಂದು ಚಳವಳಿ ರೂಪದಲ್ಲಿ ಆರಂಭಿಸಿದ್ದೀರಲ್ಲಾ? ಈ ಜನರಿಗೆ ಅಡುಗೆ ಮಾಡಿ ಹಾಕುವವರು ಯಾರು?" ಎಂದು ಪ್ರಶ್ನಿಸಿದ್ದೆವು. ಅದಕ್ಕವರು "ಯಾವುದಕ್ಕೂ ದೇವರಿದ್ದಾನೆ" ಎಂಬಂತೆ ನೋಡಿದ್ದರು.

ಮಾಧ್ಯಮಗಳು ಸಮ್ಮೇಳನಕ್ಕೆ ಕೊಟ್ಟ ಪ್ರಚಾರದ ದೆಸೆಯಿಂದ ಶಿವಮೊಗ್ಗಕ್ಕೆ ದಾಳಿಯಿಡಲಿರುವ ಸಾಹಿತ್ಯಾಸಕ್ತರ ಮಹಾಪೂರವನ್ನು ನೆನೆದು ಎಲ್ಲರಿಗೂ ಅಚ್ಚರಿಯುಂಟಾಗಿತ್ತು. ಯಾವಾಗ ಊಟದ ಜವಾಬ್ದಾರಿಯನ್ನು ಬೆಕ್ಕಿನ ಕಲ್ಮಟದ ಸ್ವಾಮೀಜಿ ಮುರುಘ ರಾಜೇಂದ್ರರು ಹಾಗು ಆದಿಚುಂಚನಗಿರಿಯ ಪ್ರಸನ್ನನಾಥ ಸ್ವಾಮಿ ವಹಿಸಿಕೊಂಡರೊ, ಆಗ ಎಲ್ಲರಿಗೂ ಒಂದು ಸಮಾಧಾನವಾಯ್ತು.

ಜಿಲ್ಲಾಧಿಕಾರಿಗಳ ಪ್ರಧಾನ ಜವಾಬ್ದಾರಿಯಲ್ಲಿ ಶುರುವಾದ ಬೃಹತ್ ಪಾಕಶಾಲೆಯ ಕಾರ್ಯವೈಖರಿ ನೋಡಿದವರಿಗೆ ನೆಹರು ಸ್ಟೇಡಿಯಂನ ಸಾಹಿತ್ಯ ವೇದಿಕೆ ಯಾಕೋ ಸಪ್ಪೆಯಾಗಿ ಕಾಣತೊಡಗಿತು. ಅಲ್ಲಿ ರಾಶಿಬಿದ್ದ ಆಹಾರದಾಸ್ತಾನು, ಸೌದೆ, ಗ್ಯಾಸ್ ಸಿಲಿಂಡರ್‌ಗಳು, ಹಾಲು ಮೊಸರು, ಮಜ್ಜಿಗೆ ಶೇಖರಣೆ, ಹೋಳಿಗೆ, ಚಪಾತಿ, ಲಾಡು, ಮುದ್ದೆಯ ರಾಶಿ, ಕಡಾಯಿಗಟ್ಟಲೆ ಇದ್ದ ಸಾಂಬಾರು. **580** ಜನ ಅಡುಗೆ ಸಿಬ್ಬಂದಿಯ ಓಡಾಟ, **200** ಜನ ಬಾಣಸಿಗರ ನಿರಂತರ ದುಡಿಮೆ... ಇವೆಲ್ಲವನ್ನು ನೋಡುತ್ತಿದ್ದರೆ ಮನುಷ್ಯರ ಹೊಟ್ಟೆಯ ಮುಂದೆ ಅದ್ಯಾವ ಸೀಮೆ ಸಾಹಿತ್ಯ ಎನ್ನುವಂತಾಯ್ತು.



ಊಟಕ್ಕಾಗಿ ಸರದಿ ಸಾಲು

ಇದನ್ನು ತಿಳಿದೊ ಏನೋ ಸಾವಿರಾರು ಜನ ನಿಗದಿತ ವೇಳೆಗಿಂತ ಮೊದಲೇ ಊಟಕ್ಕೆ ಕ್ಯೂ ನಿಂತು, ಉಂಡು, ಒಂದಿಷ್ಟು ತಿರುಗಾಡಿ ಮತ್ತೆ ಊಟಕ್ಕೆ ಕ್ಯೂ ನಿಲ್ಲುತ್ತಿದ್ದುದನ್ನು ನೋಡಿ ದಂಗುಬಡಿಯುವಂತಾಯ್ತು. ಊಟಕ್ಕಾಗಿ ಮೈಲಿಗಟ್ಟಲೆ ಇದ್ದ ಕ್ಯೂನಲ್ಲಿ ಮಕ್ಕಳು ಮರಿಗಳು ಕೂಡ ಸದ್ದಿಲ್ಲದೆ ಸಾಲಿನಲ್ಲಿ ನಿಂತಿದ್ದನ್ನು ನೋಡಿದರೆ, ತಯಾರಾಗಿರುವ ಊಟದ ಬಗ್ಗೆ ಅವರಿಗೆ ಬಾಯಿ ನೀರು ಬರುವಂತೆ ಹೇಳಿಕೊಟ್ಟವರಾರು ಎನ್ನುವಂತಾಯ್ತು?!

ಊಟ ತಯಾರಾದ ಕೂಡಲೇ ಬಡಿಸಲು ಯೋಗ್ಯವೆಂಬ ಡಾಕ್ಟರ್ ಸರ್ಟಿಫಿಕೇಟ್‌ಗಳು ಎಲ್ಲಾ ಆಹಾರ ಪದಾರ್ಥಗಳಿಗೂ ಲಭ್ಯವಾಗುತ್ತಿತ್ತು. ಆನಂತರ ಕ್ಯೂ ನಿಂತ ಹಸಿವಿನ ಜನ ಮತ್ತು ಬಡಿಸುವವರ ಬೆವರಿನ ಶ್ರಮ ಇವನ್ನು ನೋಡುತ್ತ ನಿಂತರೆ ಸಮ್ಮೇಳನದ ಗೋಷ್ಠಿಗಳಿಗಿಂತ ಇದೇ ಅದ್ಭುತವಾಗಿ ಕಾಣತೊಡಗಿತು.

ಮೊದಲ ದಿನ ಮೂವತ್ತು ಸಾವಿರ ಜನ ತಿಂಡಿ ತಿನ್ನುವ ಮೂಲಕ ಶುರುವಾದ ಭೋಜನ ಶಾಲೆ, ಕಡೆಯ ದಿನ ಮಧ್ಯಾಹ್ನ ಊಟ ಮಾಡಿದವರು **80** ಸಾವಿರ ಸಂಖ್ಯೆಯ ಗಡಿದಾಟಿತು. ಇದರಲ್ಲಿ ಬೆಳಗ್ಗೆ ತಿಂಡಿ **30** ರಿಂದ **40** ಸಾವಿರ ಜನ ಮತ್ತು ರಾತ್ರಿ ಊಟ ಮಾಡಿದ **50** ಸಾವಿರ ಜನ ಒಟ್ಟು ಸೇರಿಸಿದರೆ, ಕಡೆ ದಿನ ಉಂಡವರು ಒಂದು ಲಕ್ಷದ ಎಪ್ಪತ್ತು ಸಾವಿರ ಮಂದಿ. ಕಡೆದಿನ ಮಾಡಿದ್ದ **40** ಸಾವಿರ ಮುದ್ದೆ ಕಣ್ಮುಚ್ಚಿ ಬಿಡುವುದರಲ್ಲಿ ಉಗ್ರ ಸಾಹಿತ್ಯಾಸಕ್ತರ ಉದರ ಸೇರಿದವು ಎಂದರೆ ಇನ್ನು ಉಳಿದ ತಿಂಡಿ ಪದಾರ್ಥ ಖರ್ಚಾದ ವೇಗವನ್ನು ನೀವೇ ಊಹಿಸಬಹುದು.

ಏಕಕಾಲದಲ್ಲಿ ಸಮಾರೋಪ ಸಮಾರಂಭದ ಕಡೆ ಹರಿಯುತ್ತಿರುವ ಜನಸಂಖ್ಯೆಯ ಮೂರು ಪಟ್ಟು ಜನ ಪಾಕಶಾಲೆ ಕಡೆಯ ಪೆಂಡಾಲ ಕಡೆ ನುಗ್ಗುತ್ತಿದ್ದರು. ಆಗ ಎದುರುಬದುರ ಸಿಕ್ಕ ಜನರಲ್ಲಿ ಪಾಕಶಾಲೆ ಕಡೆ ಹರಿಯುತ್ತಿದ್ದವರ ಫೋರ್ಸ್ ಜಾಸ್ತಿಯಿದ್ದ ಕಾರಣಕ್ಕೆ, ಸಮಾರಂಭದ ಕಡೆ ಹೊರಟವರು ತಡವಾಗಿ ತಲುಪುವಂತಾಗುತ್ತಿತ್ತು. ಇದರಲ್ಲಿ ನಿರಾತಂಕವಾಗಿ ಊಟ ಮಾಡಿದವರೆಂದರೆ ವಿಐಪಿಗಳು. ಮೂರು ಸಾವಿರ ಜನ ವಿಐಪಿಗಳಿಗೆ ಬೇರೆಯದೇ ವ್ಯವಸ್ಥೆಯಿದ್ದಿದ್ದರಿಂದ ಅಲ್ಲೇನೋ ವಿಶೇಷವಾದ ಭಕ್ಷ್ಯ ಭೋಜನಗಳಿವೆ ಎಂದು ನುಗ್ಗಿದರೆ ಅಲ್ಲೂ ಅದೇ ಇತ್ತು.

ಈ ಸಾಹಿತ್ಯ ಸಮ್ಮೇಳನ ನಡೆಸಿದವರಲ್ಲಿ ಸಾಹಿತ್ಯ ಗೋಷ್ಠಿಗಳು, ಸಂಗೀತ ಕಛೇರಿಗಳು, ಇತ್ಯಾದಿ ನಿರಾತಂಕವಾಗಿದ್ದ ಜನರ ವಿಭಾಗಗಳೆಲ್ಲಾ ಸಾವಧಾನವಾಗಿ ಸುಖವಾಗಿಯೇ ನಡೆಯುತ್ತಿದ್ದರೆ, ಜನರಿಗೆ ಊಟವಿಕ್ಕುವ ಜವಾಬ್ದಾರಿ ಹೊತ್ತವರು ಎಲ್ಲರೂ ಆತಂಕದಲ್ಲಿದ್ದರು. ಎಲ್ಲರದೂ ಊಟವಾಯ್ತು ಎಂದಾಗ ನಿರುಮ್ಮಳವಾಗಿ ಉಸಿರುಬಿಡುತ್ತಿದ್ದರು.

ಇಂತಹ ಬೃಹತ್ ದಾಸೋಹದ ಶ್ರಮಿಕರ ಪಟ್ಟಿ ದೊಡ್ಡದಿದೆ. ಅಡುಗೆ ಕಂಟ್ರಾಕ್ಟರ್ ಸ್ವಾಮಿ, ಎಲ್ಲ ನಿರ್ವಹಣೆಯ ಪ್ರಭುಸ್ವಾಮಿ, ಎಡ್‌ವರ್ಡ್ ಪಿಂಟೊ, ಹೆಗಡೆ, ಚಾಲುಕ್ಯ ಸೂರಿ, ರಮೇಶ್ ಶಾಸ್ತ್ರಿ, ನೀರು ಸರಬರಾಜಿನ ಓಂ ಸಾಯಿಸಂಸ್ಥೆ, ಪೊಲೀಸರು, ನಗರಸಭೆ ಕಾರ್ಮಿಕರು, ಕಮೀಷನರ್, ಫುಡ್ ಅಸಿಸ್ಟೆಂಟ್ ಶಿವಣ್ಣ, ರೈತ ಮುಖಂಡ ಕೆ.ಟಿ. ಗಂಗಾಧರ, ಇವರೆಲ್ಲಾ ನಡೆಸಿಕೊಟ್ಟ ದಾಸೋಹದ ಗೋಷ್ಠಿಗಳ ಎದುರು ಇನ್ನಾವ ಗೋಷ್ಠಿಗಳನ್ನು ಕುರಿತು ಯಾಕೋ ಬರೆಯಲು ಮನಸ್ಸಾಗಲಿಲ್ಲ. ಬಹುಶಃ ನಮ್ಮ ಕನ್ನಡ ಸಾಹಿತ್ಯ ಗಂಭೀರ ಸ್ಥಿತಿಯ ಬಿಕ್ಕಟ್ಟನ್ನು ಎದುರಿಸುತ್ತಿರಬಹುದು.

-ವರದಿಗಾರ

ಇದು ಅಮುಕ್ತ ಸಾಂಸ್ಕೃತಿಕ ವಾತಾವರಣವನ್ನು ಕನ್ನಡಿಗರ ಮುಂದೆ ಇಡುವ ಮುನ್ಸೂಚನೆ. ಇದೊಂದು ಸಾಂಸ್ಕೃತಿಕ ಹಲ್ಲೆ, ಪ್ರಗತಿಪರರು, ಪ್ರಜಾಪ್ರಭುತ್ವವಾದಿಗಳೆಲ್ಲ ಸಂಘ ಪರಿವಾರಿಗಳ ಈ ನಿಲುವನ್ನು ಖಂಡಿಸಲೇ ಬೇಕಾಗಿದೆ.

-ಬಂಜಗೆರೆ ಜಯಪ್ರಕಾಶ್

ಪ್ರಜಾಪ್ರಭುತ್ವದ ಪಾಠ ಕಲಿಸಬೇಕು

ಯಾರು ಮಾತನಾಡಬೇಕು ಎಂದು ನಿರ್ಧರಿಸಲು ಯಡಿಯೂರಪ್ಪರಿಗೆ ಯಾವ ಅಧಿಕಾರವಿದೆ? ಪ್ರಜಾವಾಣಿಯ ವರದಿ ಓದಿ ಕೋಪ ಉಕ್ಕಿ ಬಂತು. ಕ.ಸಾ.ಪ. ಒಂದು ಸ್ವಾಯತ್ತ ಸಂಸ್ಥೆ. ಕ.ಸಾ.ಪ.ವನ್ನು ನಿಯಂತ್ರಿಸಲು ಇವರ್ಯಾರು? ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಬೆಲೆ ಇಲ್ಲವೆ? ಬೇರೆಯವರ ಭಾಗವಹಿಸುವಿಕೆ ರದ್ದು ಮಾಡಿ ಅನ್ನೋಕೆ ಇವರಿಗೆ ಯಾವ ಅಧಿಕಾರವಿದೆ? ಕ.ಸಾ.ಪ. ಅಧ್ಯಕ್ಷರು ಚೆನ್ನಾಗಿಯೇ ಉತ್ತರಿಸಿದ್ದಾರೆ. ಈ ಸಲವಾದರೂ ರಾಜಕಾರಣಿಗಳು ಹಿಂದಕ್ಕೆ ನಿಲ್ಲುವಂತಾಗಿದ್ದು ಒಳ್ಳೆಯದು. ಮೂರ್ಖತನದ ಮಾತುಗಳನ್ನಾಡಿರುವ ಉಪ ಮುಖ್ಯಮಂತ್ರಿಗೆ ಪ್ರಜಾಪ್ರಭುತ್ವದ ಪಾಠ ಹೇಳಿಕೊಡಬೇಕಾಗಿದೆ.

-ಲಿಂಗದೇವರು ಹಳೆಮನೆ

ಗೌರಿ, ವಿಠ್ಠಲ ಭಾರತದ ಪ್ರಜೆಗಳಲ್ಲವೆ?

ಎಬಿವಿಪಿಗಳ ಫ್ಯಾಸಿಸ್ಟ್ ವರ್ತನೆಗೆ ಸರ್ವರ ಧಿಕ್ಕಾರವಿರಲಿ. ಜಗತ್ತಿನಲ್ಲಿ ಎರಡೇ ಬಗೆಯ ವಿಚಾರಧಾರೆಗಳಿವೆ. ಒಂದು ಎಲ್ಲಾ ರೀತಿಯ ಶೋಷಣೆ ಮಾಡುವುದು, ಅದನ್ನು ಬೆಂಬಲಿಸುವುದು; ಇನ್ನೊಂದು ಎಲ್ಲಾ ಶೋಷಣೆಗಳ ವಿರುದ್ಧ ಆಲೋಚಿಸೋದು, ಬರೆಯೋದು, ಹೋರಾಡೋದು. ಎರಡನೇದನ್ನ ನಕ್ಸಲೈಟರು ಮಾತ್ರ ಮಾಡ್ತಾ ಇಲ್ಲ, ಜಾಗತೀಕರಣದ ಈ ವೇಳೆಯಲ್ಲಿ ರಿಕ್ಷಾ ಓಡಿಸುವಾತ, ಶಿಕ್ಷಕ ಹೀಗೆ ಎಲ್ಲರೂ ನೆಲದ ಶೋಷಿತರ ಪರ ಮಾತಾಡ್ತಾ ಇದ್ದಾರೆ. ಕ.ಸಾ.ಪ. ಹುಟ್ಟಿದಾಗಿನಿಂದ ಸಾಹಿತ್ಯದ ಮುಖ್ಯಧ್ವನಿಗಳನ್ನು ಗುರುತಿಸುತ್ತಾ, ಎಲ್ಲ ಬಗೆಯ ಶೋಷಣೆಗಳನ್ನು ವಿರೋಧಿಸುತ್ತಾ ಬಂದಿದೆ. ಅದು ಅದರ ಕರ್ತವ್ಯ ಕೂಡಾ. ಗೌರಿ ಅಥವಾ ವಿಠ್ಠಲ ಹೆಗಡೆ ವೇದಿಕೆಗೆ ಬರಬಾರದು ಎಂದರೆ ಅವರೇನೂ ಭಾರತದ ಪ್ರಜೆಗಳಲ್ಲವೆ? ಕರ್ನಾಟಕದ ನಾಗರಿಕರಲ್ಲವೆ? ಆ ರೀತಿ ವಿರೋಧಿಸುವ ಮೂಲಕ ಗೌರಿ, ವಿಠ್ಠಲ ಈ ದೇಶದ ಪ್ರಜೆಗಳಲ್ಲ ಎಂದು ಹೇಳುತ್ತಿದ್ದಾರೆ ಈ ಕೋಮುವಾದಿ ಫ್ಯಾಸಿಸ್ಟರು. ಶೋಷಣೆ ವಿರೋಧ ಮಾತಾಡೋದು ಎಲ್ಲರ ಡ್ಯೂಟಿ. ಅದನ್ನು ವಿರೋಧಿಸೋಕೆ ಇವರ್ಯಾರು?

ನಾಗರಿಕರ ಹಕ್ಕಿನ ಮೇಲೆ ಸವಾರಿ ಮಾಡಲು ಯತ್ನಿಸಿದ ಪ್ರಜಾಸತ್ತಾತ್ಮಕ ವಿರೋಧಿ ನಡವಳಿಕೆಗೆ ನಮ್ಮ ಧಿಕ್ಕಾರವಿರಲಿ.

-ಬಿ.ಎಂ. ಪುಟ್ಟಯ್ಯ, ಹಂಪಿ ಕನ್ನಡ ವಿ.ವಿ.

ಅನಾಗರಿಕತೆಗಿಂತ ಕೀಳು




ಸರ್ಕಾರದ ಅನುದಾನ ಪಡೆದರೂ, ಕಸಾಪ ತಾತ್ವಿಕ ಸಿದ್ಧಾಂತಗಳ ಸ್ವಾಯತ್ತ ಸಂಸ್ಥೆ. ಅದರ ಮೇಲೆ ಸವಾರಿ ಮಾಡಲು ಯಾರಿಗೂ ಹಕ್ಕಿಲ್ಲ. ಸಂಘ ಪರಿವಾರದ ಸಾಂಸ್ಕೃತಿಕ ಫ್ಯಾಸಿಸಂ ಪ್ರಜಾತಾಂತ್ರಿಕ ವ್ಯವಸ್ಥೆಯ ವಿರೋಧಿ. ಇದು ಕ್ರೂರ, ಅಮಾನವೀಯ, ಅನಾಗರಿಕ ಅಷ್ಟೇ ಅಲ್ಲ ಅದಕ್ಕಿಂತ ಅಪಾಯಕಾರಿಯಾದ ಕೀಳು ಧೋರಣೆ. ಮೂಲಭೂತವಾದಿ ಪರಿಕಲ್ಪನೆಯನ್ನು ವಿರೋಧಿಸಲೇಬೇಕೆಂಬ ಹಠದಿಂದ ನಾವೆಲ್ಲ ಗೋಷ್ಠಿಗೆ ಹೋದೆವು. ಅದು ನಮ್ಮ ಕರ್ತವ್ಯ ಕೂಡ. ಇಲ್ಲಿ ಚಂಪಾರ ನಿಲುವು ಮೆಚ್ಚತಕ್ಕದ್ದು. ಹಾಗೆಯೇ ಸಂಭವಿಸಲಿದ್ದ ಅನಾಹುತಗಳನ್ನು ಎರಡು ಬಾರಿಯೂ ತಡೆದ ಜಿಲ್ಲಾಡಳಿತದ ಯಶಸ್ಸು ಈ ವ್ಯವಸ್ಥೆಯ ಪರ ನಂಬುಗೆ ಬರುವಂತೆ ಮಾಡಿತು.

-ಆಶಾದೇವಿ

ಇದು ಪುನರಾವರ್ತನೆಯಷ್ಟೇ

ಸಂಘ ಪರಿವಾರಗಳ ಈ ಕೃತ್ಯ ಖಂಡಿತ ಖಂಡನಾರ್ಹ. ಎನ್‌ಡಿಎ ಸರ್ಕಾರವಿದ್ದಾಗಿನಿಂದ ಶಿವಮೊಗ್ಗದಲ್ಲಿ ಇಂತಹ ಕೀಳು ಚಟುವಟಿಕೆಗಳನ್ನು ಎಬಿವಿಪಿ ಮಾಡಿಕೊಂಡು ಬಂದಿದೆ. ಇದು ಪುನರಾವರ್ತನೆಯಷ್ಟೇ.


ಈ ಹಿಂದೆ ಎಮ್.ಎಫ್. ಹುಸೇನ್‌ಗೆ ಅವಮಾನಿಸಲು ಯತ್ನಿಸಿದ್ದು, 'ಫೈರ್' ಚಿತ್ರ ಬಿಡುಗಡೆಗೆ ಅಡ್ಡಿ ಮಾಡಿದ್ದು ಇವೆಲ್ಲದರ ಮುಂದುವರೆದ ಭಾಗವೇ ಗೌರಿ, ವಿಠ್ಠಲರ ಭಾಷಣಕ್ಕೆ ಅಡ್ಡಿ ಮಾಡಲೆತ್ನಿಸಿದ್ದು. ಬೌದ್ಧಿಕ ಚಿಂತನೆ, ಸ್ವಾತಂತ್ರ್ಯಕ್ಕೆ ಸಂಘ ಪರಿವಾರ ವಿರೋಧಿಯೇ. 'ಸಂಸ್ಕೃತಿ ಎಂದರೆ ನನ್ನ ಕೈ ಲಾರಿಗೆ ಹೋಗುತ್ತೆ' ಎನ್ನುವ ಧೋರಣೆ ಸಂಘ ಪರಿವಾರದ್ದು. ದೇಶಾದ್ಯಂತ ವ್ಯವಸ್ಥಿತವಾಗಿ ಇಂತಹ ಕೆಲಸ ಮಾಡುತ್ತಿರುವ ಸಂಘ ಪರಿವಾರಕ್ಕೆ ಹೋರಾಟದ ಮೂಲಕ, ಜನಜಾಗೃತಿಯ ಮೂಲಕ ಪಾಠ ಕಲಿಸಬೇಕು.



-ಜೆ. ರಾಜಶೇಖರ್

ದಮನಕಾರಿ ಪ್ರವೃತ್ತಿ

ಎಬಿವಿಪಿಗಳ ವರ್ತನೆ ಖಂಡಿತಾ ಖಂಡನೀಯ. ಅಭಿವ್ಯಕ್ತಿ ಸ್ವಾತಂತ್ರ್ಯ ಹತ್ತಿಕ್ಕಲು ದಮನಕಾರಿ ಪ್ರವೃತ್ತಿ ಅನುಸರಿಸುತ್ತಾ ಇದ್ದಾರೆ. ಉಪಮುಖ್ಯಮಂತ್ರಿಯ ಸಾನ್ನಿಧ್ಯದಲ್ಲೇ ಇದು ನಡೆಯೋದು, ಉಪಮುಖ್ಯಮಂತ್ರಿ ಅದನ್ನು ಸಮರ್ಥಿಸೋದು ಪ್ರಜಾತಾಂತ್ರಿಕ ವಿರೋಧಿ ಪ್ರವೃತ್ತಿ. ಇದನ್ನು ಎಲ್ಲರೂ ಒಕ್ಕೊರಲಿನಿಂದ ಖಂಡಿಸಿ, ಉಪಮುಖ್ಯಮಂತ್ರಿಯ ಮೇಲೆ ಕ್ರಮಕ್ಕೆ ಒತ್ತಾಯಿಸಬೇಕು.



-ರವಿವರ್ಮಕುಮಾರ್

ನಕ್ಸಲ್ ಚರ್ಚೆ ಅಪರಾಧವಲ್ಲ

ಎಬಿವಿಪಿಗೆ ಬುದ್ಧಿಯ ಕುಮ್ಮಕ್ಕಿದ್ದಿದ್ದರಿಂದಲೇ ಇದೆಲ್ಲ ಸಂಭವಿಸಿದ್ದು. ಸಾಹಿತ್ಯ ಸಮ್ಮೇಳನವನ್ನು ಕೋಮುವಾದಿ ರಾಜಕೀಯಕ್ಕೆ ನೇರ ಬಳಕೆ ಮಾಡಿಕೊಳ್ಳಲು ಯತ್ನಿಸಿದ್ದು ಸ್ಪಷ್ಟವಾಗಿದೆ. ಗೌರಿ ಲಂಕೇಶ್, ವಿಠ್ಠಲ ಹೆಗಡೆಯವರ ಭಾಷಣದಲ್ಲಿ ನಕ್ಸಲರ ಕುರಿತು ಚರ್ಚೆ ನಡೆದೇ ಇಲ್ಲ. ಚರ್ಚೆ ನಡೆದರೂ ಅದು ಅಪರಾಧವಲ್ಲ. ಈಗ ಎಬಿವಿಪಿಗಳ ಮೇಲೆ ಕೇಸ್ ಹಾಕದೇ, ಕೋಮುಸೌಹಾರ್ದ ವೇದಿಕೆಯವರ ಮೇಲೆ ಕೇಸು ಹಾಕುತ್ತಿರುವುದಕ್ಕೆ ಯಡಿಯೂರಪ್ಪನ ಚಿತಾವಣೆಯೇ ಕಾರಣ. ಕರಾವಳಿಯ ಕ್ರೌರ್ಯ ಮಲೆನಾಡಿಗೆ ವರ್ಗಾವಣೆಗೊಂಡಿದೆ. ಇದನ್ನೆಲ್ಲ ಸಹಿಸಿಕೊಂಡು ಭಾಷಣ ಮಾಡುತ್ತಲೇ ಇರುವ ಮುಖ್ಯಮಂತ್ರಿಯನ್ನೂ ಖಂಡಿಸಲೇಬೇಕಾಗಿದೆ.

-ಪಟ್ಟಾಭಿ ಸೋಮಯಾಜಿ, ಮಂಗಳೂರು.

ಅರಿಯದೇ ಮಾತಾಡೋರಲ್ಲ

ಎಲ್ಲರಿಗೂ ವಾಕ್ ಸ್ವಾತಂತ್ರ್ಯವಿದೆ. ಮಾತು ಕೇಳಿದ ಮೇಲೆ ಭಿನ್ನಾಭಿಪ್ರಾಯ ವ್ಯಕ್ತಪಡಿಸಲಿ. ಆದರೆ ಮಾತಾಡೋಕೆ ಮೊದ್ಲೆ ತಡೆಯೋದು ವಾಕ್ ಸ್ವಾತಂತ್ರ್ಯವನ್ನು ದಮನ ಮಾಡಿದಂತೆ. ಗೌರಿ ಅಥವಾ ವಿಠ್ಠಲ ಹೆಗಡೆಯೇನು ಅರಿಯದೇ ಮಾತಾಡೋರಲ್ಲ. ಹೆದರಿಸಿ, ಬೆದರಿಸಿ ಯಾರನ್ನು ತಡೆಯೋಕಾಗಲ್ಲ.

-ಮಾಳವಿಕಾ

ಗೌರಿ ಲಂಕೇಶ್ ಜೊತೆ ನಾವಿದ್ದೇವೆ

ಎಬಿವಿಪಿಯ ಗೂಂಡಾ ವರ್ತನೆಯನ್ನು ನಾವು ಖಂಡತುಂಡವಾಗಿ ಖಂಡಿಸುತ್ತೇವೆ. ಈಗಾಗಲೇ ಟೌನ್ ಹಾಲ್ ಎದುರು ಪ್ರತಿಭಟಿಸಿದ್ದೇವೆ. ಸಾಹಿತ್ಯ ಸಮ್ಮೇಳನ ಎಬಿವಿಪಿಗಳ ಕಾರ್ಯಕ್ರಮವೇ ಅಲ್ಲ, ಸಮಿತಿಗಳು ಗೋಷ್ಠಿಗಳಿಗೆ ಭಾಷಣಕಾರರನ್ನು ನಿರ್ಧರಿಸುತ್ತವೆ. ಇವರದೇನು ಕೆಲಸ ಅಲ್ಲಿ?

ಇದು ಸಂಘ ಪರಿವಾರದ ಕುಮ್ಮಕ್ಕಿನ ಪುರೋಹಿತಶಾಹಿಗಳ ಗೂಂಡಾಗಿರಿ. ಚಂಪಾರ ದೃಢ ನಿರ್ಧಾರವನ್ನು ನಾವು ಬೆಂಬಲಿಸಲೇಬೇಕು. ದಿಟ್ಟ ನಿರ್ಧಾರ ಕೈಗೊಂಡ ಗೌರಿ ಲಂಕೇಶ್ ಜೊತೆ ನಾವೆಲ್ಲ ನಿಲ್ಲುತ್ತೇವೆ.

-ಜೆ. ರಾಜಶೇಖರ್‌ಮೂರ್ತಿ, SFI, ರಾಜ್ಯಾಧ್ಯಕ್ಷರು

ಅಭಿಪ್ರಾಯ ಸಂಗ್ರಹ: ಪಿ.ಕೆ. ಮಲ್ಲನಗೌಡರ್

ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಹಲವಾರು ಆಧುನಿಕ ಕಾನೂನಿನ ಅಂಶಗಳಿವೆ -ಎಂ.ವಿ.ಆರ್. ರಾವ್



ಸಾಹಿತ್ಯ ಸಮ್ಮೇಳನ ಚೆಡ್ಡಿಗಳಿಗೆ ಎದುರೇಟು

ಕನ್ನಡ ಸಾಹಿತ್ಯ ಸಮ್ಮೇಳನ ಅಪ್ರಬುದ್ಧ ರಾಜಕಾರಣಿಗಳ ನಾಲಿಗೆ ಚಟ ತೀರಿಸಿಕೊಳ್ಳುವ ವೇದಿಕೆಯಾಗಲು ಮತ್ತೊಮ್ಮೆ ನಿರಾಕರಿಸಿದೆ.

ಕನ್ನಡಿಗರ ಈ ಸಾಂಸ್ಕೃತಿಕ ಹಬ್ಬವು, ಹಿಂದೂ ಕೋಮುವಾದಿಗಳು ಹೇರಲು ಬಯಸಿದ್ದ ಅಜೆಂಡಾಗಳನ್ನು ತಿರಸ್ಕರಿಸಿ ತನ್ನ ಸ್ವಾಭಿಮಾನ ತೋರಿಸಿದೆ. ಮುಖ್ಯಮಂತ್ರಿ ಕುಮಾರಸ್ವಾಮಿ ಬಹುಶಃ ಸಾಹಿತ್ಯ ಎಂದರೆ ಅದೊಂತರಾ ನಿಗಮ-ಮಂಡಳಿಗಳ ತರಹದ್ದೇ ಸರ್ಕಾರಿ ಸಂಸ್ಥೆ ಎಂದುಕೊಂಡಿದ್ದರೇನೊ..... ಅವರಿಗೂ ಕಸಾಪ ಅಧ್ಯಕ್ಷ ಚಂಪಾರಿಂದ ಮಾತಿನ ಚಾವಟಿ ಏಟು ಬಿತ್ತು.

ಅಷ್ಟೇ ಅಲ್ಲ, ಪ್ರಗತಿಪರರನ್ನು ಬೆದರಿಸಿ, ಹಲ್ಲೆ ಮಾಡಲು ಗುಂಪು ಕಟ್ಟಿಕೊಂಡು ಬಂದಿದ್ದ ಭಜರಂಗದಳ, ಎಬಿವಿಪಿ, ಆರ್‌ಎಸ್‌ಎಸ್ ಪಟಾಲಂಗೆ ಅದೇ ಮಲೆನಾಡಿನ ಜನ ಓಡಾಡಿಸಿಕೊಂಡು ಬಡಿದರು.

ಸಮ್ಮೇಳನಕ್ಕೆ ಮತ್ತು ಕನ್ನಡ ಸಂಸ್ಕೃತಿಗೇ ಕಪ್ಪುಚುಕ್ಕೆಯನ್ನು ಇಡಲು ಯೋಜಿಸಿದ್ದ ಸಂಘಪರಿವಾರದ ಕುತಂತ್ರ ವಿಫಲವಾಯಿತು.

ಚೆಡ್ಡಿಗಳ ಪಾಲಿಗೆ ಇದೊಂದು ಅತೀ ಅನಿರೀಕ್ಷಿತ ತಿರುಗೇಟಾಗಿತ್ತು.

ಈ ಎಲ್ಲಾ ಕಾರಣಗಳಿಂದಾಗಿ ಈ ಬಾರಿ ಶಿವಮೊಗ್ಗದಲ್ಲಿ ನಡೆದ 73 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ್ದು ಚಾರಿತ್ರಿಕ ಯಶಸ್ಸು ಎಂದೇ ಹೇಳಬೇಕು.

ಶಿವಮೊಗ್ಗ ಜಿಲ್ಲೆಯಿಂದ ಒಬ್ಬ ಉಪಮುಖ್ಯಮಂತ್ರಿ ಹಾಗೂ ಇಬ್ಬರು ಕ್ಯಾಬಿನೆಟ್ ಮಂತ್ರಿಗಳಿದ್ದರೂ, ಮೊದಲಿನಿಂದಲೂ ಶಿವಮೊಗ್ಗ ತಮ್ಮ ಬಲಿಷ್ಠ ಕೋಟೆ ಎಂದೇ ಸಂಘ ಪರಿವಾರಿಗಳು ನಂಬಿಕೊಂಡಿದ್ದರೂ ಅದೇ ಮಲೆನಾಡಿನ ರೈತ ಹೋರಾಟಗಾರ ಕಲ್ಕುಳಿ ವಿಠಲ ಹೆಗಡೆ ಹಾಗೂ ಪತ್ರಕರ್ತೆ ಗೌರಿ ಲಂಕೇಶರ ಒಂದೇ ಒಂದು ಭಾಷಣಕ್ಕೆ ಹೆದರಿ ಅವಕಾಶ ನಿರಾಕರಿಸಲು ಯತ್ನಿಸಿದ್ದು ಆಶ್ಚರ್ಯಕರವಾಗಿತ್ತು.

ಹಾಗಾಗಿ ಸಂವಾದ ಮಾಡಬೇಕಾದ್ದನ್ನು ಅವರು ವಿವಾದ ಮಾಡಿಬಿಟ್ಟರು, ಆದರೆ ಅದನ್ನು ದಕ್ಕಿಸಿಕೊಳ್ಳುವ ತಾತ್ವಿಕ, ಬೌದ್ಧಿಕ ಹಾಗೂ ನೈತಿಕ ಬಲವಿರದೆ ದೈಹಿಕ ಹಲ್ಲೆಗಿಳಿಯುವ ನೀಚ ಮಟ್ಟಕ್ಕೂ ಹೋಗಿಬಿಟ್ಟರು. ಹಾಗೆ ಮಾಡುವ ಮೂಲಕ ಸಾಹಿತ್ಯ ಸಮ್ಮೇಳನಕ್ಕೆ ಕರ್ನಾಟಕದ ಮೂಲೆ ಮೂಲೆಗಳಿಂದ ಬಂದಿದ್ದ ಅರ್ಧ ಲಕ್ಷ ಕನ್ನಡಿಗರ ಹಾಗೂ ಈ ವಿದ್ಯಮಾನಗಳನ್ನು ಪತ್ರಿಕೆ ಟಿವಿಗಳ ಮೂಲಕ ಗಮನಿಸುತ್ತಿದ್ದ ಕೋಟ್ಯಂತರ ಜನರ ಖಂಡನೆಗೂ ಸಂಘ ಪರಿವಾರದವರು ಒಳಗಾದರು.



ಜಿಲ್ಲಾ ಕಸಾಪ ಅಧ್ಯಕ್ಷ ಮಂಜುನಾಥ್

ಕಾಸು ಕೊಟ್ಟವರು ಜನ- ಸರ್ಕಾರವಲ್ಲ!

'ಸಾಹಿತ್ಯ ಸಮ್ಮೇಳನಕ್ಕೆ ನಾವು ಒಂದು ಕೋಟಿ ರೂಪಾಯಿ ಕೊಟ್ಟಿದ್ದೇವೆ' ಎಂದು ಕುಮಾರಸ್ವಾಮಿ ಹಾಗೂ ಯಡಿಯೂರಪ್ಪ ಪದೇಪದೇ ಹೇಳಿದ್ದಾರೆ. ಈ ಹಣ ಇವರಿಬ್ಬರ ಮನೆಯಿಂದ ತಂದು ಕೊಟ್ಟದ್ದೇನಾಗಿರಲಿಲ್ಲ, ಚಂಪಾ ಹೇಳಿದಂತೆ ಅದು 'ಕನ್ನಡಿಗರ ಹಣ ಕನ್ನಡದ ಕೆಲಸಕ್ಕೆ ಬಳಕೆಯಾಗುತ್ತಿತ್ತು ಅಷ್ಟೆ' ಆದರೆ ಅಸಲಿ ವಿಷಯ ಏನೆಂದರೆ ಸರ್ಕಾರದ ಅನುದಾನದ ಮೊತ್ತ ವ್ಯವಸ್ಥಾಪಕರಿಗೆ ತಲುಪಿದ್ದೇ ಸಮ್ಮೇಳನ ಶುರುವಾಗಲು ಕೇವಲ ಎರಡು ದಿನ ಇದ್ದಾಗ.

ಹಾಗೆ ಮಾಡುವ ಮೂಲಕ ಹತ್ತಾರು ಸಾವಿರ ಜನ ಸೇರುವ ನಾಲ್ಕು ದಿನಗಳ ಕಾರ್ಯಕ್ರಮಕ್ಕೆ ಮೊದಲೇ ಕೈಲಿ ಹಣವಿರದಿದ್ದರೆ ಏನೇನು ಅವ್ಯವಸ್ಥೆ-ಗೊಂದಲಗಳಾಗಬೇಕೊ ಅವೆಲ್ಲವನ್ನೂ ಸ್ವತಃ ಸರ್ಕಾರವೇ ಉದ್ಘಾಟಿಸಿತ್ತು.

ಅಷ್ಟರಲ್ಲಿ 'ನನ್ನನ್ನು ಕರೆಯಲಿಲ್ಲ, ಲೇಖನ ಹಾಕಲಿಲ್ಲ'ವೆಂಬ ಒಳಜಗಳಗಳೂ ಸ್ಫೋಟಗೊಂಡು ಜಿಲ್ಲಾ ಕಸಪಾ ಅಧ್ಯಕ್ಷ ಡಿ. ಮಂಜುನಾಥರ ಟೆನ್ಷನ್ ಹೆಚ್ಚು ಮಾಡಿದ್ದವು. ಜಿಲ್ಲಾ ಮಾಜಿ ಕಸಾಪ ಅಧ್ಯಕ್ಷ ಕತ್ತಿಗೆ ಚೆನ್ನಪ್ಪವೆಂಬ ಸಾಯಿತಿಗಳು 'ನನ್ನನ್ನು ಯಾರೂ ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ'ವೆಂಬ ವಿಚಿತ್ರ ಜಗಳಕ್ಕೆ ಬಿದ್ದಿದ್ದರು. ಬಹುಶಃ ಅವರ ಬಗ್ಗೆ ಯಾರಿಗೂ ವಿಶ್ವಾಸವಿರಲಿಲ್ಲವೊ ಅಥವಾ ಮತ್ತೇನು ಕಾರಣವೊ ಅಂತೂ ಸಮ್ಮೇಳನದ ಕಾಲೆಳೆಯುವ ತರಲೆ ಹುಟ್ಟಿಕೊಂಡಿತ್ತು. ಈ ಚೆನ್ನಪ್ಪ ಸ್ಮರಣ ಸಂಚಿಕೆಯೊಂದಕ್ಕೆ ತಾವೊಂದು ಲೇಖನ ಬರೆದಿದ್ದೇ ಅಲ್ಲದೆ ಇನ್ನೊಂದು ಲೇಖನ ಕಂಡುಹಿಡಿದು ಅದನ್ನು ತಮ್ಮ ಮಗನ ಹೆಸರಲ್ಲಿ ಪ್ರಿಂಟಿಸಬೇಕೆಂದು ಗಂಟು ಬಿದ್ದಿದ್ದರು. ಸಹಜವಾಗೇ ಸಂಪಾದಕ ಮಂಡಳಿ ಅದನ್ನು ತಿರಸ್ಕರಿಸಿತ್ತು. ಜೊತೆಗೆ 'ನನ್ನಂತ ಮಾಜಿ ಅಧ್ಯಕ್ಷರಿಗೆ ಸನ್ಮಾನ ಮಾಡಿ' ಎಂದೂ ಚೆನ್ನಪ್ಪ ದುಂಬಾಲು ಬಿದ್ದಿದ್ದರಂತೆ. ಈ ಗಲಾಟೆ ತಣ್ಣಗಾಗುವಷ್ಟರಲ್ಲಿ ದೊಡ್ಡ ಬರಹಗಾರ ಯು.ಆರ್. ಅನಂತಮೂರ್ತಿ 'ತಮಗೆ ಆಹ್ವಾನ ನೀಡದ' ಬಗ್ಗೆ ಸಾಕಾರಣವಾಗಿಯೇ ಬೇಸರ ತೋಡಿಕೊಂಡಿದ್ದರು. ಅವರ ದೂರಿನ ಬಿಸಿ ಆರುವ ಮೊದಲೇ ಶಿಶುಕವಿ ಸಿ.ಜು. ಪಾಶ 'ತನಗೂ ಆಹ್ವಾನ ಬಂದಿಲ್ಲ, ಯಾರೂ ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ'ವೆಂದು ಇನ್ಯಾರದ್ದೋ ಬೂಟ್ ಪಾಲಿಶ್ ಮಾಡುತ್ತೇನೆಂದು ಹೊರಟು ಬಿಡಬೇಕೆ!

ಮತ್ತೆ ಅನುದಾನ-ಹಣದ ವಿಚಾರಕ್ಕೆ ಬರುವುದಾದರೆ ಕಳೆದ ಆಗಸ್ಟ್ ತಿಂಗಳಿನಿಂದಲೇ ಈ ಸಮ್ಮೇಳನದ ತಯಾರಿ ಕೆಲಸ ಶುರುವಾಗಿದ್ದರೂ ಸಹ ಅನುದಾನ ಮಾತ್ರ ಡಿಸೆಂಬರ್ 18 ರ ಸುಮಾರಿಗೆ ಬಿಡುಗಡೆಯಾಗಿದ್ದು ಚೆಡ್ಡಿ ಸರ್ಕಾರದ ಪಿತೂರಿಯಿಂದ ಎಂಬುದು ಈಗ ಸಾಬೀತಾಗಿದೆ.

ಸಮ್ಮೇಳನಾಧ್ಯಕ್ಷ ನಿಸಾರ್ ಅಹಮದ್ ಮುಸ್ಲಿಮರಾಗಿರುವುದೇ ಇದಕ್ಕೆ ಕಾರಣ ಎಂಬುದು ಬಹುತೇಕರ ಅಭಿಪ್ರಾಯವಾಗಿತ್ತು. ಇಲ್ಲಿಂದ ಹೀಗೆ ಶುರುವಾದ ಸಂಘ ಪರಿವಾರದ ಪಿತೂರಿಗಳು ಕಲ್ಕುಳಿ ವಿಠಲ ಹೆಗಡೆ ಹಾಗೂ ಗೌರಿ ಲಂಕೇಶರನ್ನು ವಿಚಾರ

ಬಿಳಿದಾಳೆ ಈಶ

ಗೋಷ್ಠಿಗಳಿಗೆ ಕರೆಸಬಾರದೆಂಬ ಗಲಾಟೆ ಬೆದರಿಕೆ, ಹಲ್ಲೆ ಪ್ರಯತ್ನಗಳವರೆಗೂ ಮುಂದುವರೆಯಿತು.

ಚರ್ಚೆಗೆ ಚೆಡ್ಡಿಗಳ ಅನುಮತಿ ಬೇಕೆ?

ಡಿಸೆಂಬರ್ 21 ರಂದು 'ಮಲೆನಾಡಿನ ವಾಸ್ತವ ಸಮಸ್ಯೆಗಳು' ಎಂಬ ಬಗ್ಗೆ ವಿಚಾರ ಮಂಡಿಸಲು ಕಲ್ಕುಳಿ ವಿಠಲ ಹೆಗಡೆಯವರಿಗೆ ಆಹ್ವಾನ ನೀಡಿದ್ದದ್ದು ಸಮ್ಮೇಳನದ ಕಾರ್ಯಕಾರಿ ಸಮಿತಿ. ಕಳೆದ ಎರಡು ದಶಕಗಳಿಂದಲೂ ಮಲೆನಾಡಿನ ಪರಿಸರ, ಕೃಷಿ, ನದಿ, ನೀರಿನ ಬಗ್ಗೆ ಹೋರಾಟ ನಡೆಸುತ್ತಲೇ ಬಂದಿರುವ ವಿಠಲ್ ಹೆಗಡೆ ಹೆಸರು ಎಲ್ಲರಿಗೂ ಚಿರಪರಿಚಿತ. ಜೊತೆಗೆ ಹಿಂದೂ ಕೋಮುವಾದ ಬ್ರಾಹ್ಮಣ ಮಠಗಳ ದೌರ್ಜನ್ಯ ಶೋಷಣೆಗಳ ವಿರುದ್ಧವೂ ಹೆಗಡೆ ದನಿ ಎತ್ತುತ್ತಾ ಬಂದಿದ್ದರಾದ್ದರಿಂದ ಅವರ ಮೇಲೆ ಸಂಘ ಪರಿವಾರಕ್ಕೆ ಅಸಹನೆ ಇತ್ತು. ಕೋಮು ಸೌಹಾರ್ದ ವೇದಿಕೆಯ ನಾಯಕರೂ ಆಗಿರುವ ವಿಠಲ್ ಬಾಬಾಬುಡನ್‌ಗಿರಿಯನ್ನು ಬ್ರಾಹ್ಮಣೀಕರಿಸುವ ಬಜೆಪಿ ಪ್ರಯತ್ನಗಳನ್ನು ಮೊದಲಿನಿಂದಲೂ ವಿರೋಧಿಸುತ್ತಾ ಬಂದವರು.

ಈ ಎಲ್ಲಾ ಹಿನ್ನೆಲೆ ಇಟ್ಟುಕೊಂಡು ಸಾಹಿ[...] ಸಮ್ಮೇಳನದಲ್ಲಿ ಈಗ ಭರ್ಜರಿ ಸೇಡು ತೀರಿಸಿಕೊಳ್ಳು[...] ಅವಕಾಶ ಸಿಕ್ಕಿತೆಂದು ಸಂಭ್ರಮದಿಂದ ಎಬಿವಿಪಿಯ[...] ವಿಠಲ್ ವಿರುದ್ಧ ಛೂ ಬಿಡುವ ಪಿತೂರಿ ಮಾಡಲಾಗಿತ್ತು[...] ಆದರೆ ವಿಠಲ್ ಹೆಗಡೆ ಬೆನ್ನಿಗಿದ್ದ ಮಲೆನಾಡಿನ ರೈ[...] ಯುವಕರು ಹಾಗೂ ಕರ್ನಾಟಕ ಕೋಮು ಸೌಹಾ[...] ವೇದಿಕೆಯವರ ತಾಕತ್ತನ್ನು ಮತ್ತು ತಯಾರಿಯ[...] ಸಂಘ ಪರಿವಾರ ಅಂದಾಜು ಮಾಡಿರಲಿಲ್ಲ. ಒಂದ[...] ಸಾರಿ 'ಧಿಕ್ಕಾರ' ಎಂದು ಕೂಗಿಬಿಟ್ಟರೆ ಸಾಕು ಎ[...] ಜಾಗಬಿಟ್ಟು ಓಡಿಹೋಗುತ್ತಾರೆಂದು ಎಬಿವಿಪಿ ಪಟಾಲ[...] ಭಾವಿಸಿತ್ತೇನೊ, ಆದರೆ ಅವರು ಗಲಾಟೆ ಶುರು ಮಾಡಿ[...] ಮರುಕ್ಷಣದಲ್ಲೇ ಅಂತಹವರನ್ನು ಸುತ್ತುವರೆದ ಸಭಿಕ[...] ತಲ್‌ತಲೆ ಮೇಲೆ ಹೊಡೆದರು. ಜನಪರ ಹಿತಾಶಕ್ತಿಯು[...] ಈ ಗೋಷ್ಠಿ ಮುಂದುವರೆಯುವಂತೆ ಮಾಡಲ[...] ಕೋಮು ಸೌಹಾರ್ದ ವೇದಿಕೆ ಕಾರ್ಯಕರ್ತ[...] ಪ್ರಯತ್ನಿಸುತ್ತಿದ್ದರೆ ಚೆಡ್ಡಿಗಳು ಅವರ ಮೇಲೇರಿ ಬಂದರ[...] ಆಗಲೇ ಕೋಮು ಸೌಹಾರ್ದ ವೇದಿಕೆಯ ಕಾಯ[...] ಕರ್ತರು ಚೆಡ್ಡಿಗಳನ್ನು ತಡೆಗಟ್ಟಲೇ ಬೇಕಾಯಿತು. ನಿಜಕ[...] ಅದೊಂದು ಅಭೂತಪೂರ್ವ ದೃಶ್ಯವಾಗಿತ್ತು. ಆ ಕ್ಷಣದ[...] ಯಾವುದೇ ಸೃಜನಶೀಲ ಕೃತಿ-ಕಾವ್ಯಕ್ಕಿಂತ ಮಹತ್ವದ್ದಾಗಿತ್[...] ಕರ್ನಾಟಕದ ಉದ್ದಗಲಕ್ಕೂ, ಹಿಂದುಳಿದವರ[...] ಮುಸ್ಲಿಮರು, ದಲಿತರು ಹಾಗೂ ಮಹಿಳೆಯರ ವಿರು[...] ದಮನ ದೌರ್ಜನ್ಯಗಳನ್ನು ಎಸಗುತ್ತಲೇ ಬಂದಿದ್ದ ಸಂ[...] ಪರಿವಾರದ ಫ್ಯಾಸಿಸ್ಟರಿಗೆ ಕರ್ನಾಟಕದಲ್ಲಿ ಇದೇ ಮೊದ[...] ಬಾರಿಗೆ ಅಲ್ಲಿ ಪ್ರಗತಿಪರರು ಏಟು ಕೊಟ್ಟು ಹೊ[...] ದಬ್ಬಿದ್ದರು.

ಸಂಘ ಪರಿವಾರಕ್ಕೆ ಹೀಗೆ ತಿರುಗೇಟು ಕೊಟ್ಟ[...] ಕೇವಲ ವಿಠಲ ಹೆಗಡೆಯವರ ಭಾಷಣಕ್ಕೆ ಅವಕಾ[...] ಸಿಗಲೇಬೇಕೆಂಬ ಏಕೈಕ ಕಾರಣಕ್ಕಲ್ಲ, ಬದಲಾಗಿ ಅಭಿ[...] ಸ್ವಾತಂತ್ರ್ಯ ಹಕ್ಕನ್ನು ಎತ್ತಿ ಹಿಡಿಯುವ ಹಾಗೂ ಹಿಂದ[...] ಸಂಘಟನೆಗಳು ಸಾಹಿತ್ಯ-ಸಂಸ್ಕೃತಿಯಂತಹ ಕ್ಷೇತ್ರಗಳಲ್[...] ಕಾಲಿರಿಸಿ ದಬ್ಬಾಳಿಕೆ ನಡೆಸದಂತೆ ತಡೆಹಿಡಿಯು[...] ಹೋರಾಟವಾಗಿತ್ತು ಅದು.

ಅವತ್ತು ಎಬಿವಿಪಿ ಪಟಾಲಂ ದೊಂಬಿ ನಡೆಸಿದ[...] ಆಕಸ್ಮಿಕ ಅಲ್ಲ. ಶಿವಮೊಗ್ಗ ಅಲ್ಲದೆ ದಾವಣಗೆ[...] ಚಿಕ್ಕಮಗಳೂರುಗಳಿಂದಲೂ ಹುಡುಗರನ್ನು ಕರ[...] ದಾಳಿಗೆ ಪಕ್ಕಾ ಪ್ಲಾನ್ ಮಾಡಲಾಗಿತ್ತು. ಮತ್ತೊಂದೆ[...] ಶಿವಮೊಗ್ಗದ ವಿದ್ಯಾರ್ಥಿ ಹಿತರಕ್ಷಣಾ ವೇದಿಕೆ, ನಮ[...] ಹಕ್ಕು, ಸಿಎಲ್‌ಎಫ್, ಮಹಿಳಾ ಜಾಗೃತಿ, ಜಾತಿ ವಿನಾ[...] ವೇದಿಕೆ, ಕೋಮು ಸೌಹಾರ್ದ ವೇದಿಕೆಯ ಕಾಯ[...] ಕರ್ತರೂ ಸಹ ನೂರಾರು ಸಂಖ್ಯೆಯಲ್ಲಿ ನೆರೆದದ್ದು [...] ಚೆಡ್ಡಿಗಳ ತೊಳ್ಳೆ ನಡುಗಿಸಿತ್ತು.

ಅಂದುಕೊಂಡಿದ್ದಂತೆ ಚೆಡ್ಡಿಗಳು ದೊಂಬಿ ಶುರು[...] ಮಾಡುವ ಮೊದಲೇ ಅನಿರೀಕ್ಷಿತವಾಗಿ ಪುಸ್ತಕ ಮಳಿಗೆಗ[...] ಕೆಲವರು ಅಲ್ಲಿಗೆ ಬಂದು ಕರೆಂಟು ಇತ್ಯಾದಿ ತೊಂದ[...] ಎಂದು 'ವ್ಯವಸ್ಥಾಪಕರಿಗೆ ಧಿಕ್ಕಾರ' ಎಂದು ಕೂಗಿಬಿಟ್ಟರ[...] ಇದೇ 'ಗಲಾಟೆ ಶುರು ಮಾಡಲು ಸಿಗ್ನಲ್' ಎಂದ[...] ತಪ್ಪಾಗಿ ತಿಳಿದುಕೊಂಡ ಚೆಡ್ಡಿಗಳಲ್ಲಿ ಕೆಲವರು ಎದ[...]

(13ನೇ ಪುಟ[...]

ನಿಸಾರ್ ಮತ್ತು ಜಿಎಸ್‌ಎಸ್

ನಕ್ಸಲೀಯರೆಂದರೆ ದೇಶದ್ರೋಹಿಗಳೆಂದು ಸೂರು ಕಿತ್ತುಹೋಗುವಂತೆ ಅರಚುತ್ತಿದ್ದ ಚೆಡ್ಡಿಗಳ ಅಭಿಪ್ರಾಯವನ್ನು ಸಮ್ಮೇಳನದಲ್ಲಿ ಭಾಗವಹಿಸಿದ್ದ ಗಣ್ಯರ್‍ಯಾರೂ ಒಪ್ಪಲಿಲ್ಲ, ಗೌರಿ ಲಂಕೇಶರು ಹೇಳಿದಂತೆ ನಕ್ಸಲೀಯರ ಮಾರ್ಗವನ್ನು ಒಪ್ಪಲಾಗದಿದ್ದರೂ, ನಕ್ಸಲ್ ಚಳವಳಿ ಹುಟ್ಟಿನ ಮೂಲವಿರುವುದೇ ಅಸಮಾನತೆಯಲ್ಲಿ, ಹೆಚ್ಚುತ್ತಿರುವ ಬಡತನ-ಶ್ರೀಮಂತರ ನಡುವಿನ ಅಂತರದಲ್ಲಿ ಎಂಬ ಅಭಿಪ್ರಾಯವೇ ಅಲ್ಲಿದ್ದ ಬಹುಪಾಲು ಸಾಹಿತಿಗಳದ್ದಾಗಿತ್ತು.

ಎಲ್ಲಕ್ಕಿಂತ ಮುಖ್ಯವಾಗಿ ಸಮ್ಮೇಳನದ ಅಧ್ಯಕ್ಷರಾಗಿದ್ದ ನಿಸಾರ್ ಅಹ್ಮದ್ ಅವರು ಸಂದರ್ಶನವೊಂದರಲ್ಲಿ ನಕ್ಸಲ್ ಚಳವಳಿ ಏಕೆ ಹುಟ್ಟುತ್ತದೆ ಎಂಬ ಪ್ರಶ್ನೆಗೆ ಉತ್ತರಿಸುತ್ತಾ "ದೇವಿಯೇ ಕಂಡೆ ನಿನ್ನ ಮಡಿಲಲ್ಲಿ ಎಂಥಾ ದೃಶ್ಯ" ಎಂಬ ಕವನವನ್ನೇ ಉದ್ಧರಿಸಿದರು. "ಎಲ್ಲೆಲ್ಲಿ ಅಸಮಾನತೆ ಇರುತ್ತದೋ ಅಲ್ಲೆಲ್ಲಾ ಅದನ್ನು ನಿವಾರಿಸಲು ನಕ್ಸಲಿಸಂ ಜನ್ಮ ತಾಳುತ್ತದೆ. ಹಾಗೆಂದು ಅಭಿಪ್ರಾಯಪಟ್ಟ ಮಾತ್ರಕ್ಕೆ ಅವರನ್ನು ಕಮ್ಯುನಿಸ್ಟ್ ನಕ್ಸಲೈಟ್ ಎಂದು ಹಣೆಪಟ್ಟಿ ಕಟ್ಟಲಾಗದು" ಎಂದು ಅಭಿಪ್ರಾಯ ಪಟ್ಟರು.

"ಧಾರ್ಮಿಕ ಮೂಲಭೂತವಾದ ಮತ್ತು ಅದು ಜಾಗತಿಕ ಭಯೋತ್ಪಾದನೆಯೊಂದಿಗೆ ಸೇರಿ ಪಡೆದುಕೊಳ್ಳುತ್ತಿರುವ ಅಪಾಯಕಾರಿ ಆಯಾಮ" ಎಂದು ಹೇಳಿದ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರ ಕಾಳಜಿಯ ಕೇಂದ್ರ ಬಿಂದುವೇ ಆಗುತ್ತ, ಹೆಚ್ಚುತ್ತಿರುವ ಅಸಮಾನತೆಯ ಕುರಿತು ತೀವ್ರವಾಗಿ ಸ್ಪಂದಿಸಿದ ರಾಷ್ಟ್ರಕವಿಗಳು 'ಹಸಿವಿನಿಂದ ಸಾಯುವಂತೆ ಮಾಡುವುದು ರಕ್ತಪಾತದಷ್ಟೇ ಕ್ರೂರವಾದದ್ದು' ಎಂದು ಗುಡುಗಿದರು. ಮೈ 'ಧರ್ಮದ ಮುಖವಾಡ ಹೊತ್ತು ಜನತೆಯ ನಡುವಿನ ಪ್ರೀತಿಯ ಹಣತೆಯನ್ನು ಬತ್ತಿಸಹೊರಟಿರುವ ಶಕ್ತಿಗಳ ವಿರುದ್ಧ' ತಮ್ಮ ಧ್ವನಿಯನ್ನು ಸ್ಪಷ್ಟವಾಗಿ ದಾಖಲಿಸಿದರು.

ಮಲೆನಾಡಿನ ಸಂಪತ್ತು ಸ್ಥಳೀಯರ ಹಕ್ಕು.....

ಶಿವಮೊಗ್ಗ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕಲ್ಕುಳಿ ವಿಠ್ಠಲ ಹೆಗಡೆಯವರು 'ಮಲೆನಾಡಿನ ಪ್ರಗತಿಯ ಮುಂದಿನ ಹೆಜ್ಜೆಗಳು' ವಿಷಯ ಕುರಿತು ಮಂಡಿಸಿದ ಅಭಿಪ್ರಾಯಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

ಈ ಅಭಿಪ್ರಾಯಗಳನ್ನು ಹೇಳಲು ಅವಕಾಶ ನೀಡಬಾರದೆಂದಿದ್ದ ಸಂಘಪರಿವಾರ ಯಾರ ಪರ ಮತ್ತು ಯಾರ ವಿರುದ್ಧವಿದೆ ಎಂಬುದನ್ನು ನೀವೇ ನಿರ್ಧರಿಸಿ.



ಮಲೆನಾಡಿನ ಪ್ರಗತಿ ಎಂದರೆ ಸದ್ಯ ಮಲೆನಾಡಿನಲ್ಲಿ ಎದುರಾಗಿರುವ ಸಮಸ್ಯೆಗಳನ್ನು ಬಗೆಹರಿಸೋದೇ ಆಗಿದೆ. ಸಣ್ಣಪುಟ್ಟ ಅಭಿವೃದ್ಧಿಯಿಂದ ಇದು ಸಾಧ್ಯವಿಲ್ಲ. ಸಮಸ್ಯೆಗಳನ್ನೆಲ್ಲ ಸಮಸ್ತವಾಗಿ ಬಗೆಹರಿಸೋದೆ ಇದಕ್ಕಿರುವ ದಾರಿ. ಇಲ್ಲಿ ಮುಖ್ಯವಾಗಿ ಎರಡು ಸಮಸ್ಯೆಗಳಿವೆ. ಮೊದಲನೆಯದು ಮಲೆನಾಡಿನ ಪರಿಸರದ ವೈಶಿಷ್ಟ್ಯತೆಯ ಕಾರಣ ಮುಂದೆ ಮಾಡಿ ಮಲೆ ನಾಡಿಗರನ್ನು ಅನ್ಯಾಯವಾಗಿ ಒಕ್ಕಲೆಬ್ಬಿಸುತ್ತಿರುವುದು. ಎರಡನೆಯದು ಮಲೆನಾಡಿನ ರೈತರು ಸಂಕಷ್ಟದಲ್ಲಿರುವುದು.

2002ರಲ್ಲಿ ಸುಪ್ರೀಂಕೋರ್ಟ್ 'ಅರಣ್ಯ' ಎಂದರೇನೆಂದು ಹೊಸದಾಗಿ ವ್ಯಾಖ್ಯಾನ ಮಾಡಿದಾಗಿನಿಂದ ಮಲೆನಾಡಿಗರನ್ನು ಅದರಲ್ಲೂ ಆದಿವಾಸಿಗಳನ್ನು ಒಕ್ಕಲೆಬ್ಬಿಸುವ ಕ್ರಮಕ್ಕೆ ಚಾಲನೆ ದೊರೆಯಿತು. ಹೊಸ ವ್ಯಾಖ್ಯಾನದ ಪ್ರಕಾರ, "ಎರಡೂವರೆ ಎಕರೆ ಪ್ರದೇಶದಲ್ಲಿ, 25 ಗಿಡ ಅಥವಾ ಮರ ಇದ್ದರೆ ಅದು ಅರಣ್ಯ... 1985 ಕ್ಕೂ ಮುಂಚೆ ಅಧಿಕೃತ ದಾಖಲೆ ಇರುವ ಜಮೀನುಗಳ ಹೊರತಾಗಿ ಉಳಿದಿದ್ದೆಲ್ಲವನ್ನೂ ಒತ್ತುವರಿ ಮಾಡಬೇಕು... ರಾಷ್ಟ್ರೀಯ ಉದ್ಯಾನ, ರಕ್ಷಿತ ಅರಣ್ಯ ಮೀಸಲು ಅರಣ್ಯ ಈ ರೀತಿಯ ಸಂರಕ್ಷಿತ ಅರಣ್ಯ ಪ್ರದೇಶದಿಂದ 50 ಕಿ.ಮೀ. ದೂರದಲ್ಲಿ 20 ಹೆಕ್ಟೇರ್‌ನಷ್ಟು 'ಅರಣ್ಯ' (ಸುಪ್ರೀಂಕೋರ್ಟ್ ವ್ಯಾಖ್ಯಾನದ 'ಅರಣ್ಯ') ಇದ್ದರೆ, ಅದನ್ನು designated forest ಅಂತಾ ಗುರುತಿಸಬೇಕು..."

ಈ ಮೇಲಿನ ಮೂರು ಅಂಶಗಳನ್ನು ನೋಡಿದರೆ ಮಲೆ ನಾಡಿನಲ್ಲಿ ಯಾರೊಬ್ಬರೂ ಜೀವನ ಸಾಗಿಸುವುದು ಕಷ್ಟ. ಈ ವ್ಯಾಖ್ಯಾನ/ಆದೇಶದ ಅನ್ವಯ ಶಿವಮೊಗ್ಗ ಜಿಲ್ಲೆಯ 25 ಸಾವಿರ ಕುಟುಂಬಗಳು 20 ಸಾವಿರ ಹೆಕ್ಟೇರ್‌ಗೂ ಹೆಚ್ಚು ಪ್ರದೇಶವನ್ನು 'ಒತ್ತುವರಿ' ಮಾಡಿಕೊಂಡಂತಾಗುತ್ತದೆ! ಇವರನ್ನೆಲ್ಲ ಒಕ್ಕಲೆಬ್ಬಿಸಬೇಕಂತೆ!

ಇದೇ ಆದೇಶ ಹಿಡಿದು ಚಿಕ್ಕಮಗಳೂರು ಜಿಲ್ಲೆಯಲ್ಲಾಗಲೇ ಒಕ್ಕಲೆಬ್ಬಿಸುವಿಕೆ ಶುರುವಾಗಿದೆ. ತತ್ಕೊಳ ಅರಣ್ಯ ಪ್ರದೇಶದಿಂದ 420 ಕುಟುಂಬಗಳನ್ನು ಹೊರ ಹಾಕಲಾಗಿದೆ. ಸಾರಗೋಡುವಿನಲ್ಲಿ 589 ಕುಟುಂಬಗಳಿಗೆ ಹೊರಹೋಗಲು ಗಡುವು ನೀಡಲಾಗಿದೆ. ಕಳಸಾ ಮೀಸಲು ಅರಣ್ಯ ಪ್ರದೇಶದಲ್ಲಿ 670 ಕುಟುಂಬಗಳಿಗೆ ನೋಟೀಸ್ ಜಾರಿಯಾಗಿದೆ. ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿ 5 ಸಾವಿರ ಆದಿವಾಸಿ, ರೈತ ಕುಟುಂಬಗಳನ್ನು, ಕುವೆಂಪು ಜೈವಿಕ ಉದ್ಯಾನವನದಿಂದ 13 ಸಾವಿರ ಕುಟುಂಬಗಳನ್ನು ಎತ್ತಂಗಡಿ ಮಾಡಲು ಸಂಚು ರೂಪಿಸಲಾಗಿದೆ.

ಒಟ್ಟಿನಲ್ಲಿ ಸರ್ಕಾರದ ಪ್ರಕಾರ ರಾಜ್ಯದಲ್ಲಿ ಒಟ್ಟು 1 ಲಕ್ಷ 12 ಸಾವಿರದ 554 ಕುಟುಂಬಗಳು 91, 902 ಹೆಕ್ಟೇರ್ ಪ್ರದೇಶವನ್ನು ಬಳಸುತ್ತಿದ್ದು, ಮೊದಲ ಹಂತದಲ್ಲಿ ಈ ಎಲ್ಲ ಕುಟುಂಬಗಳನ್ನು ಎತ್ತಂಗಡಿ ಮಾಡಲಾಗುವುದಂತೆ. ಅಂದರೆ ಇಲ್ಲಿ ಒಂದು ಕುಟುಂಬಕ್ಕೆ ಸರಾಸರಿ ಒಂದು ಹೆಕ್ಟೇರ್ ಭೂಮಿಯೂ ಇಲ್ಲ! ಇವರೆಲ್ಲ ಅತಿಸಣ್ಣ ಹಿಡುವಳಿದಾರರು. ಇದೇ ಯೋಜನೆ ಮುಂದುವರೆದರೆ ಎಲ್ಲ ಮಲೆನಾಡಿಗರನ್ನೂ ಎತ್ತಂಗಡಿ ಮಾಡಿ, ಸಾಮ್ರಾಜ್ಯಶಾಹಿಗಳ ಕೈಗೆ ಮಲೆನಾಡನ್ನು ಒಪ್ಪಿಸಿಬಿಡುತ್ತಾರೆ! ಸಾಮ್ರಾಜ್ಯಶಾಹಿಗಳ ಈ ಹುನ್ನಾರಗಳನ್ನು ಸಂಘಟಿತವಾಗಿ ಎದುರಿಸದೆ ಮಲೆನಾಡಿನ ಪ್ರಗತಿಯ ಕನಸನ್ನು ಕಾಣಲಾಗುವುದಿಲ್ಲ.

80 ರಿಂದ 200 ಕ್ಕೂ ಹೆಚ್ಚು ಇಂಚು ಮಳೆ ಬೀಳುವ ಪ್ರದೇಶ ಮಲೆನಾಡು. ಇಂತಹ ಮಳೆಕಾಡು ಪ್ರಪಂಚದಲ್ಲಿರೋದು ಶೇ. 3 ರಷ್ಟು ಮಾತ್ರ. ಇತರೆಲ್ಲ ಕಾಡುಗಳು ಶ್ವಾಸಕೋಶಗಳಂತೆ ವರ್ತಿಸಿದರೆ, ಮಲೆನಾಡಿನಂತಹ ಮಳೆಕಾಡುಗಳು ಕಿಡ್ನಿಗಳ ತರಹ ಕಾರ್ಯ ನಿರ್ವಹಿಸುತ್ತಾ ಪರಿಸರ ಸಮತೋಲನ ಕಾಪಾಡುತ್ತವೆ. ಇಂತಹ ಮಳೆಕಾಡನ್ನು ಬಹುರಾಷ್ಟ್ರೀಯ ಕಂಪನಿಗಳ ಮಡಿಲಿಗೆ ಹಾಕುವುದೆಂದರೆ ಅದು ಮಲೆನಾಡಿಗಷ್ಟೇ ಅಲ್ಲ, ಒಟ್ಟಾರೆ ಪ್ರಪಂಚದ ಪರಿಸರದ ಸಮತೋಲನಕ್ಕೆ ಧಕ್ಕೆ ತಂದಂತೆ. ಅಮೆರಿಕದ 30 ಕೋಟಿ ಜನ ಶೇ.35 ರಷ್ಟು ಪರಿಸರನಾಶ ಮಾಡುತ್ತಿರುವುದರಿಂದ ಭೂಮಿಯ ಉಷ್ಣಾಂಶ ಏರುತ್ತಲೇ ಇದೆ. ಪರಿಸರ ಸಮತೋಲನಕ್ಕಾಗಿ 178 ದೇಶಗಳು ಸೇರಿ ಮಾಡಿಕೊಂಡಿರುವ ಒಪ್ಪಂದಕ್ಕೆ ಅಮೆರಿಕ ವಿರೋಧ ಮಾಡುತ್ತಿದೆ. ಇದರ ಉದ್ದೇಶವಿಷ್ಟೇ: ತೃತೀಯ ಜಗತ್ತಿನಲ್ಲಿರುವ ಸಮೃದ್ಧ ಕಾಡುಗಳನ್ನು ಅಮೆರಿಕದಂತಹ ದೇಶಗಳ ಕಂಪನಿಗಳಿಗೆ ಬಿಟ್ಟು ಕೊಡುವುದು. ಅವು ಅಷ್ಟಿಷ್ಟು ಪರಿಹಾರ ಕೊಟ್ಟಂತೆ ಮಾಡಿ ಪ್ರವಾಸೋದ್ಯಮದಲ್ಲಿ ಲಾಭ ಮಾಡಿಕೊಳ್ಳುತ್ತಾ, ಇಲ್ಲಿನ ಜೀವವೈವಿಧ್ಯದ ಮೇಲೆ, ಔಷಧಿ ಸಸ್ಯಗಳ ಮೇಲೆ ಪೇಟೆಂಟ್ ಪಡೆಯುವ ಹುನ್ನಾರವಷ್ಟೇ.

ಎರಡನೆಯದಾಗಿ, ಮಲೆನಾಡಿನ ಕೃಷಿಕ ವರ್ಗ ಇಂದು ವಲಸೆ ಹೋಗುವಂತಹ ಪರಿಸ್ಥಿತಿ ಉಂಟಾಗಿದೆ. ಜಾಗತೀಕರಣದ ದುಷ್ಪರಿಣಾಮದಿಂದ ಬೆಳೆದ ಬೆಳೆಗೆ ಸರಿಯಾದ ಧಾರಣೆ ಸಿಗುತ್ತಿಲ್ಲ. 1996-97 ರಲ್ಲಿ ಕ್ವಿಂಟಾಲ್‌ಗೆ ಮೂರು ಸಾವಿರ ರೂ. ಇದ್ದ ಕಾಫಿದರ ಇಂದು 500 ರೂ. ಅಂದು ಕೆ.ಜಿ. ವೆನಿಲ್ಲಾಕ್ಕೆ ನಾಲ್ಕು ಸಾವಿರವಿದ್ದರೆ ಇಂದು 500 ರೂ. ಯಾಲಕ್ಕಿ ದರ ಕೆ.ಜಿ.ಗೆ 700 ರಿಂದ 250 ಕ್ಕೆ ಕುಸಿದಿದೆ. ಕ್ವಿಂಟಾಲ್‌ಗೆ 22 ಸಾವಿರವಿದ್ದ ಅಡಿಕೆದರ ಇಂದು 9 ಸಾವಿರಕ್ಕೆ ಇಳಿದಿದೆ. ವಾಣಿಜ್ಯ ಬೆಳೆಗಳ ಪ್ರದೇಶವಾದ ಮಲೆನಾಡಿನಲ್ಲಿಂದು ರೈತಾಪಿವರ್ಗ ಧೃತಿಗೆಟ್ಟಿದೆ. ಶೇ. 60 ರಷ್ಟಿರುವ ಭೂ ರಹಿತರಿಗೆ ದಿಕ್ಕೇ ತೋಚದಂತಾಗಿದೆ. ಅಂದರೆ ಮಲೆನಾಡಿನ ಜಾಗತಿಕ ಪೈಪೋಟಿಯಿಂದ ದೈತ್ಯ ಬಹುರಾಷ್ಟ್ರೀಯ ಕಂಪನಿಗಳ ಏಕಸ್ವಾಮ್ಯದಿಂದ ಪ್ರಭುತ್ವ ರಕ್ಷಣೆ ಸಿಗದಿದ್ದರೆ ಪ್ರಗತಿಯಿರಲಿ–ಅಧೋಗತಿಯಾಗುತ್ತದೆ.

ಇದೆಲ್ಲವನ್ನೂ ಗಮನದಲ್ಲಿಟ್ಟುಕೊಂಡರೆ, ಸುಸ್ಥಿರ–ಸಮಸ್ತ ಯೋಜನೆಯಿಂದ ಮಾತ್ರ ಇಲ್ಲಿನ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ. ಇಲ್ಲಿನ ಅಮೂಲ್ಯ ಸಂಪತ್ತು ಇಲ್ಲಿನ ಮೂಲ ನಿವಾಸಿಗಳ ಹಕ್ಕು. ಅರಣ್ಯ ಇಲಾಖೆ ಕೇವಲ ಉಸ್ತುವಾರಿ ನೋಡಿಕೊಂಡು ಸ್ಥಳೀಯರಿಗೆ ಜವಾಬ್ದಾರಿ ನೀಡಬೇಕು. ಕಾಡಿನಲ್ಲಿ ಅಕೇಸಿಯಾ ಬೆಳೆಸುವುದನ್ನು ಕೂಡಲೇ ನಿಲ್ಲಿಸಬೇಕು ಹಾಗೂ ಸರ್ಕಾರಗಳು ಸಾಮ್ರಾಜ್ಯಶಾಹಿಗಳಿಗೆ ದೇಶವನ್ನು ಮಾರುವುದನ್ನು ನಿಲ್ಲಿಸಿ ರೈತರ ರಕ್ಷಣೆಗೆ ಧಾವಿಸಬೇಕು. ಆದಿವಾಸಿಗಳು ಸೇರಿದಂತೆ ಸಮಸ್ತ ಮಲೆನಾಡಿಗರ ಹೋರಾಟಕ್ಕೆ ನಾಡಿನ ಸಾಹಿತಿಗಳು, ಪ್ರಗತಿಪರರೆಲ್ಲಾ ಸಂಪೂರ್ಣ ಬೆಂಬಲ ಕೊಡಬೇಕು.

ಈ ಸಮ್ಮೇಳನ ಹಿಂದಿನಂತಿರಲಿಲ್ಲ

ಎಪ್ಪತ್ತಮೂರನೆಯ ಕನ್ನಡ ಸಾಹಿತ್ಯ ಸಮ್ಮೇಳನ ಹಲವು ವಿಧಗಳಲ್ಲಿ ಈ ಹಿಂದಿನಂತಿರಲಿಲ್ಲ. ಉದ್ಘಾಟನಾ ದಿನದಂದು 'ಸಂಭ್ರಮದ ಆರಂಭ' ಎಂಬ ಮುಖಪುಟ ಶೀರ್ಷಿಕೆಯಡಿ ವರದಿ ಮಾಡಿದ ನಮ್ಮ ದಿನಪತ್ರಿಕೆಗಳು, ನಂತರದ ಮೂರು ದಿನ ಅದೇ ಮುಖಪುಟದಲ್ಲಿ ಪ್ರಕಟಿಸಿದ ಜಂಗೀಕುಸ್ತಿಯ ವರದಿಗಳೇ ಈ ಬಾರಿಯ ಭಿನ್ನತೆಯನ್ನು ಎತ್ತಿ ತೋರಿಸುತ್ತವೆ. ಅಷ್ಟು ಮಾತ್ರವಲ್ಲದೆ ಟಿವಿ 9 ಎಂಬ ಚಾನೆಲ್ ಅಂತೂ ಕ್ಷಣ ಕ್ಷಣಕ್ಕೂ 'ರೋಚಕ' ಸಂಗತಿಗಳನ್ನು ನೇರ ಪ್ರಸಾರ ಮಾಡುತ್ತಿದ್ದ ಪರಿಯನ್ನು ಟೀವಿಯಲ್ಲಿ ಮಾತ್ರ ನೋಡಿದವರಿಗೆ ಸಮ್ಮೇಳನದಲ್ಲಿ ನೇರವಾಗಿ ಪಾಲ್ಗೊಳ್ಳದೆ ಇದ್ದುದರಿಂದ, ಹಲವು ರಂಜನೀಯ ದೃಶ್ಯಗಳನ್ನು ಕಳೆದುಕೊಂಡೆವು ಎಂದೂ ಅನಿಸಿರಬಹುದು. ಆದರೆ ಈ ಬಾರಿಯ ಸಮ್ಮೇಳನದ ಕೆಲವು ಗೋಷ್ಠಿಗಳನ್ನು ಅರ್ಥಪೂರ್ಣವಾಗಿ ಮಾಡಬೇಕೆನ್ನುವ ಪ್ರಯತ್ನ ಸಮ್ಮೇಳನವನ್ನು ಯೋಜಿಸಿದ್ದವರ ತಲೆಯಲ್ಲಿತ್ತೆಂಬುದು ಮೇಲ್ನೋಟಕ್ಕೇ ಕಾಣುತ್ತಿತ್ತು. ಜಿ.ಎಸ್. ಶಿವರುದ್ರಪ್ಪ ಮತ್ತು ಕೆ.ಎಸ್. ನಿಸಾರ್ ಅಹಮದ್ ಅವರೂ ಸಹ ತಮ್ಮ ನಿಲುವು–ವಿಚಾರಗಳಿಂದ ಅದಕ್ಕೆ ಇನ್ನಷ್ಟು ಘನತೆ ಹೆಚ್ಚಿಸುವ ಪ್ರಯತ್ನ ಮಾಡಿದ್ದರು.

ಆದರೆ ಚೆಡ್ಡಿ ನಾಯಕರು ಮತ್ತು ಅವರ ಪುಂಡ–ಪಡೆ ಇದೆಲ್ಲವನ್ನು ಹಾಳುಗೆಡವಲು ಸಾಕಷ್ಟು ಸರ್ಕಸ್ ನಡೆಸಿದರು. ಸಮ್ಮೇಳನದ ಮೊದಲ ದಿನ ಆಮಂತ್ರಣ ಪತ್ರಿಕೆಯ ಪ್ರಕಾರ 'ಸಮ್ಮೇಳನಾಧ್ಯಕ್ಷರ ನೇತೃತ್ವದಲ್ಲಿ ಕನ್ನಡ ಭುವನೇಶ್ವರಿಯ ಮೆರವಣಿಗೆ' ನಡೆಯಬೇಕಿತ್ತು. ಆದರೆ ಅಲ್ಲಿ ರಾರಾಜಿಸಿದ್ದು ಮೂವರು ಚೆಡ್ಡಿವೀರರ ಅಸಹ್ಯದ ರಥಯಾತ್ರೆ. ಅಡ್ವಾಣಿ–ಸಿ.ಟಿ. ರವಿಗಳ ರಥಯಾತ್ರೆಯ ಮಾದರಿಯ ವಾಹನದಲ್ಲಿ ಮಧ್ಯೆ ಹರಕೆಯ ಕುರಿಯ ಹಾಗೆ ಸಮ್ಮೇಳನಾಧ್ಯಕ್ಷ ನಿಸಾರ್ ಅಹಮದ್ ಮತ್ತು ಮುನಿಸು ಮುಖ ಹೊತ್ತಿದ್ದ ಚಂಪಾ ಅವರಿದ್ದರೆ ಅಕ್ಕ–ಪಕ್ಕ ಯಡಿಯೂರಪ್ಪ, ಶಂಕರಮೂರ್ತಿ ಮತ್ತು ಈಶ್ವರಪ್ಪಗಳು ಬೀಗುತ್ತಾ, ಸುತ್ತಲಿನ ಜನರತ್ತ ಕೈ ಬೀಸುತ್ತಾ ಇದ್ದರು. ಇದು 'ಬಿಜೆಪಿ ಸಮ್ಮೇಳನ' ಆಗಿ ಹೋಯ್ತು ಎಂದು ಶಿವಮೊಗ್ಗೆಯ ಸಾಮಾನ್ಯ ಜನರು ಹೇಳಿಕೊಳ್ಳುವಂತಾಗಲು ಈ ಮೆರವಣಿಗೆಯಷ್ಟೇ ಕಾರಣವಾಗಿರಲಿಲ್ಲ. ಸಮ್ಮೇಳನದ ಛತ್ರಪತ್ರದಿಂದ ಹಿಡಿದು ಅತಿಥಿಗಳಿಗೆ ನೀಡಿದ ಸ್ಮರಣ ಫಲಕದವರೆಗೆ ಎಲ್ಲೆಡೆ ಈ ಪ್ರಭೃತಿಗಳ ಮುಖ ರಾರಾಜಿಸುತ್ತಿತ್ತು.

ಇದಕ್ಕೆ ಅಪವಾದವೆಂಬಂತೆ, ಮುಖ್ಯ ವೇದಿಕೆಯಲ್ಲಿ ಚರ್ಚೆಗೆ ಅವಕಾಶವಿದ್ದ ಏಳು ಗೋಷ್ಠಿಗಳ ಪೈಕಿ ನಾಲ್ಕರಲ್ಲಿ ಪ್ರಗತಿಪರರು, ಚಿಂತಕರುಗಳು ಗಟ್ಟಿಯಾದ ವಿಚಾರ ಮಂಡಿಸಿದರು. 21 ನೆಯ ತಾರೀಖು ರಾತ್ರಿ ಕಲ್ಕುಳಿ ವಿಠಲ ಹೆಗಡೆಯವರ ಭಾಷಣಕ್ಕೆ ಮುಂಚೆ, ಬೆಳಗ್ಗಿನಿಂದ ಮಾತನಾಡಿದ ಕೆ.ಎಸ್. ನಿಸಾರ್ ಅಹ್ಮದ್, ಜಿ.ಎಸ್. ಶಿವರುದ್ರಪ್ಪ, ರಹಮತ್ ತರೀಕೆರೆ, ಬಿ.ಎಂ. ಪುಟ್ಟಯ್ಯ, ಡಿ.ಎಸ್. ನಾಗಭೂಷಣ, ಕೆ.ಟಿ. ಗಂಗಾಧರ ಇವರೆಲ್ಲರೂ ಒಂದಲ್ಲಾ ಒಂದು ರೀತಿಯಲ್ಲಿ ಸಂಘ ಪರಿವಾರದ ರಾಜಕಾರಣ ಮತ್ತು ಸಾಂಸ್ಕೃತಿಕ ಹುನ್ನಾರದ ವಿರುದ್ಧ ಮಾತನಾಡಿದರು. ಆದ್ದರಿಂದಲೇ ಕಲ್ಕುಳಿಯವರ ಭಾಷಣಕ್ಕೆ ಅಡ್ಡಿಪಡಿಸಲು ಯತ್ನಿಸಿದ ಆರೆಸ್ಸೆಸ್/ಎಬಿವಿಪಿ ಕಾರ್ಯಕರ್ತರ ದಾಂಧಲೆಯ ಬಗ್ಗೆ ಸಮ್ಮೇಳನದಲ್ಲಿ ಹಾಜರಿದ್ದ ಸಾಹಿತಿಯೊಬ್ಬರು ಅರ್ಥೈಸಿದ್ದು ಹೀಗೆ: 'ಕನ್ನಡ ಸಾಹಿತ್ಯದ ಇಡೀ ಪರಂಪರೆ ಈ ಫ್ಯಾಸಿಸಂನ ವಿರುದ್ಧವಿದೆ, ಈ ಬಾರಿ ತಾವು ಅಧಿಕಾರದಲ್ಲಿದ್ದೇವೆಂಬ ಮದದಲ್ಲಿ ಈ ಆರೆಸ್ಸೆಸ್ಸಿನ ಗ್ಯಾಂಗ್ ಇದನ್ನು ಆಕ್ರಮಿಸಿಕೊಳ್ಳಲು ಪ್ರಯತ್ನಿಸಿತು; ಆದರೆ ಸಮ್ಮೇಳನಾಧ್ಯಕ್ಷರಾದಿಯಾಗಿ ಎಲ್ಲರೂ ಸಂಘಪರಿವಾರದ ವಿರುದ್ಧವೇ ಮಾತನಾಡಿದರು. ಜಿಎಸ್ಸೆಸ್ ಅವರಂತೂ ಕನ್ನಡ ಸಾಹಿತ್ಯ ಪರಂಪರೆಯು ಜನಪರವಾಗಿ ಮತ್ತು ಪುರೋಹಿತಶಾಹಿಯ ವಿರುದ್ಧವಿದೆ ಎಂಬುದನ್ನು ಸ್ಪಷ್ಟವಾಗಿ ನಿರೂಪಿಸಿದರು. ಹಾಗಾಗಿ ಎಬಿವಿಪಿಯ ಈ ದಾಳಿಯು ಕನ್ನಡ ಪರಂಪರೆಯ ವಾರಸುದಾರಿಕೆಯನ್ನು ಪಡೆಯಲಾಗದ್ದಕ್ಕೆ ನಡೆಸಿದ ಹತಾಶ ಪ್ರಯತ್ನವೆಂದು ನನಗೆ ತೋರುತ್ತದೆ.'

ಈ ಸಾರಿಯ ಸಮ್ಮೇಳನದಲ್ಲಿ ಇಷ್ಟು ಮಂದಿ ಪ್ರಗತಿಪರ ಮತ್ತು ಸಮಕಾಲೀನ ಕರ್ನಾಟಕದ ಶ್ರೇಷ್ಠ ಚಿಂತಕರು ಭಾಗವಹಿಸುವಂತಾಗಿದ್ದಕ್ಕೆ ಚಂಪಾ ಮತ್ತು ಸಮ್ಮೇಳನಕ್ಕೆ ಸಂಬಂಧಪಟ್ಟ ಸಮಿತಿಗೆ ಅಭಿನಂದನೆ ಸಲ್ಲಬೇಕು. ಸಾಹಿತ್ಯ ಸಮ್ಮೇಳನದಲ್ಲಿ ಪದೇಪದೇ ಪುನರಾವರ್ತನೆಯಾಗುವ ಅದೇ ಗೋಷ್ಠಿಗಳು ಅದೇ ವೃತ್ತಿನಿರತ ಸಾಹಿತ್ಯ ಪರಿಷತ್ ಸಾಹಿತಿಗಳ ಭಾಷಣಗಳು ಮತ್ತು ಯಥಾಪ್ರಕಾರದ ತೌಡು ಕುಟ್ಟುವ ವಿಚಾರಗಳಿಗಿಂತ ಭಿನ್ನವಾಗಿ, ವಿಚಾರಪೂರ್ಣ ಗೋಷ್ಠಿಗಳನ್ನು ನಡೆಸುವ ಪ್ರಯತ್ನ ಹಿಂದಿನ ಸಮ್ಮೇಳನಗಳಲ್ಲೂ ನಡೆದಿತ್ತು. ಅದಕ್ಕೂ ಹಿಂದೆ ಕ.ಸಾ.ಪ.ದ. 'ರಾಜ ಸೇವಾಸಕ್ತ' ಧೋರಣೆಗಳು, ಕಳಪೆ ಸಾಹಿತ್ಯ ಚಟುವಟಿಕೆಗಳ ಕಾರಣದಿಂದ ದೂರಾದ ಪ್ರಗತಿಪರ ಸಾಹಿತಿಗಳು 'ಬಂಡಾಯ'ವನ್ನು ಕಟ್ಟಿಕೊಂಡ ಮೇಲೆ ಸಾಹಿತ್ಯ ಪರಿಷತ್‌ನ ಸಮ್ಮೇಳನಗಳು ವಿಚಾರದ ದೃಷ್ಟಿಯಿಂದ ಕಳೆಗುಂದಿದ್ದವು. ಆಗಿನಿಂದಲೇ ಸಮ್ಮೇಳನಗಳಿಗೆ ಅಂಟಿಕೊಂಡಿದ್ದ ರಾಜಕಾರಣಿಗಳು ಇದುವರೆಗೂ ಇನ್ನೂ ತೊಲಗಿಲ್ಲದಿರುವುದು ಕನ್ನಡದ ದುರ್ದೈವವಷ್ಟೇ. ಈ ಬಾರಿ ನಡೆದ ಯಡ್ಡಿ ಮೆರವಣಿಗೆಯಂತೂ ಅತಿರೇಕದ ಪರಮಾವಧಿಯಾಗಿತ್ತು. 'ಬಂಡಾಯ'ದಲ್ಲಿ ಬಂಡಾಯ ಕಡಿಮೆಯಾಗಿ ಇಲ್ಲೂ ರಾಜ ಸೇವಾಸಕ್ತತೆ ಹೆಚ್ಚಾಗುತ್ತಾ ಸಾಗಿದಂತೆ, ಸಾಹಿತ್ಯ ಸಮ್ಮೇಳನಕ್ಕೂ ಬಂಡಾಯದವರ ಪ್ರಯಾಣ ಸಾಗಿತು. ಬಂಡಾಯ ಪ್ರಮುಖರಲ್ಲೊಬ್ಬರಾಗಿದ್ದ ಚಂಪಾ ಅವರು ಕಸಾಪದ ಅಧ್ಯಕ್ಷರಾಗುವವರೆಗೂ ಇದು ಮುಂದುವರೆಯಿತು. ಈ ಸಾರಿಯ ಸಮ್ಮೇಳನದಲ್ಲಿ ಹಲವು ಗಂಭೀರ ಸಾಹಿತಿಗಳು, ಗಂಭೀರ ವಿಚಾರಗಳನ್ನು ಮಂಡಿಸಿದ ಮೇಲೆ (ನೆರೆದಿದ್ದ ಸಾಹಿತ್ಯಾಭಿಮಾನಿಗಳು ಅಷ್ಟೇನೂ ಗಂಭೀರವಾಗಿ ಇವನ್ನು ಆಲಿಸಲಿಲ್ಲ ಎಂಬ ಮಾತಿದೆ), ಈಗ ಸದರಿ ಪ್ರಮಾಣವನ್ನು ಏನೆಂದು ಕರೆಯಬೇಕು! ಬಂಡಾಯದ ಬಿಸಿ ಕಸಾಪ ಸಮ್ಮೇಳನದೊಳಕ್ಕೂ ಪ್ರವೇಶ ಪಡೆಯಿತು ಎಂದೇ? ಮುಂಬರುವ ಕಾಲವೇ ಹೇಳಬೇಕು.

–ಡಾ. ವಾಸು

ಕೆಲವು ಅರ್ಥಹೀನ ನಿರ್ಣಯಗಳು

ನಿರ್ಣಯಗಳಲ್ಲಿ ರಾಜಿ, ಸಮಾರೋಪದ ಮುನ್ನಾದಿನ ರಾತ್ರಿ ನಡೆಯಬೇಕಿದ್ದ ಕಸಾಪದ ಕಾರ್ಯಕಾರಿ ಸಮಿತಿ ಸಭೆ ರದ್ದಾಯಿತು. ಚಂಪಾರ ವಿರುದ್ಧ ಕೆಲ ಜಿಲ್ಲಾ ಪದಾಧಿಕಾರಿಗಳು ಕೆಂಡ ಕಾರಿದರು. ಎಲ್ಲಾ ಸಮ್ಮೇಳನಗಳ ಸಂದರ್ಭದಲ್ಲೂ 'ಒಳ್ಳೆಯ ಜವಾಬ್ದಾರಿ' ಸ್ಥಾನಗಳ ಹಂಚಿಕೆಗಳ ವಿಚಾರದಲ್ಲಿ ಕೆಲವರಿಗೆ ಅನ್ಯಾಯವಾದಾಗ ಪ್ರತಿಭಟನೆಗಳು ನಡೆಯುತ್ತವೆ. ಅದರ ಜೊತೆಗೆ ಚಂಪಾ ಅವರು ಸರ್ವಾಧಿಕಾರಿ, ಬೇರೆಯವರ ಮಾತನ್ನು ಕೇಳುವುದಿಲ್ಲ ಎಂಬ ಆರೋಪವೂ ಇದೆ. ಕಸಾಪ ಅಧ್ಯಕ್ಷರಾಗಲು ತಾನೇ ಹೇಳುತ್ತಿದ್ದ ಮೌಲ್ಯಗಳನ್ನು ಗಾಳಿಗೆ ತೂರಿದರು, ಇಲ್ಲಿಗೆ ಬಂದ ಮೇಲೆ ಕಸಾಪದ ಸಂಪ್ರದಾಯಗಳಿಗೂ ಹೊಂದಿಕೊಳ್ಳುತ್ತಿಲ್ಲ ಎಂಬ ಮಾತೂ ಇದೆ.

ಈ ಬಾರಿ ಕೆಲವು ಪ್ರಮುಖ ಭಾಷಣಕಾರರನ್ನು ಕರೆಯದಿರುವಂತೆ ಎಂತಹ ಒತ್ತಡ ಬಂದಾಗಲೂ ಜಗ್ಗದ ಚಂಪಾ ಕೊನೆಯ ದಿನದ ಕಾರ್ಯಕಾರಿ ಸಮಿತಿಯಲ್ಲಿ ಬಂದ ಪ್ರತಿರೋಧದೆದುರು ಮಾತ್ರ ಮೆತ್ತಗಾದರು ಎಂದೂ ಹೇಳಲಾಗುತ್ತಿದೆ.

ಸಮಾರೋಪಕ್ಕೆ ಮುಂಚೆ ಮಂಡಿಸಿದ ನಿರ್ಣಯಗಳಲ್ಲಿ ಹಲವು ಎಂದಿನ 'ಸಾಂಪ್ರದಾಯಿಕ' ನಿರ್ಣಯಗಳಾಗಿದ್ದವು. ಸಾಹಿತ್ಯ ಸಮ್ಮೇಳನವು ಶ್ರದ್ಧಾಂಜಲಿ ನಿರ್ಣಯದಲ್ಲಿ ಮಾಜಿ ಸಚಿವ ಎಸ್. ರಮೇಶ್ ಹಾಗೂ ಪ್ರಮೋದ್ ಮಹಾಜನ್ ಅವರುಗಳ ಹೆಸರೂ ಇತ್ತು. ಮಹಾಜನ್ ಯಾಕೆ ಕೊಲೆಯಾದ ಎಂಬ ವಿಚಾರ ಯಾರಿಗೆ ತಾನೆ ಗೊತ್ತಿಲ್ಲ! ಗೋಷ್ಠಿಗಳಲ್ಲಿ ಮಾತನಾಡಿದವರಲ್ಲಿ ಹಲವರು ಕನ್ನಡ–ಕರ್ನಾಟಕ ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳಲ್ಲಿ ಜಾಗತೀಕರಣ ಮತ್ತು ಕೋಮುವಾದವನ್ನು ವಿಶೇಷವಾಗಿ ಪ್ರಸ್ತಾಪಿಸಿದ್ದರು. ಕೋಮುವಾದದ ವಿರುದ್ಧ ಯಡ್ಡಿ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದ ಸಮ್ಮೇಳನದಲ್ಲಿ ನಿರ್ಣಯ ಹೇಗೆ ಸಾಧ್ಯ? ಜಾಗತೀಕರಣದ ಪ್ರಸ್ತಾಪ ಒಂದು ನಿರ್ಣಯದಲ್ಲಿ ಬಂದಿತು. ಏನೆಂದು ಕಿವಿ ನಿಮಿರಿಸಿ ಕೇಳಿದರೆ 'ಜಾಗತೀಕರಣ, ಉದಾರೀಕರಣ, ಖಾಸಗೀಕರಣದ ಇಂದಿನ ದಿನಗಳಲ್ಲಿ ನಮ್ಮ ನಾಡಿನ ಯುವಜನತೆ ಸಿದ್ಧರಾಗಿರಲು, ಇಂದಿನ ಎಲ್ಲರಿಗೆ ಹಣಕಾಸು ನಿರ್ವಹಣೆಯ ಕುರಿತು ಪಠ್ಯಕ್ರಮವನ್ನು ಸಿದ್ಧಪಡಿಸಬೇಕು' ಎಂಬುದಾಗಿತ್ತು. ಇದಕ್ಕೇನು ಹೇಳುವುದು?



ಅಂದಿನ ತಿಮ್ಮೇನಹಳ್ಳಿಯ ಪಳೆಯುಳಿಕೆಯಂತಿರುವ




ಇಂದಿನ ತಿಮ್ಮೇನಹಳ್ಳಿ

ತಿಮ್ಮೇನಹಳ್ಳಿಯ ದಾಯಾದಿ ಕಾಳಗ

ರಿವೇಂಜ್ ಕಿಲ್ಲಿಂಗ್ಸ್ 9

ರಾ. ಸೋಮನಾಥ್



ಕೆಲವರ ಪ್ರಕಾರ ಅದು ಶಾಪವಂತೆ. ದ್ವಾಪರ ಯುಗದಲ್ಲಿ ಹೇಗೆ ಯಾದವರು ತಮ್ಮತಮ್ಮಲ್ಲೇ ಕಚ್ಚಾಡಿ ನಾಶವಾದರೋ ಹಾಗೆ ತಿಮ್ಮೇನಹಳ್ಳಿಯ ದಾಯಾದಿ ರೌಡಿಗಳು ತಮ್ಮನ್ನು ತಾವೇ ಕೊಂದುಕೊಂಡು ನಿರ್ನಾಮವಾಗುತ್ತಾರಂತೆ!

ಹಾಗಿಲ್ಲದಿದ್ದರೆ ತಿಮ್ಮೇನಹಳ್ಳಿಯ ರೌಡಿ ಗೋವಿಂದ ತನ್ನ ದಾಯಾದಿ ತಮ್ಮಯ್ಯನನ್ನೇ ಏಕೆ ಕೊಲ್ಲಿಸುತ್ತಿದ್ದ? ತಮ್ಮಯ್ಯನ ಹತ್ಯೆಗೆ ಪ್ರತೀಕಾರವಾಗಿ ತಿಮ್ಮೇನಹಳ್ಳಿ ಸೂರಿ ಎಂಬ ತನ್ನದೇ ಮತ್ತೊಬ್ಬ ದಾಯಾದಿಯನ್ನು ತಮ್ಮಯ್ಯನ ತಮ್ಮ ಮನೋಹರನ ಹುಡುಗರು ಏಕೆ ಕೊಲ್ಲಬೇಕಿತ್ತು? ಮತ್ತು ಅದಕ್ಕೆ ಪ್ರತೀಕಾರವೆಂದು ದಾಯಾದಿ ಗೋವಿಂದನ ಬಂಟರು ತಮ್ಮಯ್ಯನ ಬದುಕುಳಿದ ಒಬ್ಬನೇ ಒಬ್ಬ ತಮ್ಮ ಮನೋಹರನನ್ನು ಮುಗಿಸಲು ಇವತ್ತಿಗೂ ರೌಂಡಿಂಗ್ ಮಾಡುತ್ತಿರುವುದೇಕೆ?


ಹೋಗಲಿ; ಹುಡುಗರೇನೋ ಹೊಡೆದಾಡುತ್ತಾರೆ. ಅವರ ತಾಯಿ-ತಂದೆಯರು ಕೂಡ ತಮ್ಮ ಮಕ್ಕಳಂತೆ ಒಬ್ಬರನ್ನೊಬ್ಬರು ಮುಗಿಸಲು ಕತ್ತಿ ಮಸೆಯುತ್ತಿದ್ದಾರಲ್ಲ; ಆ ಊರಲ್ಲಿ ಬುದ್ಧಿ ಹೇಳುವ ಒಬ್ಬನೇ ಒಬ್ಬ ಹಿರಿಯ ನಿಲ್ಲವೆ?

ಇದು ಬೆಂಗಳೂರಿನ ತಿಮ್ಮೇನಹಳ್ಳಿ ಎಂಬ ಏರಿಯಾ ಕುರಿತು ಪ್ರತಿಯೊಬ್ಬರನ್ನೂ ಕಾಡುವ ಪ್ರಶ್ನೆ. ವಿಜಯನಗರದ ಕರುಳಬಳ್ಳಿಯಂತಿರುವ ತಿಮ್ಮೇನಹಳ್ಳಿಗೆ ಗೋವಿಂದರಾಜನಗರ ಎಂದು ನಾಮಕರಣ ಮಾಡಿದ್ದು ವಾಟಾಳ್ ನಾಗರಾಜ್. ಅದೇನು ಕರ್ಮವೋ ಬೆಂಗಳೂರು ಪಾತಕ ಲೋಕದಲ್ಲೆಂದೂ ಕಾಣದ ವಿಚಿತ್ರ ಪ್ರವೃತ್ತಿಯೊಂದು ಈ ತಿಮ್ಮೇನಹಳ್ಳಿಗೆ ಶಾಪದಂತೆ ಕಾಡುತ್ತಲೇ ಇದೆ. ಬೇರೆಲ್ಲಾ ಮನುಷ್ಯ ಸಂಬಂಧಗಳಿಗಿಂತಲೂ ರಕ್ತಸಂಬಂಧವೇ ಗಟ್ಟಿ ಎಂಬ ಲೋಕಾರೂಢಿ ಈ ತಿಮ್ಮೇನಹಳ್ಳಿಯ ವಿಷಯದಲ್ಲಿ ಮಾತ್ರ ಉಲ್ಟಾ!

ವರಸೆಯಲ್ಲಿ ಅಣ್ಣನಾಗಬೇಕಿದ್ದವನನ್ನು ತಮ್ಮನೇ ಕೊಲ್ಲಿಸುತ್ತಾನೆ. ತಮ್ಮನಂಥವನನ್ನು ಮುಗಿಸಲು ಅಣ್ಣ ಹೊಂಚು ಹಾಕುತ್ತಾನೆ. ಹೀಗೆ ದಾಯಾದಿಗಳು ತಮ್ಮ ತಮ್ಮಲ್ಲೇ ಹೊಡೆದಾಡಿಕೊಂಡು ನಿರ್ನಾಮವಾಗುವ 'ಯಾದವೀ ಕಲಹ' ಎಂಬ ಪೌರಾಣಿಕ ವೈಷಮ್ಯವೊಂದು ಈ ತಿಮ್ಮೇನಹಳ್ಳಿಗೆ ಅಂಟಿದ್ದು ಕೂಡ ಇಲ್ಲಿನವರು ಜಾತಿಯಲ್ಲಿ ದ್ವಾಪರದ ಶ್ರೀಕೃಷ್ಣನ ಜಾತಿಯಾದ 'ಗೊಲ್ಲರು' ಎಂಬ ಕಾರಣಕ್ಕೇ ಇರಬಹುದಾ?


ಇವತ್ತಿಗೂ ಅರ್ಥವಾಗದ ಪ್ರಶ್ನೆಯಿದು. ಒಂದಂತೂ ಸತ್ಯ ಒಂದು ಹಳ್ಳಿಕೆಟ್ಟರೆ ಏನೆಲ್ಲ ಕೆಡಬಹುದು ಎಂಬುದಕ್ಕೆ ಈ ತಿಮ್ಮೇನಹಳ್ಳಿಗಿಂತ ಮತ್ತೊಂದು ಉದಾಹರಣೆ ಖಂಡಿತ ಸಿಗಲಿಕ್ಕಿಲ್ಲ. ತನ್ನ ಬಂಟ ಅರುಣನನ್ನು ಕೊಲ್ಲಿಸಿದ್ದೇ ತಿಮ್ಮೇನಹಳ್ಳಿ ತಮ್ಮಯ್ಯ ಎಂದು ಭಾವಿಸಿದ ಆತನ ದಾಯಾದಿ ಗೋವಿಂದ 2001 ರ ಏಪ್ರಿಲ್‌ನಲ್ಲಿ ತನ್ನ ಮತ್ತೊಬ್ಬ ಸಂಬಂಧಿ ಸೂರಿಯನ್ನು ಬಿಟ್ಟು ತಮ್ಮಯ್ಯನನ್ನು ಕೊಲ್ಲಿಸುತ್ತಾನೆ. ಇದಕ್ಕೆ ಡಾನ್ ಜೇಕೆಯ ಬೆಂಬಲ ಗಿಟ್ಟಿಸುವುದಕ್ಕೆಂದೇ ಗೋವಿಂದನ ಗ್ಯಾಂಗು 1998 ರ ಅಕ್ಟೋಬರ್ ತಿಂಗಳಲ್ಲಿ ಜೇಕೆಯ ಕಡುವೈರಿ ಲೇಔಟ್ ಮಂಜನನ್ನು ಮುಗಿಸುತ್ತದೆ. ತಮ್ಮಯ್ಯನ ಕೊಲೆ ಕೇಸಿನಿಂದ ಬಚಾವಾಗುವುದಕ್ಕೆಂದೇ ಅದಕ್ಕೆ ಸಾಕ್ಷಿಯಾಗಿದ್ದ ಹತ ತಮ್ಮಯ್ಯನ ರೈಟ್‌ಹ್ಯಾಂಡ್ ಕಾಮಾಕ್ಷಿಪಾಳ್ಯದ ಮಚ್ಚನನ್ನು ಇದೇ ಗೋವಿಂದನ ಗ್ಯಾಂಗು ಹಳೇ ಕಾರ್ಪೊರೇಟರ್ ಗೋಪಾಲಯ್ಯನ ತಂಡದ ಜೊತೆ ಕೈಜೋಡಿಸಿ ಕೊಂದು ಹಾಕುತ್ತದೆ. ತಮ್ಮಯ್ಯ ಮತ್ತು ಮಚ್ಚರ ಹತ್ಯೆಗೆ ಪ್ರತೀಕಾರವಾಗಿ ಸೂರಿ ಮತ್ತು ಆತನ ಜೊತೆಗಿದ್ದ ಟೋನಿಯ ಜೋಡಿ ಕೊಲೆ ನಡೆದುಹೋಗುತ್ತದೆ. ಹೀಗೆ ತಿಮ್ಮೇನಹಳ್ಳಿಯಲ್ಲಿ ಸ್ಫೋಟಿಸಿದ ದಾಯಾದಿ ಕದನದ ಸಣ್ಣ ಕಿಡಿಯೊಂದು ಮುಂದೆ ಕಾಮಾಕ್ಷಿಪಾಳ್ಯ ಸುಂಕದಕಟ್ಟೆ, ಕಡಬಗೆರೆ, ಇತ್ತ ವಿಜಯನಗರಕ್ಕೂ ವ್ಯಾಪಿಸಿ ಬೈಲುರವಿ, ಲಗ್ಗೆರೆಯ ಮಂಡ್ಯ ಕೃಷ್ಣ ಹೆಗ್ಗನಹಳ್ಳಿಯ ಪುನಿತೇಶ, ಮಚ್ಚನ ಇಬ್ಬರು ಶಿಷ್ಯರ ಜೋಡಿ ಕೊಲೆಗಳ ತನಕ ವ್ಯಾಪಿಸಿ ಅಂತಿಮವಾಗಿ ಅದು ಇತ್ತೀಚಿನ ಕೊರಂಗು ಮೇಲಿನ ದಾಳಿಯ ತನಕ ಬಂದು ನಿಂತಿದೆ.

ಹೀಗೆ ಇಡೀ ಬೆಂಗಳೂರು ಕ್ರೈಂ ಲೋಕವನ್ನೇ ರಕ್ತಸಿಕ್ತಗೊಳಿಸಿದ ತಿಮ್ಮೇನಹಳ್ಳಿಯ ಈ ಅಣ್ಣತಮ್ಮಂದಿರ ಕಾಳಗಕ್ಕೆ ಗರ್ಭಸ್ಥಾನ ಅಂತಿದ್ದರೆ ಅದು ತಿಮ್ಮೇನಹಳ್ಳಿಯೆ. ನಿರ್ದಾಕ್ಷಿಣ್ಯವಾಗಿ ಅದನ್ನ ಸಾವಿನ ಮನೆ ಎನ್ನಬಹುದು. ಇವತ್ತು ತಿಮ್ಮೇನಹಳ್ಳಿ ಗೋವಿಂದರಾಜನಗರವಾಗಿ ಬೆಳೆದು ಕಾಂಗ್ರೆಸ್ಸಿನ ಜಿ. ಕೃಷ್ಣಪ್ಪ ಅಲ್ಲಿನ ಕೌನ್ಸಿಲರ್. ಬನ್ನಿಪೇಟೆಯ ಶಾಸಕ ವಿ. ಸೋಮಣ್ಣ ಇಲ್ಲಿನ ಏಕಮೇವಾದ್ವಿತೀಯ ನಾಯಕ. ಇಲ್ಲೊಂದು ಹಳ್ಳಿಯಿತ್ತು ಎಂಬ ಸಣ್ಣದೊಂದು ಸುಳಿವು ಕೂಡ ಸಿಗದಷ್ಟು ಬದಲಾಗಿದೆ ತಿಮ್ಮೇನಹಳ್ಳಿ. ಹೇಳಿಕೇಳಿ ಇದು ಗೊಲ್ಲರ ಏರಿಯಾ. ಯಾವುದೋ ಕಾಲಕ್ಕೆ ಪಕ್ಕದ ಮಾಗಡಿಯಿಂದ ಗುಳೆ ಬಂದು ತಳವೂರಿದ ಗೊಲ್ಲರು ಅದಕ್ಕೆ ತಿರುಪತಿ ತಿಮ್ಮಪ್ಪನ ಹೆಸರಿಟ್ಟರು. ಜೊತೆಗೆ ರಾಮನಗರದ ಕಡೆಯಿಂದ ವಲಸೆ ಬಂದ ಗೊಲ್ಲರ ಮತ್ತೊಂದು ತಂಡವೂ ಇದೇ ತಿಮ್ಮೇನಹಳ್ಳಿಯಲ್ಲಿ ನೆಲೆಸಿತ್ತು.



ಬಿಂಡ

ಯಾವುದೇ ಹಳ್ಳಿಯವನೊಬ್ಬ ವಿಜ್ಞಾನಿಯಾದರೆ, ಸಾಹಿತಿ- ಪತ್ರಕರ್ತನಾದರೆ, ಡಾಕ್ಟರ್-ಇಂಜಿನಿಯರುಗಳು ಆ ಊರಿನಿಂದ ಬಂದರೆ ಹಳ್ಳಿಗೆ ಹಳ್ಳಿಯೇ ಹೆಮ್ಮೆ ಪಡುತ್ತದೆ. ಆದರೆ ತಿಮ್ಮೇನಹಳ್ಳಿಯ ಕರ್ಮಕ್ಕೆ ಬಿಂಡ, ಮರಿಬಿಂಡ, ಗಿಡಿಗಿಡಿ ಕೃಷ್ಣ ಅಯ್ಯ ದೊಂಗಾಸೀನ, ಅರುಣ, ತಿಮ್ಮೇನಹಳ್ಳಿ ತಮ್ಮಯ್ಯ ಗೋವಿಂದ, ಮಚ್ಚ ಮತ್ತು ಇತ್ತೀಚೆಗೆ ಹತನಾದ ತಿಮ್ಮೇನಹಳ್ಳಿ ಸೂರಿಯಂಥ ರೌಡಿಗಳೇ ಕಾಲಾನುಕಾಲಕ್ಕೆ ಹುಟ್ಟುತ್ತಲೇ ಇದ್ದಾರೆ.



ಮುನಿಯಪ್ಪ

ತಪ್ಪು ತಿಮ್ಮೇನಹಳ್ಳಿಯದಾಗಲಿ, ಇಲ್ಲಿನ ಗೊಲ್ಲರದಾಗಲಿ ಆಗಿರಲಿಲ್ಲ. ಅದು ವ್ಯವಸ್ಥೆಯ ಪಾಪ. 1965 ರ ಸುಮಾರಿಗೆ ಬೆಂಗಳೂರಿನ್ನೂ ಈ ಪಾಟ ಬೆಳೆದಿರಲಿಲ್ಲ. ಆವತ್ತಿಗೆ ತಿಮ್ಮೇನಹಳ್ಳಿಯೆಂದರೆ 60 ಮನೆಗಳ ಕುಗ್ರಾಮ. ಇವತ್ತಿನ ನಾಗರಬಾವಿ ಮೇನ್‌ರೋಡ್ ಆಗಿನ್ನೂ ಬಂಡಿ ಜಾಡಾಗಿದ್ದ ಕಾಲ. ಪಕ್ಕದ ಮಾಗಡಿ ರಸ್ತೆಯ ಹೊರತಾಗಿ ಇಲ್ಲಿನ ರೈತರಿಗೆ ಬೆಂಗಳೂರು ನಗರಕ್ಕೆ ಬೇರೆ ದಾರಿಯೇ ಇರಲಿಲ್ಲ. ಇವತ್ತು ಗ್ರೇಟರ್ ಬೆಂಗಳೂರು ಹೇಗೆ ಸುತ್ತಮುತ್ತಲ ಗ್ರಾಮಗಳ ಪಾಲಿಗೆ ಶಾಪವಾಗಿದೆಯೋ ಅಂಥ ಅಪಾಯವೊಂದು 1973 ರಲ್ಲೇ ತಿಮ್ಮೇನಹಳ್ಳಿಯನ್ನು ಕಾಡಿತ್ತು.

ಮೈಸೂರು ರಾಜರ ಕಾಲಕ್ಕೆ ಇಲ್ಲಿನ ಗೊಲ್ಲರಿಗೆ ಬಳುವಳಿಯಾಗಿ ಬಂದಿದ್ದ ಸಾಕಷ್ಟು ಜಮೀನಿತ್ತಾದರೂ ಸರ್ಕಾರ ಅದನ್ನು ಹೌಸಿಂಗ್ ಬೋರ್ಡಿಗೆಂದು ಕಿತ್ತುಕೊಂಡಿತು. ಸಿಕ್ಕ ದುಗ್ಗಾಣಿಯ ಪರಿಹಾರಕ್ಕೆ ಬೇರೆಡೆ ಜಮೀನು ಕೊಳ್ಳುವುದಿರಲಿ ಅದರಿಂದ ಚಕ್ಕಡಿ ಬಂಡಿಕೊಳ್ಳುವುದಕ್ಕೂ ಇಲ್ಲಿನ ಗೊಲ್ಲರ ಕೈಲಾಗಲಿಲ್ಲ. ಭೂಮಿ ಕಿತ್ತುಕೊಂಡ ಮೇಲೆ ಬೀದಿಪಾಲಾದವರಿಗೆ ಉದ್ಯೋಗ ಇತ್ಯಾದಿ ಹೊಟ್ಟೆಪಾಡಿಗಾದರೂ ಸರ್ಕಾರ ತಲೆಕೆಡಿಸಿಕೊಳ್ಳಬೇಕಿತ್ತು. ಆದರೆ ಸರ್ಕಾರಕ್ಕೆ ಗೊಲ್ಲರ ಭೂಮಿಯಲ್ಲಿ ಸರ್ಕಾರಿ ಅಧಿಕಾರಿಗಳಿಗೆ ಹೌಸಿಂಗ್ ಬೋರ್ಡಿನಿಂದ ಮನೆ ಕಟ್ಟಿಸಿಕೊಡುವುದೇ ಮುಖ್ಯವಾಗಿತ್ತು.

ಹಾಗೇ ಬೀದಿಗೆ ಬಿದ್ದ ತಿಮ್ಮೇನಹಳ್ಳಿಯ ರೈತರ ಮಕ್ಕಳೇ ಕಾಲಕ್ರಮೇಣ ಅನಾಹುತಕಾರಿ ಪಾತಕಿಗಳಾದರು!

ಸರ್ಕಾರ ಭೂಮಿ ಕಿತ್ತುಕೊಂಡು ಪರಿಹಾರಾರ್ಥ ಕೊಟ್ಟ ಚಿಲ್ಲರೆ ಕಾಸಿನಲ್ಲಿ ಸೈಕಲ್ ಖರೀದಿಸಿದ ಕೆಲವರು ಬಿನ್ನಿಮಿಲ್ಲು, ಮಿನರ್ವಾ ಮಿಲ್ಲು ಇತ್ಯಾದಿಗಳಿಗೆ ಸೇರಿಕೊಂಡರು. ಕೆಲವರು ಬಿಟಿಎಸ್ ಡ್ರೈವರ್‌ಗಳಾದರು. ಇನ್ನೂ ಕೆಲವರು ಆಟೋ ಓಡಿಸಿಕೊಂಡಿದ್ದರು. ದಲಿತರೇ ಇದ್ದ ತಿಮ್ಮೇನಹಳ್ಳಿ ಕಾಲೋನಿಯು ಹೆಂಗ… ಮನೆಗೆಲಸದೇ ತಾಯುಷ್ಯಾಯಿತು. ಇಲ್ಲಿನ ಗೊ… ಅಳಿದುಳಿದ ಜಮೀನು ಕೂಡ 1978 ರ ಹೊ… ಅಕ್ಕಪಕ್ಕದ ವಿಜಯನಗರ, ಎಂ.ಸಿ.ಲೇ ಔಟ್, ಅ… ಜ್ಯೋತಿ ನಗರ ಬಡಾವಣೆಗಳಿಗೆಂದು ಸರ್ಕಾರ… ಹೌಸಿಂಗ್ ಸೊಸೈಟಿಗಳಿಗೆ ಧಾರೆಯೆರೆದ ಪ… ತಿಮ್ಮೇನಹಳ್ಳಿಯ ಗೊಲ್ಲರ ಬದುಕು ಇನ್ನ… ಅತಂತ್ರಕ್ಕೀಡಾಯಿತು.

ಇದು ತಿಮ್ಮೇನಹಳ್ಳಿಯ ದುರಂತದ ಆರ… ವಾಗಿತ್ತು, ಆವತ್ತು ಈ ಊರಿನ ಮುಖ್ಯಸ್ಥನಂತಿದ… ಹಿರಿಯ ಕಾಂಗ್ರೆಸ್ ನಾಯಕ ನರಸಿಂಹಸ್ವಾ… ಮುಖ್ಯಮಂತ್ರಿ ಅರಸು ಹಿಂಬಾಲಕರಾಗಿದ್ದ ಅವ… ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಉಪಾ… ರನ್ನಾಗಿ ಸರ್ಕಾರ ನೇಮಿಸಿತ್ತು, ಅವರನ್ನು ಬಿ… ಸೋಷಲಿಸ್ಟ್ ನಾಯಕ ವೆಂಕಟರಾಮ್ ಶಿಷ್ಯರ… ಬಿ. ಮುನಿಯಪ್ಪ ಮತ್ತು ರಂಗಪ್ಪ ಎಂಬಿಬ್ಬರು ಯುವ… ತಿಮ್ಮೇನಹಳ್ಳಿಯ ಪ್ರಮುಖರು. ಈ ರಂಗಪ್ಪನೇ ಮು… ಜನತಾಪಕ್ಷದಿಂದ ಗೆದ್ದು ತಿಮ್ಮೇನಹಳ್ಳಿಯ ಕೌನ್ಸಿ… ಆದರೆ, ಮುನಿಯಪ್ಪ ಅವರ ವಿರುದ್ಧ ಕಾಂಗ್ರೆಸ್ಸಿನ… ಸ್ಪರ್ಧಿಸಿ ಸೋತರು. ಅಲ್ಲಿಯತನಕ ಊರಿನಲ್ಲಿ ನೆಮ್ಮದಿಯಿತ್ತಾದರೂ ಬೆಂಗಳ… ಮಾತ್ರ ದಿನೇದಿನೇ ಬೆಳೆಯುತ್ತ… ಹೋಯಿತು.

ಯಾವ ರಂಗಪ್ಪ ಆವತ್ತು ಮುನಿಯ… ವಿರುದ್ಧ ಗೆದ್ದು ಕೌನ್ಸಿಲರ್ ಆದರೋ ಆ… ಮಗನೇ ಇಲ್ಲಿಗೆ ಐದು ವರ್ಷದ ಹಿ… ಕೊಲೆಯಾದ ತಮ್ಮಯ್ಯ ಮತ್ತು ಆತನ… ಕೊಲ್ಲಿಸಿದ ರೌಡಿ ಗೋವಿಂದ ವರಸೆಯ… ತಮ್ಮಯ್ಯನಿಗೆ ಮಾವನಾಗಬೇಕು. ಗೋವಿಂದನ ತಂದೆಯ ಹೆಸರು ಮೂ… ತಿಮ್ಮೇನಹಳ್ಳಿಯ ಗೋವಿಂದರಾಜ ಸ್ವಾ… ದೇವಸ್ಥಾನ ಪಕ್ಕದಲ್ಲೇ ಮೂಡ್ಲಪ್ಪನ ಮನೆಯಿದ್ದರೆ, ಆ… ಹಿಂಭಾಗದಲ್ಲೇ ಕೌನ್ಸಿಲರ್ ರಂಗಪ್ಪನ ಮ… ತಿಮ್ಮೇನಹಳ್ಳಿಯ ಕಾಂಗ್ರೆಸ್ ನಾಯ… ಮುನಿಯಪ್ಪ ಕೂಡ ತಮ್ಮ ಪ… ಕುಮಾರ್‌ನನ್ನು ಖ್ಯಾತ ಲಾಯರ್ ಮ… ಬೇಕೆಂದೇ ಕನಸು ಕಟ್ಟಿದ್ದರು. ಯಾವ ತ… ತಾಯಂದಿರು ತಾನೇ ತಮ್ಮ ಮ… ರೌಡಿಗಳಾಗಬೇಕೆಂದು ಬಯಸುತ್ತಾರೆ?'


ಆದರೆ ಬೆಳೆಯುತ್ತಿದ್ದ ಬೆಂಗಳೂ… ರೋಗದಿಂದ ಈ ತಿಮ್ಮೇನಹಳ್ಳಿ ಮಾತ್ರ… ಬಚಾವಾಗುವುದು ಹೇಗೆ ತಾನೇ ಸಾಧ್ಯವಿ…

ಈ ಮಧ್ಯೆ ಕೆಲ ಅನಾಹುತಕಾರಿ ಬೆಳವ… ಗಳಾದವು. 1975 ರಲ್ಲಿ ಸರ್ಕಾರ ತಿಮ್ಮೇನಹಳ್ಳಿ… ಗೊಲ್ಲರ ಅಳಿದುಳಿದ ಭೂಮಿಯನ್ನೂ ಕಿತ್ತುಕೊ… ಅದಕ್ಕೆ ಎಂ.ಸಿ. ಲೇಔಟ್ ಎಂದು ಹೆಸರಿಟ್ಟು ಉ… ಸೈಟುಗಳನ್ನಾಗಿ ಹಂಚಿದ ಮೇಲೆ ಅಲ್ಲಿಗೆ ಎಲ್ಲೆಲ್ಲಿಂದಲೋ… ಜನ ಬಂದು ನೆಲೆಸಿದರು. ಹಾಗೇ ಬಂದು ನೆಲೆಸಿದ… ಪೈಕಿ ರೌಡಿ ಬಿಂಡನೂ ಒಬ್ಬ. ಈತನ ತ… ವಿಧಾನಸೌಧದಲ್ಲಿ ಪ್ಯೂನ್ ಆಗಿದ್ದ. ನಾಗಮಂ… ತಾಲ್ಲೂಕು ಬಿಂಡಿಗನವಿಲೆಯವನಾದ್ದರಿಂದ ಆತನ… ಬಿಂಡ ಅಂತಲೇ ಕರೆಯುತ್ತಿದ್ದರು. ಈತನಿ… ಶ್ರೀರಾಂಪುರದ ರೌಡಿ ಮಾಸ್ತಿಗೂ ಮುಗಿಯದ ಜ… ಜಿದ್ದಿಯಿತ್ತು.

ಆಗ ತಿಮ್ಮೇನಹಳ್ಳಿಯಲ್ಲಿ ಗರಡಿ ಮನೆ ನಡೆಸಿಕೊಂ… ವೆಂಕಟಾಚಲ ಆ ಕಾಲಕ್ಕೇ ದೊಡ್ಡ ಪೈಲ್ವಾನ್. … ರಾಜ್‌ಕುಮಾರ್ ಅಭಿಮಾನಿ. ಕನ್ನಡ ರಾಜ್ಯೋತ್ಸವ… ಈ ಊರಿನ ದೊಡ್ಡ ಹಬ್ಬ, ವಾಟಾಳ್ ಕರೆಕೊ… ಸಾಕು ಊರಿಗೆ ಊರೇ ಕನ್ನಡ ಬಾವುಟ ಹಿಡಿ… ಹೋರಾಟಕ್ಕಿಳಿದು ಬಿಡುತ್ತಿತ್ತು, ವಾಟಾಳರೇ ನಿ… ತಿಮ್ಮೇನಹಳ್ಳಿಗೆ ಮು.ಗೋವಿಂದರಾಜು ಎಂಬ ಹುತ… ಕನ್ನಡ ಚಳವಳಿಗಾರನ ಹೆಸರಿಟ್ಟಿದ್ದರು. ಆಗಿನ್ನೂ ಪ… ಎಂ.ಸಿ. ಲೇಔಟಿನಲ್ಲಿದ್ದ ರೌಡಿ ಬಿಂಡ ತಿಮ್ಮೇನಹ… ಕಾಲಿಟ್ಟಿರಲಿಲ್ಲ, ಆದರೆ ಶ್ರೀರಾಂಪುರದ ಜಿದ್ದಾಜಿದ್ದಿಯಿ… ಅದು ಬಿಂಡನನ್ನು ತಿಮ್ಮೇನಹಳ್ಳಿಯ ಪೈಲ್ವಾ… ವೆಂಕಟಾಚಲನ ಕಾಲಿಗೆ ಬೀಳುವಂತೆ ಮಾಡಿ… ಶ್ರೀರಾಂಪುರದ ಪಾತಕಿ ಮಾಸ್ತಿ ಬಿಂಡನನ್ನು ಮುಗಿಸ… ಎಂ.ಸಿ. ಲೇಔಟಿನ ಬಿಂಡ ಪಕ್ಕದ ತಿಮ್ಮೇನಹಳ್ಳಿ… ಪೈಲ್ವಾನ್ ವೆಂಕಟಾಚಲನಿಗೆ ಶರಣಾಗಿ ನನ್ನನ್ನು ಕಾಪಾ… ಎಂದು ಅಂಗಲಾಚಿಬಿಟ್ಟ. ಆವತ್ತು ಮಾಸ್ತಿಯ ವಿ… ಬಿಂಡನ ಮನೆ ಕಾವಲಿಗೆಂದು ತಿಮ್ಮೇನಹಳ್ಳಿಯ ಪೈಲ… ವೆಂಕಟಾಚಲ ತನ್ನ ಕಡೆಯ ಐವತ್ತು ಮಂದಿ ಹುಡುಗ… ಸತತ ಮೂರು ದಿನಗಳ ಕಾಲ ನೇಮಿಸದೇ ಹೋಗಿ… ತಿಮ್ಮೇನಹಳ್ಳಿ ಎಂಬ ಊರು ಹೀಗಾಗುತ್ತಿತ್ತೆ?

ತಿಮ್ಮೇನಹಳ್ಳಿಯ ಹುಡುಗರ ಭೀಕರ ರಕ್ತ… ವೊಂದಕ್ಕೆ ಈ ಘಟನೆಯೇ ಕಾರಣವಾಯಿತೆ?

(ಮುಂದಿನ ವಾ…



ಕೊಲೆಯಾದ ತಿಮ್ಮೇನಹಳ್ಳಿ ಸೂರಿ


ಕುಮಾರಸ್ವಾಮಿ ಕ್ಷೇತ್ರದಲ್ಲಿ ಅಕ್ರಮ ಕ್ವಾರಿ


ಪ್ರತಿಭಟಿಸಿದವರಿಗೆ ಪ್ರಾಣ ಬೆದರಿಕೆ

ಇದು ಕುಮಾರಸ್ವಾಮಿಯ ರಾಮನಗರದಲ್ಲಿ ಕಲ್ಲು ಕ್ವಾರಿಯವರು ನಡೆಸುತ್ತಿರುವ ಗೂಂಡಾಗಿರಿಯ ಕತೆ.

ಜನವಿರೋಧಿ ಸರ್ಕಾರವೊಂದು ಖುದ್ದು ಅಕ್ರಮ ಗಣಿಗಾರಿಕೆಯಲ್ಲಿ ಮುಳುಗಿಹೋದರೆ ಅಕ್ರಮ ಕಲ್ಲಿನ ಕ್ವಾರಿಗಳಾದವರು ಅದ್ಹೇಗೆ ಸುಮ್ಮನೆ ಕುಳಿತಾರು? ಯಥಾ ರಾಜಾ ತಥಾ ಪ್ರಜಾ ತಾನೆ!

ರಾಮನಗರದಲ್ಲೀಗ ಅಕ್ರಮ ಕ್ವಾರಿಗಳ ಭರಾಟೆ ಸ್ವತಃ ಜಿಲ್ಲಾಧಿಕಾರಿಯೇ ಈ ಅಕ್ರಮ ಕ್ವಾರಿ ಚಟುವಟಿಕೆ ನಿಲ್ಲಿಸುವಂತೆ ಆದೇಶ ಕೊಟ್ಟರೂ ಅದಕ್ಕೀಗ ಚಿಲ್ಲಿಕಲ್ಲಿ ನಷ್ಟೂ ಬೆಲೆ ಇಲ್ಲ. ಅದರ ಬದಲಾಗಿ ಅಕ್ರಮ ಕಲ್ಲು ಕ್ವಾರಿಗಳ ಸ್ಥಗಿತಕ್ಕೆ ಹೋರಾಡಿದವರನ್ನೆಲ್ಲ ಹಿಡಿದು ಹಿಂಸಿಸುವುದು, ಕೊಲೆಗೆ ಯತ್ನಿಸುವುದೆಲ್ಲ ರಾಮನಗರದಲ್ಲಿ ಮಾಮೂಲಿಯಾಗಿದೆ.


ಪ್ರಸಾದ್


ಸಣ್ಣಬೋರಮ್ಮ


ಚಂದ್ರಶೇಖರ್

ಕರ್ನಾಟಕ ರಾಜ್ಯ ರೈತ ಸಂಘದ ಯುವ ಮುಂದಾಳು ಬಿಡದಿಯ ಪ್ರಸಾದ್ ಮೇಲೆ ಮೊನ್ನೆ ಇಂಥದ್ದೊಂದು ವಿಫಲ ಪ್ರಯತ್ನ ನಡೆದಿದೆ. ರಾಮನಗರ ತಾಲ್ಲೂಕಿನ ಬಿಡದಿಯನ್ನೊಳಗೊಂಡಂತೆ ಸುಮಾರು 45ಕ್ಕೂ ಹೆಚ್ಚು ಅಕ್ರಮ ಕಲ್ಲು ಕ್ವಾರಿಗಳಿವೆ. ಇಲ್ಲಿನ ಬಹುತೇಕ ಕ್ವಾರಿಗಳಿಗೆಲ್ಲ ಕಾಂಗ್ರೆಸ್‌ನವರೇ ಅಧಿಪತಿಗಳು.

ಸುಪ್ರೀಂಕೋರ್ಟ್ ನಿರ್ದೇಶನದ ಅನ್ವಯ ಈ ಕಲ್ಲು ಕ್ವಾರಿಗಳನ್ನು ಸ್ಥಗಿತಗೊಳಿಸಲು ಜಿಲ್ಲಾಡಳಿತವೇ ಆದೇಶವಿತ್ತಿದ್ದರೂ, ಜಿಲ್ಲಾಡಳಿತದ ನೆರಳಲ್ಲೇ ಕ್ವಾರಿಗಳು ನಡೆಯುತ್ತವೆ ಇಲ್ಲಿ.

ಲಿಂಗಪ್ಪನ ಅಕ್ರಮ ಕೂಟ

ಕಾಂಗ್ರೆಸ್‌ನ ಮಾಜಿಶಾಸಕ ಸಿ.ಎಂ. ಲಿಂಗಪ್ಪನ ಪುತ್ರ ಚಂದ್ರಶೇಖರ ಅಕ್ರಮ ಕ್ವಾರಿಗಳ ಕೂಟದ ಹಾಲಿ ನಾಯಕ.

ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಅಸಿಸ್ಟೆಂಟ್ ಕಮೀಶನರ್, ತಹಶೀಲ್ದಾರ್, ರಾಜಸ್ವ ನಿರೀಕ್ಷಕರು ಅಕ್ರಮ ಕ್ವಾರಿಗಳನ್ನು ನಿಲ್ಲಿಸಲು ಆದೇಶಿಸಿದ್ದರೂ ಬಿಡದಿ ಸುತ್ತ ಮುತ್ತ ಇದು ನಿರಾತಂಕವಾಗಿ ನಡೆದೇ ಇತ್ತು.

ಭೂವಿಜ್ಞಾನ ಮತ್ತು ಗಣಿ ಇಲಾಖೆಯ ಉಪ ನಿರ್ದೇಶಕಿ ಸಣ್ಣಬೋರಮ್ಮ ಎಲ್ಲ ಗೊತ್ತಿದ್ದೂ ರಾಜಕೀಯ ಪ್ರಭಾವಕ್ಕೆ ಹೆದರಿ ಸುಮ್ಮನಾಗಿದ್ದರು. ರೈತಸಂಘದ ನೇತೃತ್ವದಲ್ಲಿ ಪ್ರಗತಿಪರರು ಇದನ್ನೆಲ್ಲ ವಿರೋಧಿಸಿ ಡಿಸೆಂಬರ್ 20ನೇ ತಾರೀಖು ಪ್ರತಿಭಟನೆಗೆ ನಿರ್ಧರಿಸಿದರು.

ಆಗಲೇ ಸಿ.ಎಂ. ಲಿಂಗಪ್ಪನ ಮಗ ರೈತಸಂಘದ ಪ್ರಸಾದ್‌ರನ್ನು ಬೆದರಿಸುವ ಪ್ಲಾನು ಹಾಕಿದ್ದಾನೆ. ಉಮೇಶ್ ಉರುಫ್ ಫೈನಾನ್ಸ್ ಉಮೇಶ್, ಬಂಡೆ ಮಾಲೀಕ ಕೆಂಪಣ್ಣ ಬಂಡೆ ಮಾಲೀಕರ ಸಂಘದ ಅಧ್ಯಕ್ಷ ಹೊನ್ನಾಶೆಟ್ಟಿ ಉರುಫ್ ರಾಜಣ್ಣ ಕರ್ನಾಟಕ ರಕ್ಷಣಾ ವೇದಿಕೆಯ ಲೋಕೇಶ್ ಮುಂತಾದವರೆಲ್ಲ ಸೇರಿ 19ರಂದು ಮಧ್ಯಾಹ್ನ 1.45ಕ್ಕೆ ಬಿಡದಿಯ ಎಸ್.ಬಿ.ಐ. ಬ್ಯಾಂಕ್ ಎದುರು ಬರುತ್ತಿದ್ದ ಪ್ರಸಾದ್‌ರ ವ್ಯಾನನ್ನು ತಡೆದಿದ್ದಾರೆ. ಬಲವಂತದಿಂದ ಎಳೆದುಕೊಂಡು ಲಿಂಗಪ್ಪನ ಮಗನ ಟಯೋಟಾ ಇನ್ನೋವಾ ಕಾರಿನಲ್ಲಿ ಕೂರಿಸಿಕೊಂಡು ನೆಲ್ಲಿಗುಡ್ಡ ರಸ್ತೆಯಲ್ಲಿರುವ ಹೊನ್ನಶೆಟ್ಟಿಯ ಮನೆಗೆ ಕರೆದೊಯ್ದು ಹಿಂಸಿಸಿದ್ದಾರೆ. ಅಕ್ರಮ ಕ್ವಾರಿಗಳ ವಿರುದ್ಧದ ಪ್ರತಿಭಟನೆ ನಿಲ್ಲಿಸದಿದ್ದರೆ ಕೊಲ್ಲುವುದಾಗಿ ಬೆದರಿಸಿದ್ದಾರೆ. 50 ಲಕ್ಷ ರೂ ತೆಗೆದುಕೊಂಡು ಸುಮ್ಮನಾಗು ಎಂದು ಆಮಿಷ ಒಡ್ಡಿದ್ದಾರೆ. ಒಪ್ಪದೇ ಹೋದಾಗ ಗಲಾಟೆ ಮಾಡಿದ್ದಾರೆ. ಪ್ರಾಣ ಉಳಿಸಿಕೊಳ್ಳಲು ಪ್ರಸಾದ್ ಪ್ರತಿಭಟನೆ ನಿಲ್ಲಿಸುವುದಾಗಿ ಹೇಳಿ ತಕ್ಷಣಕ್ಕೆ ಪಾರಾಗಿ ಬಂದಿದ್ದಾರೆ.


ಪ್ರತಿಭಟಿಸುತ್ತಿರುವ ರೈತರು

ಮರುದಿನ ಬಿಡದಿ ಪೊಲೀಸ್ ಠಾಣೆ ಮುಂದೆ ಅಕ್ರಮ ಕ್ವಾರಿ ನಿಲ್ಲಿಸುವಂತೆ ಪ್ರಸಾದ್ ನೇತೃತ್ವದಲ್ಲಿ ಪ್ರತಿಭಟನೆ ನಡೆದು, ಕೊಲೆ ಬೆದರಿಕೆಯ ವಿರುದ್ಧ ದೂರು ನೀಡಲಾಗಿದೆ.

1997ರ ಸುಪ್ರೀಂಕೋರ್ಟ್ ನಿರ್ದೇಶನಗಳನ್ನೆಲ್ಲ ಗಾಳಿಗೆ ತೂರಿ ನಡೆಸುತ್ತಿರುವ ಅಕ್ರಮ ಗಣಿಗಾರಿಕೆ ನಿಲ್ಲಿಸಲು ಒಪ್ಪದ ಗಣಿ ಇಲಾಖೆಯು ಸಣ್ಣಬೋರಮ್ಮ, ಬಿಡದಿಯ ಇನ್ಸ್‌ಪೆಕ್ಟರ್ ಮತ್ತು ಗಣಿ ಇಲಾಖೆಯ ಇಬ್ಬರು ಅಧಿಕಾರಿಗಳಿಗೆ ಆ ಕೆಲಸ ವಹಿಸಿದ್ದಾರೆ. ಆದರೆ ಕ್ವಾರಿಗಳು ನಿಲ್ಲುವ ಸೂಚನೆಗಳಿಲ್ಲ.

ಬಿಡದಿ, ಕೆಂಚನಕುಪ್ಪೆ, ತಮ್ಮನದೊಡ್ಡಿ, ಜನತಾ ಕಾಲೋನಿ, ದಾಸಪ್ಪನ ದೊಡ್ಡಿ, ಕಲ್ಲು ಗೋಪಹಳ್ಳಿಯ ಒಂದೂವರೆ ಕಿ.ಮೀ ವ್ಯಾಪ್ತಿಯೊಳಗೆ ಕ್ವಾರಿಗಳಿರುವುದು ಸುಪ್ರೀಂಕೋರ್ಟ್ ನಿರ್ದೇಶನದ ಪ್ರಕಾರ ಅಕ್ರಮ.

ಕಾರ್ಮಿಕರ್‍ಯಾರಿಗೂ ಇಎಸ್‌ಐ, ಪಿಎಫ್ ಕೊಡದೇ ಇರುವುದೂ ಅಕ್ರಮ.

ಗೋಮಾಳದ ಜಾಗಗಳಲ್ಲಿ ಅಕ್ರಮ ಕ್ವಾರಿಗಳ ಮೂಲಕ ಸರಕಾರ, ಜನತೆಯನ್ನು ವಂಚಿಸುತ್ತಿರುವ ಲಿಂಗಪ್ಪನ ಮಗ ಚಂದ್ರಶೇಖರನ ಗೂಂಡಾಪಡೆಗಳನ್ನು ಮಟ್ಟ ಹಾಕುವವರ್‍ಯಾರು? ಈಗ ಈ ಕಾಯ್ದೆ ಬಾಹಿರ ಕ್ವಾರಿಗಳ ವಿರುದ್ಧ ದನಿ ಎತ್ತಿರುವ ರೈತಸಂಘದ ಪ್ರಸಾದ್ ಅಥವಾ ಇತರರಿಗೆ ಏನಾದರೂ ತೊಂದರೆಯಾದರೆ ಅದಕ್ಕೆ ಜಿಲ್ಲಾಡಳಿತವೇ ಹೊಣೆಯಾಗಬೇಕಾಗುತ್ತದೆ.

–ಮಲ್ಲಿ

ಚೆಡ್ಡಿಗಳಿಗೆ ಎದುರೇಟು

(10ನೇ ಪುಟದಿಂದ)

ವೇದಿಕೆಗೆ ನುಗ್ಗಿ ಬಿಟ್ಟರು. ಅವರನ್ನು ಪೊಲೀಸರು ಒದ್ದು ಎಳೆದುಕೊಂಡು ಹೋದರು. ಆದರೆ ಉಳಿದ ಚೆಡ್ಡಿಗಳ ಸುತ್ತಾ ಅವರಿಗೇ ಗೊತ್ತಿಲ್ಲದಂತೆ ನೂರಾರು ಪ್ರಗತಿಪರ ಯುವ ಜನತೆ ಕೋಟೆ ನಿರ್ಮಿಸಿ ಕುಳಿತಿದ್ದರು. ಅವರೆಲ್ಲಾ ಎದ್ದವರೆ ಗಲಾಟೆಗೆ ಎದ್ದು ನಿಂತಿದ್ದ ಒಬ್ಬೊಬ್ಬ ಚೆಡ್ಡಿಯನ್ನು ಎದುರಿಸಿ ನಿಂತರು. ಸೆಕ್ಯುಲರ್ ವಾದಿಗಳಿಗೆ ಇಷ್ಟು ಸಿಟ್ಟು ಧೈರ್ಯ, ರೋಷವಿರುತ್ತದೆಂದು ಪಾಪ ಚೆಡ್ಡಿಗಳಿಗೆ ಹೇಗೆ ಗೊತ್ತಾಗಬೇಕು. ಹಾಗಾಗಿ ಎಬಿವಿಪಿಯ ಜಿಲ್ಲಾ ಕಾರ್ಯದರ್ಶಿ ಜಯಪ್ರಕಾಶ್, ಸಂಘಟನಾ ಪ್ರಮುಖ ವಿನಯ್ ಬಿದಿರೆ, ವಿಶ್ವನಾಥ್ ಆರ್‌ಎಸ್‌ಎಸ್‌ನ ಶ್ರೀಹರಿ, ಮಿಥುನ್, ಪುನೀತ್ ಮುಂತಾದ ಹತ್ತು ಚೆಡ್ಡಿಗಳು ತಮ್ಮೀಡಿ ಜೀವನದಲ್ಲೇ ತಿಂದಿರದಷ್ಟು ಒದೆಗಳನ್ನು ಕೇವಲ ಹತ್ತೇ ನಿಮಿಷದಲ್ಲಿ ತಿಂದು ಭೀತಿಯಿಂದ ಓಡಿ ಹೋದರು. ಕೆಲವರನ್ನು ಜನರೇ ಪೊಲೀಸರಿಗೆ ಹಿಡಿದುಕೊಟ್ಟರು. ತಮಾಷೆ ಏನೆಂದರೆ ಗಲಾಟೆ ಮಾಡಿಸಲೆಂದೇ ಬೇರೆಬೇರೆ ಊರುಗಳಿಂದ ಅಮಾಯಕ ಹುಡುಗರನ್ನು ಅಲ್ಲಿಗೆ ಕರೆತಂದಿದ್ದವನು ಕಿರಣ್ ಹೆಗ್ಗಡೆ ಎಂಬ ಆರ್‌ಎಸ್‌ಎಸ್ ನವನು. ಆದರೆ ಯಾವಾಗ ಎಬಿವಿಪಿ ಹುಡುಗರಿಗೆ ಸಮಾ ಒದೆ ಬಿತ್ತೋ ಕಿರಣ್ ನಿಂತ ಸ್ಥಳದಲ್ಲೇ ನ್ಯೂಟ್ರಲ್ ಆಗಿಬಿಟ್ಟ. ತನಗೂ ಏಟು ತಿನ್ನುತ್ತಿರುವ ಹುಡುಗರಿಗೂ ಸಂಬಂಧವೇ ಇಲ್ಲವೆಂಬಂತೆ, ಸಾಮಾನ್ಯ ಸಭಿಕನಂತೆ ನಟಿಸಿ ಗಪ್‌ಚುಪ್ ಕುಳಿತುಬಿಟ್ಟ. ಹೀಗೆ ಕಂಡೋರ ಮಕ್ಕಳನ್ನು ಬಾವಿಗೆ ನೂಕಿ ಆಳ ನೋಡುವ ಬುದ್ಧಿ ಚೆಡ್ಡಿ ಲೀಡರ್‌ಗಳಿಗೆ ಹೊಸತೇನಲ್ಲವಲ್ಲ. ಈ ಮುಖಭಂಗವನ್ನು ಜೀರ್ಣಿಸಿಕೊಳ್ಳಲಾಗದೆ ಜಿಲ್ಲಾ ಬಿಜೆಪಿ ಲೀಡರ್‌ಗಳು ಯಡ್ಡಿ ಮೇಲೆ ಒತ್ತಡ ತಂದು ಈಗ ಪ್ರಗತಿಪರರ ಮೇಲೇ ಕೇಸ್ ದಾಖಲಾಗುವಂತೆ ಮಾಡಿದ್ದಾರೆ.

ಇಷ್ಟಕ್ಕೂ ಇವೆಲ್ಲಾ ರಾದ್ಧಾಂತಕ್ಕೆ ಉಪಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಈಶ್ವರಪ್ಪನ ನೇರ ಕುಮ್ಮಕ್ಕಿದ್ದದ್ದು ಸ್ಪಷ್ಟ. ಇವರಿಬ್ಬರು ಹಾಲಿ ಕರ್ನಾಟಕದಲ್ಲಿನ ಸಮ್ಮಿಶ್ರ ಸರ್ಕಾರದಲ್ಲಿ ಜವಾಬ್ದಾರಿ ಸ್ಥಾನಗಳಲ್ಲಿರುವವರು. ನಮ್ಮ ದೇಶದ ಸಂವಿಧಾನ ಕಾಯ್ದೆ ಕಾನೂನು ಹಾಗೂ ವಾಕ್ ಸ್ವಾತಂತ್ರ್ಯಗಳನ್ನು ಗೌರವಿಸಬೇಕಾದವರು. ಆದರೆ ಹಾಗೆ ಮಾಡುವ ಬದಲಾಗಿ ತಮಗೆ ಒಲ್ಲದ ತಮ್ಮ ಸಿದ್ಧಾಂತಕ್ಕೆ ಒಗ್ಗದ ಭಿನ್ನ ವಿಚಾರಧಾರೆಯವರ ಬಾಯಿ ಮುಚ್ಚಿಸಲು ಅನುಸರಿಸಿದ ಹೇಯ ಮಾರ್ಗವನ್ನು ಯಾರಾದರೂ ಒಪ್ಪಲಾದೀತೆ?

ಡಿಸೆಂಬರ್ 23ರಂದು ನಿಗದಿಯಾಗಿದ್ದ ಮಾಧ್ಯಮಗಳ ಸಾಮಾಜಿಕ ಜವಾಬ್ದಾರಿ ವಿಚಾರ ಗೋಷ್ಠಿಯಿಂದ ಗೌರಿ ಲಂಕೇಶರ ಹೆಸರು ತೆಗೆದು ಹಾಕುವಂತೆ ಯಡಿಯೂರಪ್ಪ ಬಹಿರಂಗ ಹೇಳಿಕೆ ನೀಡಿದ್ದರು. ಇದು ಸ್ವಾಯತ್ತ ಸಂಸ್ಥೆಯಾಗಿರುವ ಕಸಾಪದ ಮೇಲೆ ಯಡ್ಡಿ ತಮ್ಮ ಚೆಡ್ಡಿ ಅಧಿಕಾರ ಚಲಾಯಿಸುವ ಹುಂಬ ಪ್ರಯತ್ನವಾಗಿತ್ತು. ಅಷ್ಟೇ ಅಲ್ಲ ಯಾರೇ ಒಬ್ಬರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಯಡ್ಡಿಯ ಈ ನಿಲುವು ಸಮ್ಮೇಳನದಲ್ಲಿ ಭಾಗವಹಿಸಿದ್ದ ಯಾರಿಗೂ ಸರಿ ಎನಿಸಲಿಲ್ಲ.

ಕರ್ನಾಟಕದಲ್ಲಿ ಸಾಹಿತ್ಯ, ಸಂಸ್ಕೃತಿ, ಇತಿಹಾಸ ಕುರಿತಂತೆ ಚೆಡ್ಡಿಗಳು ತಲೆ ಹಾಕುತ್ತಿರುವುದು ಇದೇ ಮೊದಲೇನಲ್ಲ. ಹಿಂದೂ-ಮುಸ್ಲಿಮರಿಬ್ಬರ ಶ್ರದ್ಧಾ ಕೇಂದ್ರವಾಗಿರುವ ಬಾಬಾಬುಡನ್‌ಗಿರಿ ಬಗ್ಗೆ ಈಗಾಗಲೇ ವಿವಾದ ಹುಟ್ಟುಹಾಕಿರುವ ಚೆಡ್ಡಿಗಳು ಟಿಪ್ಪು ಸುಲ್ತಾನ್ ಕನ್ನಡ ದ್ವೇಷಿ ಎಂಬ ವಿವಾದ ಸೃಷ್ಟಿಸಲು ಯತ್ನಿಸುತ್ತಿದ್ದರು. ಹಂಪೆಯಲ್ಲಿರುವ ದರ್ಗಾ ಬಗ್ಗೆ, ನಾಟಕಕಾರ ಗಿರೀಶ್ ಕಾರ್ನಾಡ್ ವಿರುದ್ಧ ಈ ಮೊದಲೆಲ್ಲಾ ಗಲಾಟೆ ಮಾಡಿಕೊಂಡೇ ಬಂದಿರುವ ಚೆಡ್ಡಿ ಪಟಾಲಂಗೆ ಇದೇ ಮೊದಲ ಬಾರಿಗೆ ಕನ್ನಡ ಭಾಷೆ-ಸಾಹಿತ್ಯ-ಸಂಸ್ಕೃತಿಗಳ ಬಗ್ಗೆ ಕಾಳಜಿ ಇರುವ ಜನರು ತಿರುಗೇಟು ನೀಡಿದ್ದಾರೆ. ಬೆದರಿಕೆ, ದಬ್ಬಾಳಿಕೆ, ವಿಕೃತ ಅಪಪ್ರಚಾರ, ವ್ಯಕ್ತಿ-ಅಭಿವ್ಯಕ್ತಿ ಸ್ವಾತಂತ್ರ್ಯದ ದಮನಗಳನ್ನು ಇನ್ನು ಮುಂದೆ ಸಹಿಸಿಕೊಳ್ಳುವುದಿಲ್ಲವೆಂದು ಸ್ಪಷ್ಟ ಸಂದೇಶ ನೀಡಿದ್ದಾರೆ.

ಹಸಿವು, ಬಡತನಗಳ ಬಗ್ಗೆ ಮಾತನಾಡುವುದು, ಜನರಲ್ಲಿ ವೈಚಾರಿಕ ಪ್ರಜ್ಞೆ ಬೆಳೆಸುವುದು, ಎಲ್ಲಾ ರೀತಿಯ ಸಾಮಾಜಿಕ ಅನ್ಯಾಯ ಜಾತಿ ಶೋಷಣೆಗಳನ್ನು ಪ್ರತಿಭಟಿಸುವುದು, ಕನ್ನಡ ಸಾಹಿತ್ಯ ಪರಂಪರೆಯ ಒಂದು ಅಂಶವಾಗಿ ಶತಶತಮಾನಗಳಿಂದಲೂ ನಡೆದು ಬಂದಿದೆ.

ಆಳುವವರ ಹುಕುಂ, ಉಳ್ಳವರ ಮರ್ಜಿ ಮುಲಾಜುಗಳನ್ನು ನಿರ್ಲಕ್ಷಿಸಿಯೇ ಕನ್ನಡ ವೈಚಾರಿಕ ಪರಂಪರೆ ಬೆಳೆದು ಬಂದಿದೆ.

ಚೆಡ್ಡಿಗಳು ನಂಬುವ, ಎತ್ತಿ ಹಿಡಿಯುವ ಹಿಂದೂ ಧರ್ಮ-ಬ್ರಾಹ್ಮಣ ಜಾತಿ ವ್ಯವಸ್ಥೆಗಳ ವಿರುದ್ಧ ದನಿ ಎತ್ತಿರುವ ಪರಂಪರೆಯೂ ಕನ್ನಡಕ್ಕಿದೆ. ಆದರೆ ಪುಸ್ತಕ ಓದುವ ಬದಲಾಗಿ ಸುಡುವ ಗುಣವುಳ್ಳವರು, ಗುಡಿಸಲುಗಳ ಬದಲಾಗಿ ಬರೀ ದೇವಾಲಯಗಳ ಬಗ್ಗೆ ಮಾತ್ರ ಮಾತನಾಡುವವರು ಒಂದು ನಿರ್ಭಿಡೆಯ ಮುಕ್ತ ಸಂವಾದವನ್ನು ಹೇಗೆ ತಾನೇ ಸಹಿಸಿಕೊಂಡಾರು?

ಅಂತಹ ಸಂವಾದಗಳನ್ನೆಲ್ಲಾ ವಿವಾದವನ್ನಾಗಿಸಿ ಜನಪರ ಕಾಳಜಿಯುಳ್ಳವರ ಬಾಯಿ ಮುಚ್ಚಿಸುವ ಪ್ರಯತ್ನಗಳನ್ನು ಸಂಘ ಪರಿವಾರ ಶಿವಮೊಗ್ಗ ಸಾಹಿತ್ಯ ಸಮ್ಮೇಳನದಲ್ಲೂ ಮಾಡಿತು.

ಆದರೆ ಚೆಡ್ಡಿಗಳಿಗೆ ಎದಿರೇಟು ಧರ್ಮದೇಟುಗಳಲ್ಲದೆ [illegible] ಜನ ಬೆಂಬಲ ಸಿಗಲಿಲ್ಲ.

ಇವತ್ತಿನ ಕನ್ನಡಿಗ [illegible]

ಚಂಪಾ ಗಟ್ಟಿತನ

'ಸಾಹಿತ್ಯ ಪರಿಷತ್ ಸರ್ಕಾರದ ಅಂಗಸಂಸ್ಥೆಯಲ್ಲ, ಅದೊಂದು ಸ್ವಾಯತ್ತ ಸಂಸ್ಥೆ' –ಎಂದು ದಿಟ್ಟತನದಿಂದ ಸಾರಿದ ಕ.ಸಾ.ಪ. ಅಧ್ಯಕ್ಷ ಚಂಪಾ ಏಕಕಾಲಕ್ಕೆ ಮುಖ್ಯಮಂತ್ರಿ ಕುಮಾರಸ್ವಾಮಿ ಹಾಗೂ ಯಡಿಯೂರಪ್ಪನಾದಿಯಾಗಿ ಎಲ್ಲ ಚಡ್ಡಿ ಪಟಾಲಂಗೂ ಚಳಿ ಬಿಡಿಸಿಬಿಟ್ಟದ್ದು ಈ ಸಮ್ಮೇಳನದ ವಿಶೇಷ.

ಮುಖ್ಯಮಂತ್ರಿಗೆ ಉದ್ಘಾಟನಾ ಸಮಾವೇಶಕ್ಕೆ ಚಂಪಾ ಸರಿಯಾಗಿ ಆಹ್ವಾನ ನೀಡಿಲ್ಲ ಎಂದು ಸ್ವತಃ ಕುಮಾರಸ್ವಾಮಿಯೇ ಕಿಡಿ ಕಾರಿದಾಗ ಚಂಪಾ ಅದಕ್ಕೆ ಸೊಪ್ಪು ಹಾಕಲಿಲ್ಲ. ಹಾಗೆ ನೋಡಿದರೆ ಮುಖ್ಯಮಂತ್ರಿ ಕೇವಲ ಸಮಾರೋಪಕ್ಕೆ ಬರಲಿ ಎಂಬ ಚಂಪಾ ಮತ್ತವರ ಕಾರ್ಯಕಾರಿ ಸಮಿತಿಯ ನಿರ್ಧಾರ ಸೂಕ್ತವಾಗಿತ್ತು. ಸಮಾರೋಪದಲ್ಲೇ ಸಮ್ಮೇಳನದ ನಿರ್ಣಯಗಳೂ ಆಗುತ್ತವೆ ಮತ್ತು ಆ ನಿರ್ಣಯಗಳ ಬಗ್ಗೆ ಸರ್ಕಾರದ ನಿಲುವು ಮತ್ತು ಬದ್ಧತೆಗಳನ್ನು ಸಾವಿರಾರು ಜನರೆದುರೇ ಕಮಿಟ್ ಮಾಡಿಸಬಹುದು ಎಂಬ ನಿಲುವು ಸರಿಯಾದದ್ದೆ.

ಇದನ್ನು ಅರ್ಥ ಮಾಡಿಕೊಳ್ಳದ ಕುಮಾರಸ್ವಾಮಿ ವಿನಾಕಾರಣ ಚಂಪಾ ಜೊತೆ ಜಗಳಕ್ಕಿಳಿದು ಮುಖಭಂಗ ಮಾಡಿಸಿಕೊಂಡುಬಿಟ್ಟರು. [illegible] ಯಡ್ಡಿಯಂತೂ ಕಲ್ಕುಳಿ ವಿಠಲ ಹೆಗ್ಡೆ ಮತ್ತು ಗೌರಿ ಲಂಕೇಶರು [illegible]ಗೋಷ್ಠಿಯಲ್ಲಿ ಭಾಗವಹಿಸಲು ಅವಕಾಶ ಕೊಡಬೇಡಿ ಎಂದು ಆದೇಶ [illegible] ಕೊಟ್ಟಾಗ ಕ.ಸಾ.ಪ. ಅದನ್ನು ನಿರ್ಲಕ್ಷಿಸಿದಾಗ ತಾವೂ ಮುಖಭಂಗಕ್ಕೀಡಾದರು.

ಆ ಹಂತದಲ್ಲಿ ಚಂಪಾ ಹಾಗೂ ಕಾರ್ಯಕಾರಿ ಸಮಿತಿಯು ಎಷ್ಟೇ ರಾಜಕೀಯ ಒತ್ತಡ ಬಂದರೂ ಕೇರ್ ಮಾಡದೆ ತಾನು ಯೋಜಿಸಿದ್ದ ರೀತಿಯೇ ಕಾರ್ಯಕ್ರಮ ನಡೆಸಲು ನಿರ್ಧರಿಸಿತೇ ವಿನಃ ಯಡ್ಡಿಯ ಧಿಮಾಕಿಗೆ ಬೆಲೆ ಕೊಡಲಿಲ್ಲ. ಕಸಾಪ ಹಾಗೆ ಮಾಡುವ ಮೂಲಕ ತನ್ನ ಸ್ವಾಯತ್ತ ಅಧಿಕಾರವನ್ನಷ್ಟೇ ಉಳಿಸಿಕೊಳ್ಳಲಿಲ್ಲ ಜೊತೆಗೆ ಮುಕ್ತವಾಗಿ ಚಿಂತಿಸುವ-ಚರ್ಚಿಸುವ ಮೌಲ್ಯಗಳ ಪರ ನಿಂತು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.


ಹುಟ್ಟಾ ಜಗಳಗಂಟರೆಂದೇ ಹೆಸರಾಗಿರುವ ಚಂಪಾರ ಈ ಗಟ್ಟಿತನವೇ ಸಮ್ಮೇಳನವು ಚೆಡ್ಡಿ ಫ್ಯಾಸಿಸ್ಟರ ಹಿಡಿತಕ್ಕೆ ಸಿಗದಂತೆ ಮಾಡಿದ್ದು.

ಇದಿಷ್ಟೇ ಅಲ್ಲ ರಾಷ್ಟ್ರಕವಿ ಜಿಎಸ್‌ಎಸ್‌ರವರಿಗೆ ನೀಡಬೇಕಿದ್ದ ಗೌರವಧನದ ವಿಷಯ, ಪ್ರಗತಿಪರರ ಮೇಲೆ ಪೊಲೀಸರು ಕೇಸ್ ಹಾಕಿದ್ದನ್ನು ಖಂಡಿಸಿದ್ದು, ಸಮಾರೋಪಕ್ಕೆ ಬಂದ ಕುಮಾರಸ್ವಾಮಿಯನ್ನು ಶಾಲಾಬಾಲಕರನ್ನು ಗದರಿಸುವಂತೆ ಗದರಿಸಿ ತಮ್ಮ ಭಾಷಣ ಕೇಳಿಸಿಕೊಳ್ಳುವಂತೆ ತಾಕೀತು ಮಾಡಿದ್ದೆಲ್ಲವೂ ಚಂಪಾರ ವ್ಯಕ್ತಿತ್ವವಿಶಿಷ್ಟಗಳೆ.

ಕೋಮುವಾದಿ ಫ್ಯಾಸಿಸ್ಟರು ಕನ್ನಡ ಸಮಾಜದ ಎಲ್ಲಾ ರಂಗಗಳಲ್ಲೂ ತಮ್ಮ ಕರಾಳ ಕೈ ಚಾಚುವ ಯತ್ನ ನಡೆಸಿರುವ ಈ ಹಂತದಲ್ಲಿ ಅದರ ವಿರುದ್ಧ ಸೆಟೆದು ನಿಂತ ಚಂಪಾ ಅಭಿನಂದನಾರ್ಹರು.

ಆನ್‌ಲೈನ್ ಮಾರಿಯ ರುದ್ರ ನರ್ತನ!

ಬರಗಾಲದಿಂದ 70 ಸಾವಿರ ಜನ ಗುಳೆ ಹೋಗಿರುವ ಕೊಪ್ಪಳ ಜಿಲ್ಲೆ ಹಾಗೂ ನೀರಾವರಿಯಿಂದ ಕಾಂಚಾಣದ ಮಹಿಮೆ ಕಂಡಿರುವ ರಾಯಚೂರು ಜಿಲ್ಲೆಯ ಬಡ ಕೂಲಿ ಕಾರ್ಮಿಕರನ್ನು, ನಿರುದ್ಯೋಗಿಗಳನ್ನು ಆನ್‌ಲೈನ್ ಲಾಟರಿ ಎಂಬ ಗೌರ್ನಮೆಂಟ್ ಮಟ್ಕಾ ಸುಲಿಯುತ್ತಿದೆ. ಹಣ್ಣುಗಾಯಿ ಮಾಡುತ್ತಿದೆ. ನೀರು ಕುಡಿಸುತ್ತಿದೆ.


ಗಲ್ಲಿಗೊಂದು ಆನ್‌ಲೈನ್ ಲಾಟರಿ ಅಡ್ಡೆ

ಕೊಪ್ಪಳ, ರಾಯಚೂರು ಮತ್ತು ಪಕ್ಕದ ಜಿಲ್ಲೆಗಳಲ್ಲಿ ಈಗಾಗಲೇ ತನ್ನ ವಿರಾಟ್ ಸ್ವರೂಪ ತೋರಿಸುತ್ತಿರುವ ಆನ್‌ಲೈನ್‌ಗೆ ಕಳೆದ ತಿಂಗಳು ಮುದ್ದಬಹಾಳದ ಶಫಿಕ್ ಅತ್ತಾರ್ ಎಂಬ 22ರ ಯುವಕ ವಿಷ ಕುಡಿದು ಬದುಕುಳಿದಿದ್ದಾನೆ. ಗ್ಯಾರೇಜ್ ಮೆಕಾನಿಕ್ ಆಗಿದ್ದ ಈತ ದುಡಿಮೆಯಿಲ್ಲದೆ, ಬಾಡಿಗೆ ರೂಪದ ಸಾಲ ರೂ. 5 ಸಾವಿರವನ್ನು ಆನ್‌ಲೈನ್‌ನಲ್ಲಿ ಸೋತು ವಿಷ ಕುಡಿದಿದ್ದ. ನಂತರ ರಬಕವಿಯಲ್ಲಿ ಬನಹಟ್ಟಿಯ ಉಮೇಶ ಎಂಬಾತ ಇದೇ ಲಾಟರಿ ಆಡಿ 60 ಸಾವಿರ ಕಳೆದುಕೊಂಡು, ಕೊನೆಗೆ ತನ್ನ ಜೀಪನ್ನು 30 ಸಾವಿರಕ್ಕೆ ಒತ್ತೆ ಇಟ್ಟು ಉಳಿದ ಹಣಕ್ಕೆಂದು ಅದೇ ಲಾಟರಿ ಸೆಂಟರ್‌ನಲ್ಲಿ ಕೆಲಸಕ್ಕಿದ್ದು ಬಿಟ್ಟ.

ದೂರದ ನಾಗಾಲ್ಯಾಂಡ್ ಮೂಲಕ ಈ ಲಾಟರಿ ದಿನಕ್ಕೆ 20ಕ್ಕಿಂತ ಹೆಚ್ಚು ಡ್ರಾಗಳನ್ನು ನಡೆಸುವ ಮೂಲಕ, 12 ರೂಗೆ 100 ರೂ. ನೀಡುವ ಆಮಿಷದಿಂದ ಬಡವರನ್ನು ಸುಲಿಯುತ್ತಲೇ ಇದೆ.

ಇದು ಒಂದಂಕಿ ಲಾಟರಿ!

ಹೊರನೋಟಕ್ಕೆ ಇದು ಆನ್‌ಲೈನ್ ಲಾಟರಿಯಂತೆ ಕಂಡರೂ ಒಂದಂಕಿಯಂತಹ ಲಾಟರಿಯಂತೆ ಇರುವುದು, ಬೆಂಗಳೂರಿನ ಎಲ್.ಎಸ್. ಡಿಸ್ಟಿಬ್ಯೂಟರ್‌ನವರೇ ಮೇನ್ ಸ್ಟಾಕಿಸ್ಟ್. ಲಾಟರಿ ಆಡಿ ಜನ ಸತ್ತರೆ ನಾಳೆ ಇವರೇ ಶವಪೆಟ್ಟಿಗೆ ಸಪ್ಲೈ ಮಾಡುವ ಏಜನ್ಸಿ ಹಿಡಿದರೂ ಬಹಳ ಉತ್ತಮ. ಯಾವಯಾವುದೋ ಹೆಸರಲ್ಲಿ ಅರ್ಧ ಗಂಟೆ, ಹದಿನೈದು ನಿಮಿಷಕ್ಕೊಮ್ಮೆ ನಡೆಯುವ ಡ್ರಾನಲ್ಲಿ 10 ಡ್ರಾಗಳ ರಿಸಲ್ಟ್ ಬರುತ್ತದೆ. ಅಂದರೆ ಜೇಬಲ್ಲಿ ದುಡ್ಡಿದ್ದವನು ಒಮ್ಮೆಗೆ ಹತ್ತತ್ತು ಬಾರಿ ಚೌರ ಮಾಡಿಸಿಕೊಳ್ಳಬಹುದು. ಹತ್ತು ಡ್ರಾಗಳನ್ನು 00 ರಿಂದ 09 ರವರೆಗೆ 10 ರಿಂದ 19 ರವರೆಗೆ ಹೀಗೆ 90 ರಿಂದ 99 ರವರೆಗೆ ಅಂತ ಅಂಕಿಯ ಆಟ ಆಡಿಸಲಾಗುತ್ತದೆಯಾದರೂ ಪ್ರತಿ ಸೀರಿಸ್‌ನಲ್ಲಿ ಮೊದಲ ಅಂಕಿ ನಿಗದಿಯಾಗಿರುತ್ತದೆ. ಉದಾಹರಣೆಗೆ ನೀವು 13 ಅಂಕಿಯ ಲಾಟರಿ ಪಡೆದುಕೊಂಡರೆ ನೀವು 3 ಅಂಕಿಗೆ ಮಾತ್ರ ಬೆಟ್ ಕಟ್ಟಿದಂತೆ. ಏಕೆಂದರೆ ಮೊದಲನೆಯ 1 ಅಂಕಿ ನಿಗದಿಯಾಗಿರುತ್ತದೆ. ಹೀಗಾಗಿ ನಿಸ್ಸಂಶಯವಾಗಿ ಇದು ಆನ್‌ಲೈನ್ ಹೆಸರಿನ ಒಂದಂಕಿಯೆ.

ಎರಡಂಕಿಯೂ ಇದೆ!

ಒಂದಂಕಿ ಅಲ್ಲದೆ, ಮಟ್ಕಾ ಮಾರಿಗೆ ಬಲಿಯಾಗಿರುವರಿಗಾಗಿಯೇ ಇಲ್ಲಿ ಎರಡಂಕಿ ಲಾಟರಿ ಎಂಬುದು ಮಟ್ಕಾ ಮಾದರಿಯಲ್ಲಿಯೇ ಇದೆ. ಆದರೆ ಇದು ಮಟ್ಕಾ ರಿಸಲ್ಟ್ ಬರುವ ವೇಳೆಗೇ ಅಂದರೆ ರಾತ್ರಿ 9.15ಕ್ಕೆ ಇದ್ದು ಎರಡಂಕಿಯ 00 ರಿಂದ 99 ರವರೆಗಿನ ಯಾವುದೇ ಲಾಟರಿಗೆ ಬೆಟ್ ಕಟ್ಟಬಹುದು. 10 ರೂ. ನ ಒಂದು ಟಿಕೆಟ್‌ಗೆ ಬಹುಮಾನ ಬಂದ್ರೆ 850 ರೂ. ಬರುತ್ತದೆ. ಆದರೆ ಮಟ್ಕಾದವರು ಇದೇ 10 ರೂ.ಗೆ 800 ರೂ. ಕೊಟ್ಟರೆ ಇವರು 50 ರೂ. ಹೆಚ್ಚಿಗೆ ಕೊಡ್ತಾರೆ. ಈ ಡ್ರಾನ ಹೆಸರು ಸೂರಜ್!

ರಾಯಚೂರು-ಕೊಪ್ಪಳ

ಮೂರಂಕಿಯೂ ಇದೆ ಮಾರಾಯ್ರೆ!


ಒಂದಂಕಿ, ಎರಡಂಕಿ ಅಲ್ಲದೆ ಆಸೆ ಹಚ್ಚಲೆಂದೇ ಸ್ವಪ್ನ ಹೆಸರಿನ ಮೂರಂಕಿಯ ಲಾಟರಿಯೂ ಇದೆ. ಅತ್ಯಂತ ಕಡಿಮೆ ಹಣಕ್ಕೆ ಅತಿಹೆಚ್ಚು ಬಹುಮಾನ ಬರುವ ಡ್ರಾ ಇದು. ಬರೀ 5 ರೂ.ಗೆ ಲಾಟರಿ ಹೊಡೆದರೆ 4 ಸಾವಿರ ರೂ. ಬಹುಮಾನ! ಹೋದರೆ 5 ರೂ. ಬಂದ್ರೆ 4 ಸಾವಿರ ಅಂತ! ಇದಕ್ಕೂ ಬಡವರು ಮುಗಿಬಿದ್ದಿದ್ದಾರೆ. ಆದರೆ ಇದು ದಿನಕ್ಕೆ ಒಮ್ಮೆ ಮಧ್ಯಾಹ್ನ 2.45ಕ್ಕೆ ಮಾತ್ರ ನಡೆಯುತ್ತೆ. ಸರಾಸರಿ 10 ಟಿಕೆಟ್ ಮೇಲೆ ಬಹುಮಾನ ಖಚಿತ ಎನ್ನುವ ಇವರು ಇದನ್ನು ಜನ ಕಡಿಮೆ ಇರುವ ಮಧ್ಯಾಹ್ನದ ಹೊತ್ತಿನಲ್ಲೇ ಡ್ರಾ ನಡೆಸುತ್ತಾರೆ. ಕಾರಣ? ಕಡಿಮೆ ಕಲೆಕ್ಷನ್‌ಗೆ ದೊಡ್ಡ ಚೌರ್ ಮಾಡಿಸಿಕೊಳ್ಳೋಕೆ ಅವರಿಗೇನು ಹುಚ್ಚಾ?

ಕೊಪ್ಪಳ ಜಿಲ್ಲೆಯಲ್ಲಿ

ವಸಂತ, ಅಷ್ಟಲಕ್ಷ್ಮಿ, ಎಸ್.ಎಲ್.ಬಿ. ಗಜಾನನ, ಮಹಾಲಕ್ಷ್ಮಿ ಸೇರಿದಂತೆ 15 ಆನ್‌ಲೈನ್ ಲಾಟರಿ ಸೆಂಟರ್ ಇರುವ ಕೊಪ್ಪಳದಲ್ಲಿ ನಿತ್ಯ 3 ಲಕ್ಷ ರೂಪಾಯಿಯನ್ನು ಬಡವರು, ಕೂಲಿ ಕಾರ್ಮಿಕರು, ಯುವಕರು ಕಳೆದುಕೊಳ್ಳುತ್ತಿದ್ದಾರೆ. ಮೊನ್ನೆ ಕೆಲದಿನಗಳ ಹಿಂದೆ ವಡ್ಡರ್ ಓಣಿ ಹುಡುಗನೊಬ್ಬ ಮನೆಯಲ್ಲಿ ಹಣ ಕದ್ದು ತಂದು ಲಾಟರಿ ಆಡಿ ಸೋತದ್ದು, ಜನ ರೊಚ್ಚಿಗೆದ್ದು ಗಜಾನನ ಲಾಟರಿ ಸೆಂಟರ್‌ಗೆ ಮುತ್ತಿಗೆ ಹಾಕಿದ್ದು ದೊಡ್ಡ ರಾದ್ಧಾಂತವಾಗಿತ್ತು, ಅದರಲ್ಲೂ ಕೊಪ್ಪಳದಲ್ಲಿ ಎಸ್.ಪಿ. ಪದ್ಮನಯನ ಮಟ್ಕಾವನ್ನು ಮಟ್ಟ ಹಾಕಿದ ಮೇಲೆ ಜೂಜುಕೋರರೆಲ್ಲ ಇತ್ತ ತಿರುಗಿದ್ದು ಮಟ್ಕಾಧಿಪತಿಗಳು ಹೊಟ್ಟೆ ಉರಿಸಿಕೊಂಡು ಬಾಯಿಬಡಿದುಕೊಳ್ಳುತ್ತಿದ್ದಾರೆ. ಇನ್ನು ಎರಡು ಗೇಣು ಇರುವ ಯಲಬುರ್ಗಾದಲ್ಲಿ ಎಸ್‌ಟಿಡಿಗಳಲ್ಲೇ ರಕ್ಷಾ, ಆದರ್ಶ, ಲಕ್ಕಿ, ಅರುಣ್ ಎಂಬ ಲಾಟರಿ ಸೆಂಟರ್‌ಗಳು ದಿನಕ್ಕೆ 50 ಸಾವಿರ ಸುಲಿಯುತ್ತಿವೆ. ಗಂಗಾವತಿಯಲ್ಲಿ ಶುಭೋದಯ, ವಾಸವಿ, ಗುರುರಾಘವೇಂದ್ರ, ಸುಜಲ, ಸರ್ವೇಶ್, ಸಿಬಿಎಸ್, ಸ್ಟಾರ್, ಐಶ್ವರ್ಯ ಆನ್‌ಲೈನ್ ಸೇರಿದಂತೆ 16 ಸೆಂಟರ್‌ಗಳಿದ್ದು ನಿತ್ಯ ಕಮ್ಮಿಯೆಂದರೂ 10 ಲಕ್ಷ ರೂಪಾಯಿಯನ್ನು ಕಲೆಕ್ಷನ್ ಮಾಡುತ್ತಿವೆ. ಕುಷ್ಟಗಿಯಂತಹ ಸಣ್ಣ ಪಟ್ಟಣದಲ್ಲೇ 20ಕ್ಕೂ ಹೆಚ್ಚು ಸೆಂಟರ್‌ಗಳು ನಿತ್ಯ 2 ಲಕ್ಷ ಹಣವನ್ನು ಲೂಟಿ ಹೊಡೆಯುತ್ತಿವೆ.

ರಾಯಚೂರು ಜಿಲ್ಲೆಯಲ್ಲಿ!

ನೀರಾವರಿಯಿಂದ ಹಸಿರಾಗಿ ಕಾಲಿಟ್ಟಲೆಲ್ಲ ಕಾಂಚಾಣವನ್ನೇ ಕಾಣುವ ಸಿಂಧನೂರಿನಲ್ಲಿ ಆನಂದ, ಆಶಾ, ಕಿರಣ್, ರವಿ, ಚೇತನ್, ನವೋದಯ ಆನ್‌ಲೈನ್ ಸೇರಿದಂತೆ 30ಕ್ಕೂ ಹೆಚ್ಚು ಸೆಂಟರ್‌ಗಳು ಪ್ರತಿ ದಿನವೂ 10 ರಿಂದ 15 ಲಕ್ಷದವರೆಗೆ ಇಲ್ಲಿನ ಬಡ ಕೂಲಿ ಕಾರ್ಮಿಕರ, ಹಮಾಲಿಗಳ ಗೌಂಡಿಗಳ, ರಿಕ್ಷಾವಾಲಾಗಳ ಹಣವನ್ನು ಸುಲಿಯುತ್ತಿದ್ದು ಬಿಟ್ಟಿ ದುಡ್ಡಿಗೆ ಆಸೆಪಡುವ ಶ್ರೀಮಂತ ಯುವಕರ ಪಾಲಿಗೆ ಇದು ಹಣ ಬಿತ್ತಿ ಹಣದ ಬೆಳೆ ತೆಗೆಯುವ ಕೃಷಿಯಾಗಿ ಮಾರ್ಪಟ್ಟದ್ದು ಅಲ್ಲಲ್ಲಿ ಪೊಲೀಸರೇ ಇದನ್ನು ಆಡುತ್ತಿದ್ದಾರೆ.


ಆನ್‌ಲೈನ್ ವಿರುದ್ಧ ವಿನೂತನ ಪ್ರತಿಭಟನೆ

ರಾಯಚೂರಿನ ರಂಗನಾಥ, ಗುರುರಾಜ. ರಾಜೇಶ್ವರಿ, ಕೃಷ್ಣ ಶಬರಿ ಸೇರಿದಂತೆ 30ಕ್ಕೂ ಹೆಚ್ಚು ಲಾಟರಿ ಸೆಂಟರ್‌ಗಳು ಇಲ್ಲಿ ನಿತ್ಯ 15 ಲಕ್ಷ ಕಮಾಯಿಸುತ್ತಿದೆ.

ಅಮರೇಗೌಡ ಬಯ್ಯಾಪುರರ ಲಿಂಗಸೂರಿನಲ್ಲಿ 15 ಸೆಂಟ[...] ಗಳು ಇದ್ದು, ತಾಲ್ಲೂಕಿನ ಸಣ್ಣ ಪಟ್ಟಣಗಳಾದ ಮುದಗ[...] ಮಸ್ಕಿ, ಬಂಗಾರದ ಪಟ್ಟಣಗಳಲ್ಲೂ ಆನ್‌ಲೈನ್ ಚಾ[...] ಆಗಿ, ಹಳ್ಳಿಯಿಂದ ಕಾಲೇಜಿಗೆ ಬರುವ ವಿದ್ಯಾರ್ಥಿಗಳ[...] ಸುಲಿದು ನಿತ್ಯ 3 ಲಕ್ಷ ಕಮಾಯಿಸುತ್ತಿವೆ. ಈ [...] ಲಾಟರಿ ಕೇಂದ್ರಗಳಿಗೆ ರಾಜಕಾರಣಿಗಳ ಬೆಂ[...] ಒಳಗೊಳಗೆ ಸಿಕ್ಕಿದ್ದು ಲಾಟರಿ ಆಡಿಸುವವರಿಗೆ ಯಾ[...] ಭಯವೂ ಇಲ್ಲವಾಗಿದೆ. ಇದೇ ತಾಲ್ಲೂಕಿನ ಗೆಜ್ಜಲಗಟ್ಟಾ[...] ನಾಗಪ್ಪ, ವಿಜಯ, ರಮೇಶ ಎಂಬ ಬಡವರು, [...] ಶ್ರೀಮಂತ ಇನ್ಫೋಸಿಸ್‌ನ ಬಿಲ್ಡಿಂಗ್ ಕೆಲಸಕ್ಕೆ ಹೋ[...] ಜೀವ ಕಳೆದುಕೊಂಡರು. ಇದು ಇಲ್ಲಿ ಕಾಡುತ್ತಿರು[...] ನಿರುದ್ಯೋಗ ಸಮಸ್ಯೆಗೆ ಹಿಡಿದ ಕನ್ನಡಿ.

ಯಾರಾದರೂ ಆಫ್ರಿಕಾ ನೋಡಿರದಿದ್ದರೆ ಅವ[...] ತೋರಿಸಲು ಲಾಯಕ್ಕಿರುವ ದೇವದುರ್ಗದಂತ[...] ದುರ್ಗಮ ತಾಲ್ಲೂಕಿನಲ್ಲಿಯೂ ಆನ್‌ಲೈನ್ ಲಾಟ[...] ದಾಂಗುಡಿ ಇಟ್ಟದೆ. ಈಗಾಗಲೇ ಆರು ಜನ ಇದ[...] ಬಲಿಯಾಗಿದ್ದಾರೆಂದು ಸಾರ್ವಜನಿಕರು ಹೇಳಿದರೆ, ಅವ[...] ಸಹಜ ಸಾವುಗಳು ಎಂದು ವಾದಿಸುವ ಗುಂಪೊಂ[...] ಹುಟ್ಟಿಕೊಂಡಿದೆ. ತಾಲ್ಲೂಕು ಕೇಂದ್ರ ದೇವದುರ್ಗದ[...] 20 ಲಾಟರಿ ಸೆಂಟರ್‌ಗಳು ಹುಟ್ಟಿ 16 ಲ[...] ಜಾಲಹಳ್ಳಿಯಲ್ಲಿ 3 ಲಕ್ಷ, ಗಬ್ಬೂರ್‌ನಲ್ಲಿ 1 ಲಕ್ಷ ಹಣವ[...] ಗಳಿಸುತ್ತ ರೈತರನ್ನು, ಯುವಕರನ್ನು ಬಲಿ ಮಾಡುತ್ತಿ[...]

ಪ್ರತಿಭಟನೆ, ಆಗ್ರಹಗಳು

ಕೊಪ್ಪಳ, ರಾಯಚೂರು ಜಿಲ್ಲೆಯ ನಗರ, ಪಟ್ಟಣಗಳ[...] ಎಲ್ಲೆಂದರಲ್ಲಿ ತಲೆ ಎತ್ತಿರುವ ಲಾಟರಿ ಕೇಂದ್ರಗಳನ[...] ಬಂದ್ ಮಾಡಿಸಬೇಕು. ದಿ. 20 ರಂದು ಕೊಪ್ಪಳದ[...] ಜಿಲ್ಲಾ ಪಂಚಾಯ್ತಿ ಮಾಜಿ ಅಧ್ಯಕ್ಷ ಮುಕುಂದ್‌ರಾವ[...] ಸೇವಾದಳದ ಜಾಕೀರ್, ಅಹಿಂದ ಮುಖಂಡ ಯೂಸೂ[...] ಖಾನ್, ವೀರಕನ್ನಡಿಗ ಯುವಕರ ಸಂಘದ ಶಿವಾನಂ[...] ಅಲ್ಪಸಂಖ್ಯಾತರ ಹಕ್ಕು ವೇದಿಕೆಯ ಪಟ್ಟ ಮೌಲಾಹುಸೇ[...] ರಮೇಶ್ ಬೆಲ್ಲದ, ಬುಸಾ ಸಾಹಿ[...] ಹೇಳಿಕೆಗೆ ಪ್ರತಿಭಟನೆಯಾಗಿ ಲಂಕೇಶ್‌ರು ಬೂಟ್ ಪಾಲಿ[...] ನಡೆಸಿದ್ದನ್ನು ನೆನೆಸುವಂತೆ ಬಸ್‌ಸ್ಟಾಂ[...] ಮುಂದೆ ಬೂಟ್ ಪಾಲಿಷ್ ಮಾ[...] ಆ ಹಣವನ್ನು ಲಾಟರಿ ಮಂತ್ರಿಗೆ ಮ[...] ಆರ್ಡರ್ ಮಾಡಿದ್ದಾರೆ. ಲಿಂಗಸೂರಿ[...] ರಾಜ್ಯ ರೈತ ಸಂಘದ ಅಮರ[...] ಗುಡಿಹಾಳ, ಆದರ್ಶ ಯುವಕ ಸಂ[...] ಯಲಬುರ್ಗಾದ ಜನ ಜಾಗೃ[...] ಸಮಿತಿಯ ಬಸಪ್ಪಗೌಡರ ಈ ಆ[...] ಲೈನ್‌ನ್ನು ನಿಲ್ಲಿಸುವಂತೆ ಒತ್ತಾಯಿ[...] ತ್ತಿದ್ದಾರೆ.

ಸಾಮಾನ್ಯ ಜನ ಇದಕ್ಕೆ ಬಲಿಯಾ[...] ನಿಷೇಧಿಸಿ ಅಂತ ಹೇಳುತ್ತಿದ್ದರೆ ಅತ್ತ ತಾನೇ ಆನ್‌ಲೈ[...] ಲಾಟರಿಗೆ ಬಲಿಯಾದವರಂತೆ ಲಾಟರಿ ಮಂತ್ರಿ ರಾ[...] ಚಂದ್ರಗೌಡರೇ ನಿಷೇಧಿಸಿ ಅಂತ ಕೇಂದ್ರಕ್ಕೆ ಮೊರೆ ಹೋ[...] ದ್ದಾರೆ. ಸರ್ಕಾರದ ಒಬ್ಬ ಮಂತ್ರಿಯೇ ಹೀಗೆ ಬಾ[...] ಬಡಿದುಕೊಂಡರೆ ಸಾಮಾನ್ಯ ಜನರನ್ನು ಉಳಿಸುವ ವರ್‍ಯಾರು[...] ಈಗ ಅರ್ಜೆಂಟಾಗಿ ಮಾಡಬೇಕಿರುವುದು ಕರ್ನಾಟಕವ[...] ಲಾಟರಿ ಮುಕ್ತ ರಾಜ್ಯವನ್ನಾಗಿ ಘೋಷಿಸುವುದು.

-ವರದಿಗಾ[...]

ಗದಗ: ಹೊಸಳ್ಳಿ ಮಠ ಚೆಡ್ಡಿ ಸ್ವಾಮಿ[...] ವಿರುದ್ಧ ಸೆಟೆದು ನಿಂತ ಮಂಜುಳಾ


ಮಠಾಳ ಸ್ವಾಮಿಯ ಹಿಂದೆ ರಾಜಕಾರಣಿಗಳು, ಪೊಲೀಸರು, ಪತ್ರಕರ್ತರೆಲ್ಲ ನಿಂತು, ನ್ಯಾಯ ಕೇಳಿದ ಮಹಿಳೆಯೋರ್ವಳ ಧ್ವನಿಯನ್ನು ಹತ್ತಿಕ್ಕಲು ನೋಡಿದ್ದಾರೆ. ಸಂಘ ಪರಿವಾರದ ಬಾಲದಂತಿರುವ ಈ ಸ್ವಾಮಿಗೆ ಜನರೇ ಬುದ್ಧಿ ಕಲಿಸಬೇಕಾಗಿದೆ.



ಗದಗ ತಾಲ್ಲೂಕಿನ ಹೊಸಹಳ್ಳಿಯ ಮಠದ ಶಿವಯ್ಯ ಅಲಿಯಾಸ್ ಅಭಿನವ ಬೂದೀಶ್ವರಸ್ವಾಮಿ ಎಂಬ ಖಾವಿಧಾರಿಯ ಮಸಲತ್ತಿನಿಂದ ಮಂಜುಳಾ ಪತ್ತಿಮಠ ಅನ್ಯಾಯಕ್ಕೊಳಗಾಗಿದ್ದಾಳೆ. ಸ್ವಾಮಿಯ ಪ್ರೇಮಪಾಶದಲ್ಲಿ ಬಿದ್ದು ಗಂಡ-ಮಕ್ಕಳನ್ನು ತೊರೆದ ಮಂಜುಳಾ ಪತ್ತಿಮಠಳನ್ನು ಈಗ ಭಂಡ ಶಿವಯ್ಯ ಬೀದಿಗೆ ತಂದಿದ್ದಾನೆ. ಛಲದಿಂದ ಪ್ರತಿಭಟಿಸಿದ ಮಂಜುಳಾರನ್ನು ಥಳಿಸಿ ಅವಮಾನಿಸಲಾಗಿದೆ. ಮಠದ ಮುಂದೆ 4 ದಿನ ಧರಣಿ ನಡೆಸಿದ ಮಂಜುಳಾರನ್ನು ಕರೆಸಿಕೊಂಡ ಶಾಸಕ ಡಿ.ಆರ್. ಪಾಟೀಲ್, ಸವದತ್ತಿಯ ಶಾಸಕ ಮಾಮನಿ, ಜಿಲ್ಲಾ ಪಂಚಾಯ್ತಿ ಸದಸ್ಯ ಮನೋಹರ ಇನಾಮತಿ, ಡಿವೈಎಸ್‌ಪಿ ಜಿ. ಪಾಪಯ್ಯ, ಮಂಜುಳಾರ ವಿಚಾರಣೆ ನಡೆಸಿದಂತೆ ಮಾಡಿ, ಮಠದ ಮಾನ ಹರಾಜಾಗುತ್ತೆ ಎಂದು ರೀಲು ಬಿಟ್ಟು, ಉಪಾಯದಿಂದ ಕಪ್ಪುಚುಕ್ಕೆಗೆ ಪತ್ರಕ್ಕೆ ಸಹಿ ಪಡೆದು, ಶಿವಯ್ಯನನ್ನು ಉಳಿಸಿಕೊಂಡಿದ್ದಾರೆ. ಪ್ರಕರಣವನ್ನು ಮುಚ್ಚಿಹಾಕುವಲ್ಲಿ ಗದಗಿನ ಪತ್ರಕರ್ತರೂ ಸಹಕರಿಸಿಬಿಟ್ಟಿದ್ದಾರೆ.

ಸ್ವಾಮಿಯೊಂದಿಗೆ ಸಂಪರ್ಕ

ದೊಡ್ಡ ಪರಂಪರೆ ಇರುವ ಹೊಸಹಳ್ಳಿ ಮಠಕ್ಕೆ 6 ವರ್ಷದ ಹಿಂದೆ ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ ಬನ್ನೂರಿನ 24ರ ಹರೆಯದ ಶಿವಯ್ಯ ಎಂಬಾತ ವಕ್ಕರಿಸಿಕೊಂಡು, ಪೀಠ ಏರಿಯೇ ಬಿಟ್ಟ. ಮಾತಾಡುವುದರಲ್ಲಿ ಕಲಾಕಾರನಾಗಿರುವ ಈ ಶಿವಯ್ಯ ಭಕ್ತರನ್ನು ಆಕರ್ಷಿಸತೊಡಗಿದ. ಬಿಜಾಪುರ ಜಿಲ್ಲೆಯ ಇಂಡಿಯ ಸಭೆಯೊಂದರಲ್ಲಿ ಶಿವಯ್ಯನ ವಾಕ್ಚಾತುರ್ಯಕ್ಕೆ ಒಲಿದ ಮಂಜುಳಾ ಪತ್ತಿಮಠ ಶಿವಯ್ಯನನ್ನು ಪ್ರೀತಿಸತೊಡಗಿದರು. ಸ್ವಾಮಿಯೂ ಮಂಜುಳಾರ ಮೋಹದಲ್ಲಿ ಮುಳುಗಿಹೋದ. ಅಂದಿನಿಂದ ಮಂಜುಳಾ ಆಗಾಗ ಹೊಸಹಳ್ಳಿಯ ಮಠಕ್ಕೆ ಬಂದು ಸ್ವಾಮಿಯೊಂದಿಗೆ ರಾತ್ರಿಗಳನ್ನು ಕಳೆದು ಹೋಗತೊಡಗಿದರು.



ಇವರಿಬ್ಬರ ಮಧ್ಯದ ಪ್ರೇಮ ಪರಾಕಾಷ್ಠೆಗೆ ತಲುಪಿತು. ಸ್ವಾಮಿಯನ್ನು ಪೂರ್ತಿಯಾಗಿ ನಂಬಿದ ಮಂಜುಳಾ ಗಂಡ, ಮಕ್ಕಳನ್ನು ತೊರೆದುಬಿಟ್ಟರು. ಮದುವೆ ಮಾಡಿಕೊಳ್ಳುವಂತೆ ಒತ್ತಾಯ ಮಾಡತೊಡಗಿದಾಗ, ಶಿವಯ್ಯ ಉಲ್ಟಾ ಹೊಡೆದುಬಿಟ್ಟ. ಊರ ಜನರನ್ನು ಮಂಜುಳಾ ವಿರುದ್ಧ ಎತ್ತಿ ಕಟ್ಟಲು ನೋಡಿದ. ಅದು ಸಾಧ್ಯವಾಗದಿದ್ದಾಗ ರಾಜಕಾರಣಿಗಳು, ಪೊಲೀಸರಿಂದ ಒತ್ತಡ ತಂದು ಮಂಜುಳಾರಿಗೆ ಮೋಸ ಮಾಡಿಯೇಬಿಟ್ಟ. ಮೊನ್ನೆ 16ರಿಂದ ಮಂಜುಳಾ ನಡೆಸುತ್ತಿರುವ ಹೋರಾಟಕ್ಕೆ ಪ್ರಗತಿಪರ ಸಂಘಟನೆಗಳು ಬೆಂಬಲಿಸಬೇಕಿದೆ.

ಚೆಡ್ಡಿ ತೊಟ್ಟವನು....

ಪಕ್ಕಾ ಚೆಡ್ಡಿಯಾಗಿರುವ ಶಿವಯ್ಯಸ್ವಾಮಿ ಹೊಸಹಳ್ಳಿಯ ಬೂದೀಶ್ವರ ಮಠವನ್ನು ಕೇಸರಿಗೊಳಿಸುತ್ತಿದ್ದಾನೆ. ಇದೇ 24 ರಂದು ನಡೆಯುವ ವಿಶಾಲ ಹಿಂದೂ ಸಮಾವೇಶಕ್ಕೆ ಈ ಸ್ವಾಮಿಯದೇ ಸಾನ್ನಿಧ್ಯ. ಈ ಸಮಾವೇಶಕ್ಕೆ ಮಠದಿಂದ ದುಡ್ಡೂ ಹರಿದು ಬರುತ್ತಿದೆ. ಪತ್ರಕರ್ತರೆಲ್ಲ ಮಂಜುಳಾರ ಪ್ರಕರಣವನ್ನು ಸರಿಯಾಗಿ ವರದಿ ಮಾಡದೇ ಸ್ವಾಮಿಯ ಪರ ನಿಂತಿದ್ದಾರೆ. ಡಿವೈಎಸ್‌ಪಿ ಪಾಪಯ್ಯ ಮಂಜುಳಾರಿಗೆ ತಲೆ ಕೆಟ್ಟಿದೆ ಎಂದು ಸುಳ್ಳು ಬೊಗಳ[...]ತ್ತಿದ್ದಾನೆ.


ಇನಾಮತಿ

ಅಂತೂರು-ಬೆಂತೂರಿನಲ್ಲಿರುವ ಹೊಸಹಳ್ಳಿಯ[...] ಬೂದೀಶ್ವರ ಮಠದ ಶಾಖಾಮಠದಲ್ಲೂ 6 ವರ್ಷ[...] ಹಿಂದೆ ಸೆಕ್ಸ್ ಹಗರಣ ನಡೆದು ಸುದ್ದಿಯಾಗಿತ್ತು, ಕುಮಾ[...] ದೇವರು ಎಂಬ ಸ್ವಾಮಿ ಸಂಗೀತ ಕಲಿಸಿ ಕೊಡು[...] ನೆಪದಲ್ಲಿ ಜೈನರ ಹುಡುಗಿಯೊಂದಿ[...] ಚೆಲ್ಲಾಟವಾಡಲು ಹೋಗಿ ಗ್ರಾಮ[...] ರಿಂದ ಥಳಿಸಿಕೊಂಡಿದ್ದ. ಆಮೇ[...] ನೆಟ್ಟಗಾದ ಕುಮಾರಸ್ವಾಮಿ ಈ[...] ಸಂಸಾರಸ್ಥನಾಗಿ ತೆಪ್ಪಗೇ ಇದ್ದಾನೆ.

ಹಿಂದೆ ಬೂದೀಶ್ವರ ಸ್ವಾಮಿಗ[...] ಸುತ್ತಲಿನ ಹಳ್ಳಿಗಳಿಗೆಲ್ಲ ಬೇಕಾದವ[...] ಗಿದ್ದರು. ಅಂತಹ ಮಠಕ್ಕೆ ಈಗ ಚ[...] ಆಸಾಮಿ ಶಿವಯ್ಯ ಅಲಿಯಾ[...] ಅಭಿನವ ಬೂದೀಶ್ವರಸ್ವಾಮಿ ತಗುಲಿಕೊಂಡು ಮಠವ[...] ಗಬ್ಬು ಎಬ್ಬಿಸುತ್ತಿದ್ದಾನೆ.

ಕಾಂಗ್ರೆಸ್ ಸೇರುವ ತವಕದಲ್ಲಿ ರಾಜಕೀಯ ನಿರಾಶ್ರಿತರು!

ರಾಜ್ಯದ ರಾಜಕೀಯ ಹವಾ ಈಗ ಬದಲಾಗ ತೊಡಗಿದೆ. ಕಳೆದ ಎರಡೂವರೆ ವರ್ಷಗಳಿಂದ ಎಲ್ಲರಿಂದಲೂ ತಿರಸ್ಕರಿಸಲ್ಪಟ್ಟವರು, ಕಾಂಗ್ರೆಸ್‌ನಿಂದ ದೂರ ಸರಿದವರು, ಬಿಜೆಪಿ-ಜೆಡಿಎಸ್‌ನಲ್ಲಿ ಇದ್ದೂ ಇಲ್ಲದಂತಿರುವವರೆಲ್ಲಾ ಈಗ ಕಾಂಗ್ರೆಸ್ ಆಶ್ರಯಕ್ಕೆ ಹಂಬಲಿಸುತ್ತಿದ್ದಾರೆ. ಇಂತಹ ಒಂದು ತಂಗಾಳಿ ಕಾಂಗ್ರೆಸ್ ನತ್ತ ಬೀಸಲು ಕಾರಣವಾಗಿರುವುದು ಚಾಮುಂಡೇಶ್ವರಿ ವಿಜಯ! ಸಿದ್ದರಾಮಯ್ಯ ಸೇರ್ಪಡೆಯಿಂದ ಕಾಂಗ್ರೆಸ್‌ಗೆ ಭೀಮಬಲ ಬಂತು ಎನ್ನುವುದನ್ನು ಒಪ್ಪುವಂತೆ, ಮೈಸೂರು ಪ್ರಾಂತದ ಪ್ರಬುದ್ಧ ರಾಜಕಾರಣಿ ಶ್ರೀನಿವಾಸ ಪ್ರಸಾದ್‌ರ ಆಗಮನವೂ ಸಮರ್ಥನೀಯವೇ. ಆದರೆ ಇದೇ ರೀತಿ ಮುಂದುವರೆದು ಬೇರೆ ಪಕ್ಷಗಳಲ್ಲಿ ಸಲ್ಲದ ಕಳಂಕಪೂರಿತ ರಾಜಕೀಯ ರಾಡಿಯನ್ನೆಲ್ಲಾ ತನ್ನ ತೆಕ್ಕೆಗೆ ಸೆಳೆದುಕೊಳ್ಳುತ್ತಿರುವುದು ಕಾಂಗ್ರೆಸ್‌ನ ಅನಿವಾರ್ಯತೆಯೇ? ಸಮಯಸಾಧಕತನವೇ? ಒಂದೂ ಅರ್ಥವಾಗುತ್ತಿಲ್ಲ.



ಧನಂಜಯ ಕುಮಾರ್


ಇಂತಹ ಪ್ರಶ್ನೆಗಳಿಗೆ ಕಾರಣವಾಗಿರುವುದು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಧನಂಜಯ ಕುಮಾರ್, ಐ.ಎಂ. ಜಯರಾಂ ಶೆಟ್ಟಿಯಂತಹ ಬಿಜೆಪಿಯ ಕಳಂಕಿತ ರಾಜಕಾರಣಿಗಳು ಕಾಂಗ್ರೆಸ್‌ಗೆ ಸೇರುವ ಸುದ್ದಿ. ಇವರಂತಹ ಚೆಡ್ಡಿ ಹಿನ್ನೆಲೆಯ ಬಿಜೆಪಿಗರನ್ನು ಕಾಂಗ್ರೆಸ್‌ಗೆ ಸೆಳೆದುಕೊಂಡ ತಕ್ಷಣ ಅವರು 'ಸೆಕ್ಯುಲರ್' ಆಗಿಬಿಡುತ್ತಾರ? ಎನ್ನುವ ಪ್ರಶ್ನೆಯೂ ಇವತ್ತು ಗಂಭೀರ ಚರ್ಚೆಗೆ ಗ್ರಾಸವಾಗುತ್ತಿದೆ.

[illegible]

ಆರ್‌ಎಸ್‌ಎಸ್ ಹಿನ್ನೆಲೆ ಮತ್ತು ಧರ್ಮಸ್ಥಳ ಮಂಜುನಾಥನ ಕೃಪೆಯಿಂದಾಗಿಯೇ 1984 ರಲ್ಲಿ ಮಂಗಳೂರಿನ ಬಿಜೆಪಿ ಎಂಎಲ್‌ಎ ಆಗುವುದರ ಮೂಲಕ ರಾಜಕೀಯ 'ಲೈಮ್‌ಲೈಟ್'ಗೆ ಬಂದವರು ಧನಂಜಯಕುಮಾರ್. 1991 ಮತ್ತು 1994 ರ ಲೋಕಸಭೆ ಚುನಾವಣೆಯಲ್ಲಿ ಜನಾರ್ದನ ಪೂಜಾರಿಗೆ ಸೋಲುಣಿಸಿದ್ದು, 1999 ರಲ್ಲಿ ಮೊಯ್ಲಿ ವಿರುದ್ಧವೂ ಗೆದ್ದು ಹ್ಯಾಟ್ರಿಕ್ ಸಾಧನೆ ಮಾಡಿದರು. ಕರ್ನಾಟಕದಲ್ಲಿಯೇ ಬಿಜೆಪಿಯಿಂದ ಮೊದಲ ಬಾರಿಗೆ ಕೇಂದ್ರ ಮಂತ್ರಿಯಾದ ಹೆಗ್ಗಳಿಕೆ, ವಿಮಾನಯಾನ, ಪ್ರವಾಸೋದ್ಯಮ, ವಿತ್ತ ಸಹಾಯಕದಂತಹ ಕೇಂದ್ರ ಸರ್ಕಾರದ ಪ್ರಮುಖ ಖಾತೆಗಳನ್ನು ನಿರ್ವಹಿಸಿದ ಧನಂಜಯ್ ಕೇಂದ್ರ ಮಂತ್ರಿಯಾಗಿ ತನ್ನ ಸ್ವಂತಕ್ಕಾಗಿ ಸಾಧಿಸಿದ್ದು ದೊಡ್ಡದು. ಜಿಲ್ಲೆಯ ಕಾಂಗ್ರೆಸ್‌ನ ಎಡಬಿಡಂಗಿತನ ಮತ್ತು ಪಕ್ಷದ ವರ್ಚಸ್ಸಿನಿಂದ ಅನಾಯಾಸವಾಗಿ ಗೆಲ್ಲುತ್ತಾ ಬಂದ ಧನಂಜಯ್ ಮಂಗಳೂರಿಗಾಗಲೀ, ಪಕ್ಷಕ್ಕಾಗಲೀ ಚಿಕ್ಕಾಸಿನ ಪ್ರಯೋಜನವೂ ಮಾಡದೇ ಇಸ್ಪೀಟು, ಮೋಜು-ಮೇಜವಾನಿಗಳಲೆಲ್ಲಾ ಕಾಲಕಳೆದು, ಕೊನೆಗೆ ಅದು ವಿಪರೀತವಾಗಿ ಐಶ್ವರ್ಯ ರೈಗೇ ಕಣ್ಣು ಹಾಕಿ ಬಿಜೆಪಿ ಮಾನ ಮೂರು ಕಾಸಿಗೆ ಹರಾಜಾದರೆ, ದಿಕ್ಕೆಟ್ಟ ಕಾಂಗ್ರೆಸ್ ಅದನ್ನು ಎನ್‌ಕ್ಯಾಷ್ ಮಾಡುವ ಸ್ಥಿತಿಯಲ್ಲಿರಲಿಲ್ಲ. ಇದಕ್ಕೆ ಪ್ರಮುಖ ಕಾರಣ ದ.ಕ. ಜಿಲ್ಲಾ ಕಾಂಗ್ರೆಸ್‌ಗೆ ಶಾಪವಾಗಿರುವ ಪೂಜಾರಿ-ಮೊಯ್ಲಿ ಮತ್ತವರ ಒಣ ಜಗಳ. ಇದೀಗ ಈ ಎರಡೂ ಹಕ್ಕಿಗಳನ್ನು ಒಂದೇ ಕಲ್ಲಿನಲ್ಲಿ ಹೊಡೆಯುವ ಆಸ್ಕರಣ್ಣನ ಮಾಸ್ಟರ್ ಮೈಂಡೇ ಧನಂಜಯ್ ಕುಮಾರ್‌ರನ್ನು ಕಾಂಗ್ರೆಸ್‌ಗೆ ಸೇರಿಸುವ ಪ್ರಯತ್ನ.

ಮಂಗಳೂರು

ಕಳೆದ ಬಾರಿ ಟಿಕೆಟ್ ವಂಚಿತರಾದ ಮೇಲೆ ಯಾರೂ ಮೂಸುವವರೇ ಇಲ್ಲದೇ ಬೆಂಗಳೂರಿನಲ್ಲೇ ಬೀಡು ಬಿಟ್ಟು ತಾನು ಕೂಡಿಟ್ಟ ಕಾಸನ್ನು ರಿಯಲ್ ಎಸ್ಟೇಟ್ ದಂಧೆಯಲ್ಲಿ ತೊಡಗಿಸಿ, ರಾಜಕೀಯ ಉಸಾಬರಿಯನ್ನೇ ಮರೆತು, ಸುಖದ ಸುಪ್ಪತ್ತಿಗೆಯಲ್ಲೇ ಓಲಾಡುತ್ತಿದ್ದ ಧನಂಜಯ್‌ರ ಕಾಂಗ್ರೆಸ್ ಸೇರುವ ತವಕ ಇವತ್ತು ನಿನ್ನೆಯದಲ್ಲ, ಆದರೆ ಕಾಂಗ್ರೆಸ್‌ನಲ್ಲೂ ಸೇರಿಸಿಕೊಳ್ಳುವವರದ್ದೇ ಕೊರತೆ. ಇದೀಗ ಮತ್ತೆ ಧನಂಜಯ್ ಕಾಂಗ್ರೆಸ್ ಸೇರುತ್ತಾರೆಂಬ ಸುದ್ದಿ ಹಬ್ಬುತ್ತಲೇ ಸಂಭ್ರಮಪಡುತ್ತಿರುವ ಸರದಿ ಬಿಜೆಪಿಯವರದ್ದು. ಬಿಜೆಪಿಯ ಪಾಲಿಗೆ ಕಪ್ಪುಚುಕ್ಕೆಯಂತಿರುವ ಧನಂಜಯ್ ಕಾಂಗ್ರೆಸ್ ಸೇರ್ಪಡೆ ಬಿಜೆಪಿಗೇ ಲಾಭ. ಆದರೇನಂತೆ ತಾವಿರುವ ತನಕ ಇನ್ನೋರ್ವ ತಲೆ ಎತ್ತಬಾರದೆಂಬ ಕೀಳರಿಮೆಯಿಂದ ನರಳುತ್ತಿರುವ ಜಿಲ್ಲಾ ಕಾಂಗ್ರೆಸ್‌ನ ಹಿರಿಪತಿಗಳಾದ ಪೂಜಾರಿ-ಮೊಯ್ಲಿ ಮತ್ತವರ ಬಳಗದ ವಿರೋಧ ಧನಂಜಯ್‌ಕುಮಾರ್‌ರನ್ನು ಕಾಂಗ್ರೆಸ್ ಪಕ್ಷದ ದಿಡ್ಡಿ ಬಾಗಿಲಲ್ಲೇ ತಡೆದು ನಿಲ್ಲಿಸಿದೆ. ಮುಂದೇನಾಗುತ್ತದೋ ಕಾದು ನೋಡಬೇಕಾಗಿದೆ.



ಐ.ಎಂ. ಜಯರಾಂ ಶೆಟ್ಟಿ

ಗೊಬ್ಬರದ ಶೆಟ್ಟಿಯ ಕೊನೆಯ ಆಟ!

ಎಲ್ಲಾ ಬಿಟ್ಟ ಮಗ ಭಂಗಿ ನೆಟ್ಟ ಎಂಬಂತೆ ಕಾಂಗ್ರೆಸ್ ಪಾಳಯ ಸೇರಲು ಹಾತೊರೆಯುವ ಇನ್ನೊಂದು ಪ್ರಮುಖ ಮುಖ ಗೊಬ್ಬರದ ಶೆಟ್ಟಿ ಖ್ಯಾತಿಯ ಐ.ಎಂ. ಜಯರಾಂ ಶೆಟ್ಟಿಯದ್ದು. ಈತ ಕೂಡಾ ಬಿಜೆಪಿಯಿಂದ ಒಮ್ಮೆ ಎಂಎಲ್‌ಎ ಮತ್ತೊಮ್ಮೆ ಎಂಪಿಯಾಗಿ ಆನಂತರ ಸೊರಕೆ ವಿರುದ್ಧ ಸೋತು ಬಿಜೆಪಿಗೆ ಬೇಡವಾದ ನಿರಾಶ್ರಿತ ರಾಜಕಾರಣಿ. ಧನಂಜಯ್‌ರಂತೆಯೇ ಇಸ್ಪೀಟು, ಮೋಜು-ಮೇಜವಾನಿಗಳ ದಾಸ. ತನ್ನ ಕ್ರಿಮಿನಾಶಕ-ಗೊಬ್ಬರಗಳ ಉತ್ಪಾದನೆಗಳಿಗೆ ಮಾರುಕಟ್ಟೆ ಹಿಡಿಯಲಷ್ಟೇ ಸದರಿ ಶೆಟ್ಟಿಗೆ ರಾಜಕೀಯ ಬೇಕಿತ್ತು. ಆದರೆ ಶೆಟ್ಟಿಯ ವ್ಯಾಪಾರಿ ಬುದ್ಧಿ ಗೊತ್ತಿದ್ದ ಕೊಡ್ಗಿ, ವಿ.ಎಸ್. ಆಚಾರ್ಯ ಗ್ಯಾಂಗ್ ಪಾರ್ಟಿ ಫಂಡ್, ಪಕ್ಷದ ಉದ್ಧಾರವೆಂದು ಚೆನ್ನಾಗಿಯೇ ಬೋಳಿಸಿಬಿಟ್ಟಿತ್ತು. ಹೀಗೆ ಬಿಜೆಪಿಗೆಂದು ನೀರಿನಂತೆ ಖರ್ಚು ಮಾಡಿ ಕೆಚ್ಚಲು ಬತ್ತಿದ ದನದಂತಾದ ಐ.ಎಂ.ಜೆ. ಖಾಲಿ ಕಿಸೆಯನ್ನು ತಡವುತ್ತಾ ಆಮೇಲೆ ಪಾದ ಬೆಳೆಸಿದ್ದು ಸಮತಾ ಪಕ್ಷದತ್ತ. ಸಮತಾ ಪಕ್ಷ ರಾಜ್ಯಾಧ್ಯಕ್ಷರಾಗಿದ್ದ್ಕೆ ದೂರದ ಬಿಹಾರದಲ್ಲಿ ತನ್ನ ಗೊಬ್ಬರಕ್ಕೆ ಮಾರ್ಕೆಟ್ ಹಿಡಿದ ಶೆಟ್ಟಿ ಆನಂತರ ಕೋತಿಯಂತೆ ಸಮಾಜವಾದಿ ಪಕ್ಷಕ್ಕೆ ನೆಗೆದರು. ಮುಲಾಯಂಸಿಂಗರ ಉತ್ತರ ಪ್ರದೇಶದಲ್ಲೂ ಆ ಮೂಲಕ ಭರ್ಜರಿ ಗೊಬ್ಬರ ವ್ಯಾಪಾರವಾಯಿತು. ಇನ್ನು ಐಎಂಜೆಗೆ ಹಾರಲು ಬಾಕಿ ಇರುವುದು ಕಾಂಗ್ರೆಸ್ ಪಕ್ಷವೊಂದೇ. ಎಂ.ಎಲ್.ಎ. ಆಗುವ ಕೊನೆಯ ಆಸೆ ಈಡೇರಿಸಿಕೊಳ್ಳಲು ಆಸ್ಕರ್ ಹಿಂದೆ ದುಂಬಾಲು ಬಿದ್ದಿರುವ ಐಎಂಜೆ ಕಾಂಗ್ರೆಸ್ ಪಕ್ಷ ಸೇರುವುದೊಂದೇ ಬಾಕಿ ಉಳಿದಿದೆ.



ಮನೋರಮಾ ಮಧ್ವರಾಜ್

[illegible]

ದೇವರಾಜು ಅರಸು ಕೃಪೆಯಿಂದ ಕಾಂಗ್ರೆಸ್ ಪಕ್ಷದಲ್ಲಿ ಮಿಂಚಿದ ಮತ್ಸಕನ್ಯೆ ಮನೋರಮಾ ಮಧ್ವರಾಜ್ ಮಂತ್ರಿಣಿಯಾಗಿ ಅಧಿಕಾರ ಸುಖ ಉಂಡಷ್ಟು ಕರಾವಳಿಯಲ್ಲಿ ಇನ್ನಾರೂ ಇರಲಾರರು. ಕಳೆದ ಬಾರಿಯ ಚುನಾವಣೆಯಲ್ಲಿ ಐ.ಎಂ.ಜೆ.ಯನ್ನು ಕೈಬಿಟ್ಟ ಉಡುಪಿಯ ಸಂಘಿಗಳ ಮೊಗವೀರರನ್ನು ಗುರಿಯಾಗಿಟ್ಟುಕೊಂಡು ಈ ಮನೋರಮೆಯನ್ನು ಕರೆದು ಕಣಕ್ಕಿಳಿಸಿದರು. ಎಂ.ಪಿ.ಯಾದದ್ದೇ ಸಂಘಿಗಳ ಕೈಗೊಂಬೆಯಾಗದೇ ಸ್ವಂತಿಕೆ ತೋರಲು ಹೋದ ಮನೋರಮಾ ಬಿಜೆಪಿಗೆ ನುಂಗಲಾರದ ಬಿಸಿತುಪ್ಪವಾಗಿದ್ದಾರೆ. 'ನಾಗಾರ್ಜುನ' ವಿಚಾರದಲ್ಲಿ ತನ್ನನ್ನು ಪಕ್ಷಕ್ಕೆ ಕರೆಸಿದ ವಿ.ಎಸ್. ಆಚಾರ್ಯರ ವಿರುದ್ಧವೇ ಕಿಡಿಕಾರಿದ್ದು, ಮುಖ್ಯಮಂತ್ರಿಗಳನ್ನೇ ತರಾಟೆಗೆ ತೆಗೆದುಕೊಂಡಿದ್ದು, ಬಿಜೆಪಿಗೆ ಬಿಸಿತುಪ್ಪವಾಗಿರುವುದರ ಲಕ್ಷಣ. ಇದೀಗ ಹದ್ದುಮೀರಿ ವರ್ತಿಸುತ್ತಿರುವ ಮನೋರಮಾ ಮಧ್ವರಾಜ್‌ರನ್ನು ಮನೆಗೆ ಕಳುಹಿಸಲು ಬಿಜೆಪಿ ಕಾಯುತ್ತಿದ್ದು, ಕಾರ್ಕಳದ ಸುನೀಲ್‌ಕುಮಾರ್‌ನನ್ನು ಭಾವಿ ಉಡುಪಿ ಎಂಪಿ ಕ್ಯಾಂಡಿಡೇಟ್ ಎಂದು ಪ್ರೊಜೆಕ್ಟ್ ಮಾಡುತ್ತಿದ್ದಾರೆ. ಇದನ್ನರಿತೇ ಮನೋರಮಾ ಕಾಂಗ್ರೆಸ್‌ಗೆ ಮರಳಲು ತಾಲೀಮು ನಡೆಸುತ್ತಿದ್ದಾರೆ.


–ಪ್ರಕಾಶ್ ಪಿಂಟೋ

ಇನ್ಫೋಸಿಸ್ ಬಂಗಲೆಗಳ ಅಡಿಪಾಯದಲ್ಲಿ ಗೆಜ್ಜಲಗಟ್ಟೆ ಜೀವಗಳು...

ರಾಯಚೂರು ಜಿಲ್ಲೆಯ ಲಿಂಗಸ್ಗೂರು ತಾಲ್ಲೂಕಿನ ಗೆಜ್ಜಲಗಟ್ಟೆಯ ಐವರು ಕೃಷಿ ಕಾರ್ಮಿಕರು ಬೆಂಗಳೂರಿನ ಇನ್‌ಫೋಸಿಸ್ ಕಂಪನಿಯಲ್ಲಿ ಗಾಜಿನರಮನೆ ಕಟ್ಟಲು ಹೋಗಿ ಜಾಗತೀಕರಣ ಎಂಬ ಮಾಯಾವಿಗೆ ಬಲಿಯಾಗಿ ಈಗ ಒಂದು ವಾರ ಕಳೆದಿದೆ. ಗಾಯಗೊಂಡ ಇನ್ನೂ ಹಲವಾರು ಜೀವನ್ಮರಣದ ಹೋರಾಟದಲ್ಲಿದ್ದಾರೆ. ಶೋಭಾ ಡೆವಲಪರ್ಸ್ ಎಂಬ ಕಟ್ಟಡದ ಕಂಪನಿ ಪರಿಹಾರ ಹಣ ನೀಡುವುದಾಗಿ ಘೋಷಿಸಿ ಕೈ ತೊಳೆದುಕೊಂಡಿದೆ. ಸರ್ಕಾರದ ಸರ್ವ ಸವಲತ್ತುಗಳನ್ನು ಬಾಚಿಕೊಳ್ಳುವ ಪ್ರಭುತ್ವದ ಆರಾಧಕ ಇನ್ಫೋಸಿಸ್ ತನಗೂ ಇದಕ್ಕೂ ಸಂಬಂಧವೇ ಇಲ್ಲದಂತೆ ಬೇಜವಾಬ್ದಾರಿಯಿಂದ ಮಾತಾಡುತ್ತಿದೆ.

ಸರಿಯಾದ ಸುರಕ್ಷತಾ ಕ್ರಮಗಳಿಲ್ಲದೇ, ಸರಳ ಇಂಜಿನಿಯರಿಂಗ್ ನಿಯಮಗಳನ್ನು ಪಾಲಿಸದೇ ಐವರ ಸಾವು ಸಂಭವಿಸುತ್ತದೆಂದರೆ ಅದು ಕ್ರಿಮಿನಲ್ ಅಪರಾಧ. ಅಲ್ಲಿಗೆ ಶೋಭಾ ಡೆವಲಪರ್ಸ್, ಇನ್ಫೋಸಿಸ್ ಎರಡೂ ಕೊಲೆಗಾರರ ಸ್ಥಾನದಲ್ಲಿ ನಿಲ್ಲಬೇಕು. ಆದರೇನಾಗುತ್ತಿದೆಯಿಲ್ಲಿ?


ಹೃದಯ ಸಮಾಜವಾದಿ, ಮೆದುಳು ಬಂಡವಾಳಶಾಹಿ ಎಂದೆಲ್ಲ ಮಾತಾಡುವ ನವಸಾಹುಕಾರಶಾಹಿ ಇನ್ಫೋಸಿಸ್ ನಾರಾಯಣಮೂರ್ತಿ 'ಸರ್ಕಾರ ಫ್ಲೈಓವರ್ ನಿರ್ಮಿಸಲಿಲ್ಲ, ಭೂಮಿ ನೀಡಲಿಲ್ಲ...' ಎಂದೆಲ್ಲ ಮಾಧ್ಯಮಗಳ ಮೂಲಕ ಬಿಂಬಿಸಿ, ಸರ್ಕಾರದಿಂದ ಭೂಮಿ, ತೆರಿಗೆ ರಿಯಾಯ್ತಿ, ಉಚಿತ ವಿದ್ಯುತ್‌ಗಳನ್ನೆಲ್ಲ ಪಡೆಯುತ್ತಿರುವುದರ ಪರವೇ ಸರ್ಕಾರಗಳಿರುವಾಗ ಗೆಜ್ಜಲಗಟ್ಟೆಯ ಕೂಲಿಗಳ ಬದುಕಿನ ಕಾರ್ಮಿಕರಿಗೆ ನ್ಯಾಯ ಸಿಗುವುದಾದರೂ ಹೇಗೆ?



ಮಗನನ್ನು ಕಳೆದುಕೊಂಡು ದುಃಖಿತಳಾದ ತಾಯಿ

ಈಗ ಮುಚ್ಚೇ ಹೋಗಬಹುದಾದ ಈ ಕ್ರಿಮಿನಲ್ ಪ್ರಕರಣವನ್ನು ಬೆಳಕಿಗೆ ತರಲು ಹಲವು ಸಂಸ್ಥೆಗಳು ಪ್ರಯತ್ನಿಸುತ್ತಿವೆಯಾದರೂ, ಸರ್ಕಾರ-ಇನ್ಫೋಸಿಸ್‌ಗಳ ಅಸಹಕಾರದಿಂದ ಜೀವ ತೆತ್ತವರಿಗೆ ನ್ಯಾಯ ಸಿಗುವುದು ಕಷ್ಟವೇ.

ಈಗ ದುರಂತ ಸಂಭವಿಸಿರುವುದು ಕಳಪೆ ಇಂಜಿನಿಯರಿಂಗ್ ಕ್ರಮಗಳಿಂದ. ಗಾಜುಗಳನ್ನು ಕೂಡಿಸಲು ನಿರ್ಮಿಸಲಾದ ಸ್ಕ್ಯಾಫೋಲ್ಡ್ ರಚನೆಯೇ ಭದ್ರವಾಗಿರದಿದ್ದುದೇ ದುರಂತದ ಮೂಲಕಾರಣ. "ಭಾರತದ ಗ್ರಾಮೀಣ ಪ್ರದೇಶಗಳು ಅನುತ್ಪಾದಕ ವಲಯಗಳಾಗಿವೆ; ಇತ್ತೀಚಿನ ದಶಕಗಳಲ್ಲಿ ಚೀನಾ ಅಪಾರ ಪ್ರಮಾಣದಲ್ಲಿ ಗ್ರಾಮೀಣರು ನಗರಗಳಿಗೆ ವಲಸೆ ಬರುವಂತೆ ಮಾಡಿದಂತೆ ಭಾರತವೂ ಮಾಡಬೇಕು" ಎಂದು ಸಾರ್ವಜನಿಕ ವೇದಿಕೆಗಳಿಂದ ಬಿತ್ತರಿಸುತ್ತಲೇ ಬಂದಿರುವ ನಾರಾಯಣಮೂರ್ತಿ ಬಯಸುವುದಾದರೂ ಏನು? ಕೃಷಿ ಕಾರ್ಮಿಕರೆಲ್ಲ ಬೆಂಗಳೂರಿಗೆ ಬಂದು ಬಹುರಾಷ್ಟ್ರೀಯ ಕಂಪನಿಗಳ ಗಾಜಿನ (ಗಾಳಿ!) ಗೋಪುರಗಳನ್ನು ಕಟ್ಟುತ್ತ, ಅತಂತ್ರ ಜೀವನ ಕಳೆಯುತ್ತ ಗೆಜ್ಜಲಗಟ್ಟೆಯ ಕೃಷಿ ಕಾರ್ಮಿಕರಂತೆ ಜೀವ ತೆತ್ತಬೇಕೆ? ಇವತ್ತು ಗುಲ್ಬರ್ಗಾ, ರಾಯಚೂರುಗಳ ಲಕ್ಷಾಂತರ ಕೃಷಿ ಕಾರ್ಮಿಕರು ಬೆಂಗಳೂರಿಗೆ ಬಂದು, ತಮಗೆ ಪರಿಣಿತಿಯಿಲ್ಲದ ಕಟ್ಟಡ ನಿರ್ಮಾಣ ಕಾರ್ಯಗಳಲ್ಲಿ ತೊಡಗಿಸಿಕೊಂಡು ನಿಕೃಷ್ಟ ಬದುಕು ಸಾಗಿಸುತ್ತಿರುವುದಕ್ಕೆ ಯಾರು ಕಾರಣ? ಐಟಿ ಕಂಪನಿಗಳಿಗೆ ಸಕಲ ಸಬ್ಸಿಡಿಗಳನ್ನು ನೀಡುತ್ತಾ ವಿಶ್ವಸಂಸ್ಥೆ ಐಎಮ್‌ಎಫ್‌ಗಳ ಬಯಕೆಯಂತೆ ರೈತಾಪಿ ವರ್ಗಕ್ಕೆ ನೀಡುವ ಸಕಲ ಸಬ್ಸಿಡಿಗಳನ್ನು ಕಡಿತ ಮಾಡುತ್ತಾ, ರೈತರನ್ನು ಪಾಪಕೂಪದಲ್ಲಿ ತಳ್ಳಿ ಕೃತಕ ಬರ ಸೃಷ್ಟಿಗೆ ಕಾರಣವಾಗಿರುವುದು ಸರಕಾರಗಳಲ್ಲವೆ? ಹಾಗೆಯೇ ಈ ಸರ್ಕಾರಗಳನ್ನು ದಾರಿತಪ್ಪಿಸುತ್ತಿರುವ ಇನ್ಫೋಸಿಸ್‌ನಂತಹ ಕಂಪನಿಗಳಲ್ಲವೆ?




'ಖಾಸಗಿ ಸಂಸ್ಥೆಗಳಲ್ಲಿ ಮೀಸಲಾತಿ ನೀತಿ ಪಾಲಿಸಲಾಗದು' ಎನ್ನುವ ಮೂಲಕ ಸಂವಿಧಾನವನ್ನೇ ಅಣಕಿಸಿದ ಇನ್ಫೋಸಿಸ್ ದೊರೆಗಳಿಗೆ ಕೋರ್ಟು ವಿಚಾರಣೆ, ತನಿಖೆಗಳ ಬಗ್ಗೆ ವಿಶ್ವಾಸ ಇರದಿರುವುದು ಸಹಜವೇ. ಅದಕ್ಕೆ ಅಲ್ಲವೆ ಫಣೀಶ್‌ಮೂರ್ತಿಯ ಸೆಕ್ಸ್ ಸ್ಕ್ಯಾಂಡಲ್‌ನಕ್ಕೆ ಅಪಾದಿತ ಇನ್ಫೋಸಿಸ್ ಔಟ್ ಆಫ್ ಕೋರ್ಟ್ ಸೆಟ್ಲ್‌ಮೆಂಟ್‌ನ ಮೊರೆ ಹೋಗಿದ್ದು? ಅದಕ್ಕೆ ಅಲ್ಲವೆ ಎಚ್.ಪಿ. ಕಾಲ್‌ಸೆಂಟರ್‌ನ ಉದ್ಯೋಗಿ ಪ್ರತಿಭಾ ತನ್ನ ಕಂಪನಿ ಒದಗಿಸಿದ ವಾಹನದಲ್ಲೇ ಕೆಲಸಕ್ಕೆ ಹೋಗುವಾಗಲೇ ಕೊಲೆಯಾದರೂ, ಅದನ್ನೊಂದು ನಿತ್ಯದ ಸಹಜ ಕ್ರೈಮ್ ಎಂಬಂತೆ ಈ ಕಾರ್ಪೊರೇಟ್ ವಲಯ ಬಿಂಬಿಸಿದ್ದು? ಒಟ್ಟಿನಲ್ಲಿ ಕೋರ್ಟು, ತನಿಖೆ ಇವ್ಯಾವುಗಳ ವ್ಯಾಪ್ತಿಗೂ ತಾವು ಒಳಪಡುವುದಿಲ್ಲ ಎಂಬಂತಹ ವಾತಾವರಣ ಸೃಷ್ಟಿಸಿಗೊಂಡಿರುವ ಇನ್ಫೋಸಿಸ್‌ಗಳ ಕ್ರೈಮ್ ಗೊತ್ತಾಗಬೇಕೆಂದರೆ ತುರ್ತಾಗಿ ಅಪಘಾತ ಸ್ಥಳದಲ್ಲಿ ಮುಕ್ತ ವಿಚಾರಣೆ ನಡೆಯಬೇಕಿದೆ. ಸಾಕ್ಷ್ಯಗಳು ಸವೆದುಹೋಗುವ ಮುನ್ನ ವಿಚಾರಣೆ ನಡೆಸಿ ಸಾಕ್ಷ್ಯಗಳನ್ನು ಕಾಪಾಡಿಕೊಂಡು, ದುರಂತದ ವೇಳೆ ಹಾಜರಿದ್ದ ಸಾಕ್ಷಿಗಳಿಂದ ತುರ್ತಾಗಿ ಹೇಳಿಕೆಗಳನ್ನು ಪಡೆಯಬೇಕಿದೆ. ಇಲ್ಲದಿದ್ದರೆ ಹಲವಾರು ಗೆಜ್ಜಲುಗಟ್ಟೆಗಳ ಲಕ್ಷಾಂತರ ಕೃಷಿ ಕಾರ್ಮಿಕರಿಗೆ ಎಂದಿನಂತೆ ಶೋಷಣೆ, ಮೋಸ ತಪ್ಪಿದ್ದಲ್ಲ.

ಆದರೆ ಈಗಾಗಲೇ ಅಪಘಾತ ಸ್ಥಳವನ್ನು [illegible] ಜೋನ್ ಎಂದು ಕರೆದುಕೊಂಡಿರುವ ಇನ್ಫೋಸಿಸ್ ಅಲ್ಲಿಗೆ ಪ್ರವೇಶವನ್ನು ನಿರಾಕರಿ[illegible]ದೆ! ನವಪುರೋಹಿತಶಾಹಿ, ನವಸಾಹುಕಾರಶಾಹಿ ಇನ್ಫೋಸಿಸ್‌ಗಳ ಭವ್ಯ [illegible] ಬಂಗಲೆಗ[illegible] ಅಡಿಪಾಯವಾಗಿ ಕರಗಿಹೋಗುವ ಗೆಜ್ಜಲಗಟ್ಟೆ[illegible] ಜೀವಗಳಿಗೆ ಮುಕ್ತಿ ಎಂದು? [illegible] ದಾರಿ ಯಾವುದು? ನಮ್ಮ ಪ್ರಗತಿಪರ ಪ್ರ[illegible] [illegible] ಅಲ್ಲದೇ ಪತಿಯೊಬ್ಬರು [illegible]

–[illegible]

ವಿಧವೆ-ವಿರಹಿಯಾದ ಅನಾಥೆ ಸೀತೆ



ಸೀತೆಯ ಕತೆ ರಾಮಾಯಣದಲ್ಲಿ 'ಅನಾಥೆ'ಯ ಕತೆ; ಹುಟ್ಟಿನಿಂದಲೇ ಅನಾಥೆಯಾದ ಸೀತೆ ಮದುವೆಯಾದವಳೇ ಕಾಡಿನಲ್ಲಿ 'ವಿರಹಿ'; ಆನಂತರ ರಾವಣನಿಂದ ಅಪಹೃತಳಾಗಿ 'ವಿಧವೆ'; ಈಗ ಲಕ್ಷ್ಮಣನಿಂದ ಪರಿತ್ಯಕ್ತಳಾಗಿ 'ಅನಾಥೆ'.

ನಮ್ಮಲ್ಲಿ ಈ ಆದಿಕಾವ್ಯವನ್ನು ವಾಚಿಸುವ ಸಹೃದಯರಲ್ಲಿ, ಇಲ್ಲಿಯವರೆಗೂ ಕಂಡುಬರುತ್ತಿರುವ ಹೃದಯ ದಾರಿದ್ರ್ಯ ಎಷ್ಟರಮಟ್ಟಿನದೆಂದರೆ ಸೀತಾಲಕ್ಷ್ಮಣರ ಹೃದಯ ವಿದ್ರಾವಕವಾದ ಮಾನವೀಯತೆ ಕಣ್ಣು ಕಟ್ಟಿದರೂ ಅದನ್ನು ತಳ್ಳಿ ಹಾಕಿ (ಹೌದು, ಸ್ವಯಂಪ್ರೇರಣೆಯಿಂದಲೇ, ಹಟದಿಂದಲೇ ಅದನ್ನು ಬದಿಗೊತ್ತಿ) ಸೀತಾಲಕ್ಷ್ಮಣರನ್ನು ದೈವಿಕತೆಯ ಹೊನ್ನಶೂಲಕ್ಕೆ ಏರಿಸಿದ್ದೇವೆ. ಏಕೆಂದರೆ, ಉದಾಹರಣೆಗೆ ತೆಗೆದುಕೊಳ್ಳುವುದಾದರೆ, ರಾಮಾಯಣವನ್ನು ಇತ್ತೀಚೆಗೆ ಅನುವಾದಿಸಿದ ವಿದ್ವಾನ್ ಎನ್. ರಂಗನಾಥಶರ್ಮಾ ಇವರೂ, ಇವರ ಗ್ರಂಥಕ್ಕೆ ಮುನ್ನುಡಿಕಾರರಾದ ಡಾ||ಡಿ.ವಿ. ಗುಂಡಪ್ಪನವರೂ, ಸೀತಾಲಕ್ಷ್ಮಣರ ದೈವಿಕತೆಯನ್ನೇ ಅನುಮೋದಿಸಿ ಬರೆಯುತ್ತಾರಲ್ಲದೆ ಇದರಲ್ಲಿನ ಮಾನವೀಯತೆಯ ಕಡೆಗೆ ದೃಷ್ಟಿ ಬೀರುವುದಿಲ್ಲ.

ಅನುವಾದಕರಾದ ಶರ್ಮಾರವರ ರಾಮಾಯಣದ ಭಕ್ತಿ ಎಷ್ಟರಮಟ್ಟಿನದೆಂದರೆ ಅವರು ಅನುವಾದದ ನಿಷ್ಠೆಯನ್ನೂ, ಪ್ರಾಮಾಣಿಕತೆಯನ್ನೂ ಮೀರಿ ಮೂಲ ಕಾವ್ಯದ ಶಬ್ದಗಳ ಜೊತೆಯಲ್ಲಿ ಮತ್ತೂ ಅವಕ್ಕೆ ಬದಲಾಗಿ ತಮ್ಮ ಭಕ್ತಿ ಜನ್ಯವಾದ ಪದಗಳನ್ನು ಸೇರಿಸಿದ್ದಾರೆ. 'ಸೀತೆ ಸುವರ್ಣಮಯವಾದ ಜಿಂಕೆಯ ಚರ್ಮದ ಮೇಲೆ ಕುಳಿತುಕೊಳ್ಳುವ ಇಚ್ಛೆ' ಎನ್ನುವಲ್ಲಿ ಶರ್ಮಾರವರು "ನಿನ್ನೊಡನೆ" (ರಾಮನೊಡನೆ) ಎಂಬ ಪದವನ್ನು ಬ್ರಾಕೆಟ್ಟಿನಲ್ಲಿ ಸೇರಿಸಿ, ಸೀತೆಯನ್ನು ಕಾಯ್ದಿದ್ದಾರೆ. ಮುಂದಿನ ಸಾಲಿನಲ್ಲಿ 'ಕಾಮವೃತ್ತಮಿದಂ ರೌದ್ರಂ ಸ್ತ್ರೀಣಾಮ ಸದೃಶಂಮತಮ್' ಎಂಬಲ್ಲಿ 'ಕಾಮ' ಶಬ್ದಕ್ಕೆ 'ಸ್ವೇಚ್ಛೆ' ಎಂದು ಅನುವಾದಿಸಿದ್ದಾರೆ. ಮುಂದೆ ಸೀತೆ ತನಗೆ 'ಋತುಕಾಲ ಅತಿಕ್ರಮಿಸಿದೆ' ಎನ್ನುವಲ್ಲಿ ಪುಟದಡಿಯಲ್ಲಿ 'ಗರ್ಭಿಣಿಯಾಗಿದ್ದೇನೆ' ಎಂದು ಉಲ್ಲೇಖಿಸಿದ್ದಾರೆ. (ಡಿ.ವಿ. ಗುಂಡಪ್ಪನವರಂತೂ ತಮ್ಮ ಮುನ್ನುಡಿಗಳಲ್ಲಿ ರಾಮನು ಸೀತೆಯನ್ನು ಕಾಡಿಗೆ ಹಟ್ಟಿದ್ದನ್ನೂ, ಶಂಭೂಕ ವಧೆಯನ್ನೂ ರಾಮನಿಗಿಂತಲೂ ಹೆಚ್ಚು ಸಮರ್ಥವಾಗಿ **more royalist than the king** ಎನ್ನುವಂತೆ ವಾದಿಸಿ, ಹರಿಕಥೆ ಮಾಡಿದ್ದಾರೆ.)

ರಾಮಾಯಣದ ಓದುಗನಿಗೆ ರಾಮಾಯಣದ ಅಕ್ಷರ ಪ್ರಪಂಚವೇ ಸತ್ಯ ಪ್ರಪಂಚ: ಅದರಲ್ಲಿನ ಶಬ್ದಗಳೇ ಆ ಕಾವ್ಯದ ಪ್ರಮಾಣ, ಪರಮಾರ್ಥ ಕಾವ್ಯದಲ್ಲಿನ ಶಬ್ದವೇ ಅರ್ಥ; ಕಾವ್ಯ ಪದಕ್ಕೆ ಪ್ರತಿಪದಾರ್ಥವಿಲ್ಲ; ಪ್ರತಿ ಪದಾರ್ಥ, ಟೀಕೆ, ತಾತ್ಪರ್ಯ-ಇವು ಕಾವ್ಯವಾಚನವಲ್ಲ; ಕಾವ್ಯಪಾರಾಯಣ, ಪೂಜೆ, ಪುರಸ್ಕಾರ-ಹರಿಕಥೆ.

ಕುರ್ತಕೋಟಿಯವರು 'ಅರ್ಥ'ದ ಬಗ್ಗೆ ಎಷ್ಟು ಗೀಳು ಹಚ್ಚಿಕೊಂಡಿದ್ದಾರೆಂದರೆ 'ಮಲ್ಲಿಗೆ'ಯ ಸೆಪ್ಟಂಬರ್ (1981) ಸಂಚಿಕೆಯಲ್ಲೂ, ಅವರು ಶಬ್ದ ಮತ್ತು ಅರ್ಥದ ಬಗ್ಗೆ ಸುದೀರ್ಘವಾಗಿ ವ್ಯಾಖ್ಯಾನ ಮಾಡಿದ್ದಾರೆ. (ಆದ್ದರಿಂದಲೇ ನಾವು ಅರ್ಥದ ಬಗ್ಗೆ ಮೇಲಿನ ಎರಡು ವಾಕ್ಯಗಳನ್ನು ಬರೆಯಬೇಕಾಯಿತು.)

ಕೊನೆಯದಾಗಿ, ಕುರ್ತಕೋಟಿಯವರು ಮೌನದ ಬಗ್ಗೆ, ಅದರ ಮೌಲ್ಯದ ಬಗ್ಗೆ ಮಾತನಾಡಿದ್ದಾರೆ. 'ವಾಲ್ಮೀಕಿ ಮನಸ್ಸು ಮಾಡಿದ್ದರೆ ತಾನೇ ನೀತಿಯ ಮೇಲೆ ವ್ಯಾಖ್ಯಾನ ಮಾಡಬಹುದಾಗಿತ್ತು' ಎನ್ನುತ್ತಾರೆ. ಇವರ ಒಂದೂವರೆ ಪುಟದ ಲೇಖನದ ಕೊನೆಯ ಕಾಲಮ್ಮಿನಲ್ಲಿ 'ನೀತಿ' ಎಂಬ ಪದ ಆರು ಬಾರಿ ಉಪಯೋಗಿಸಲ್ಪಟ್ಟಿದೆ. ನೀತಿಯ ಬಗ್ಗೆ ವ್ಯಾಖ್ಯೆ ಮಾಡದಿರುವುದು, ಮೌನವಾಗಿರುವುದು ಕಾವ್ಯದಲ್ಲಿನ ಮಹತ್ವವೆನ್ನುವಂತೆ ಕುರ್ತಕೋಟಿಯವರ ಲೇಖನ ಸೂಚಿಸುತ್ತದೆ. ಆದರೆ ಕೊನೆಯಲ್ಲಿ ಈ ಮಾತಿದೆ: "ಅತ್ಯಂತ ದಾರುಣವಾದ ಮತ್ತು ವಿಕಟವಾದ ಮಾನವೀಯ ಸನ್ನಿವೇಶದಲ್ಲಿ ಮೌನಕ್ಕಿಂತ ಹೆಚ್ಚು ಸಮರ್ಥವಾದ ಅಭಿವ್ಯಕ್ತಿ ಬೇರೆ ಇಲ್ಲ." ಕುರ್ತಕೋಟಿಯವರು ಬಹಳ ಗಹನವಾದ ಭಾವಸಾಂದ್ರತೆಯ ಪದಗಳನ್ನು ಉಪಯೋಗಿಸಿದ್ದಾರೆ- 'ಅತ್ಯಂತ ದಾರುಣ', 'ವಿಕಟವಾದ ಮಾನವೀಯ ಸನ್ನಿವೇಶ'. ಈ ದಾರುಣ ಮಾನವೀಯ ಸನ್ನಿವೇಶದ ಬಗ್ಗೆ ಕವಿ, ಕುರ್ತಕೋಟಿಯವರು ಹೇಳುವಂತೆ, ಮೌನ ತಳೆದಿಲ್ಲ; ಹೃದಯ ವಿದ್ರಾವಕವಾದ ಅಭಿವ್ಯಕ್ತಿ ಕೊಟ್ಟಿದ್ದಾನೆ. ಸೀತೆ ಹೇಳಿದ ಮಾತಿಗೆ ಲಕ್ಷ್ಮಣನ ಮನಸ್ಸು ಕುಸಿಯುತ್ತದೆ; ('ದೀನ ಚೇತನ'), ಅವನು ಭೂಮಿಗಿಳಿಯುತ್ತಾನೆ, (ಶಿರಸಾವಂದ್ಯ ಧರಣೀಂ), ಅವನಿಗೆ ಮಾತಾಡುವ ಶಕ್ತಿ ಉಳಿದಿಲ್ಲ; (ವ್ಯಾಹರ್ತುಂನ ಶಶಾಕಹ), ಗಟ್ಟಿಯಾಗಿ ಗಳಗಳನೆ ಅಳುತ್ತಾನೆ. ಸೀತೆಗೆ ಪ್ರದಕ್ಷಿಣೆ ಮಾಡುತ್ತಾನೆ; ಸ್ವಲ್ಪ ಕಾಲ ಧ್ಯಾನಿಸುತ್ತಾನೆ; ಅನಂತರ ಕುರ್ತಕೋಟಿ ಉದ್ಧರಿಸಿದ ಮಾತನ್ನು ಆಡುತ್ತಾನೆ. ಇಷ್ಟೆಲ್ಲಾ ಪ್ರಬಲ ಕ್ರಿಯೆಗಳು ನಡೆದಾಗ್ಯೂ ಕುರ್ತಕೋಟಿಯವರ ದೃಷ್ಟಿಯಲ್ಲಿ ಕವಿ ಮೌನ ತಳೆದಿದ್ದಾನೆ!

ಲಕ್ಷ್ಮಣನ ಮಾತುಗಳನ್ನೇ ತೆಗೆದುಕೊಳ್ಳೋಣ. "ರಾಮರಹಿತಳಾದ ನಿನ್ನನ್ನು ಹೇಗೆ ನೋಡಲಿ" ಎಂದು ಲಕ್ಷ್ಮಣ ಕೇಳುವಲ್ಲಿ 'ರಾಮರಹಿತ' ಶಬ್ದದ ಔಚಿತ್ಯವೆಷ್ಟು! ಸೀತೆ ಸೂಚಿಸುತ್ತಿರುವ ಘೋರವಾದ ನೋಟ ರಾಮನಿಲ್ಲದುದರಿಂದ ಇನ್ನೂ ಭಯಾನಕ. ವಾತ್ಸಾಯನನು ಹೇಳುವಂತೆ ಗಂಡನನ್ನಗಲಿದ ಹೆಂಗಸು ಒಲಿಯಲು ಸುಲಭಳು. ಕಾಮದ ದೌರ್ಬಲ್ಯಕ್ಕೆ ಹೆಚ್ಚು ಪಕ್ಕಾದವಳು. ಸೀತೆ ಸೂಚಿಸಿದ ದೇಹಭಾಗವನ್ನು ರಾಮನಿಲ್ಲದ ಸಂದರ್ಭದಲ್ಲಿ ನೋಡುವುದು ಪಾಪಭೀರುವಾದ ಲಕ್ಷ್ಮಣನಿಗೆ ಮಹಾ ಘೋರ. ಈ ಪಾಪದ ವಿರುದ್ಧ ರಕ್ಷಣೆಯೋ ಎಂಬಂತೆ ಲಕ್ಷ್ಮಣ ಅವಳ ಪ್ರದಕ್ಷಿಣೆ ಮಾಡುತ್ತಾನೆ. ಭೂಮಿಗೆ ತಲೆಬಾಗಿ ವಂದಿಸುತ್ತಾನೆ. ಸೀತೆಗೆ ಮತ್ತೆ ಮತ್ತೆ ('ಪುನರ್') ನಮಸ್ಕಾರ ಮಾಡುತ್ತಾನೆ. ಲಕ್ಷ್ಮಣನು ಈ ಪಾಪದಿಂದ ಓಡುವವನಂತೆ ನಾವೆಯನ್ನು ಹತ್ತಿದರೂ ನದಿಯ ಆ ತೀರದಿಂದ, ಈ ತೀರದಲ್ಲಿ ಗೋಳಾಡುತ್ತಿದ್ದ 'ಅನಾಥ'ಳಾದ ಸೀತೆಯನ್ನು ಮತ್ತೆ ಮತ್ತೆ 'ತಿರುತಿರುಗಿ' ನೋಡುತ್ತಾ ತೆರಳುತ್ತಾನೆ. ಸೀತೆಯು 'ನಾಥನನ್ನು ಕಾಣದೆ' ಲಕ್ಷ್ಮಣನನ್ನು 'ತಿರುತಿರುಗಿ' ನೋಡುತ್ತಾ ಗಟ್ಟಿಯಾಗಿ ಅಳುತ್ತಾಳೆ; ಅಡವಿಯ ನವಿಲುಗಳು ಪ್ರತಿಧ್ವನಿ ಕೊಡುತ್ತವೆ.

ಡಾ. ಪ್ರೋಲಂಕಿ ರಾಮಮೂರ್ತಿಯವರ

2 ಸೀತಾಯಣ



ಲಕ್ಷ್ಮಣ ಸೀತೆಯನ್ನು ಈ ಆರ್ತ ಮುಹೂರ್ತದಲ್ಲಿ 'ರಾಮರಹಿತೆ' ಎನ್ನುವುದು ಧ್ವನಿಯಿಂದ ತುಂಬಾ ಹೃದಯವಿದ್ರಾವಕವಾದದ್ದು. (ಲಾರೆನ್ಸಿನ **sons and lovers** ನ ಸಂದರ್ಭವೊಂದರಲ್ಲಿ ಪಾಲ್‌ನ ತಾಯಿ ಮಗನನ್ನು ಬಿಗಿದಪ್ಪಿ ಪಾಲ್ ನಿಜಕ್ಕೂ ನನಗೆ ಗಂಡನಿದ್ದುದಿಲ್ಲ' ಎನ್ನುವಾಗ ಆ 'ಗಂಡ' ಎಂಬ ಶಬ್ದದ ಧ್ವನಿ-ಔಚಿತ್ಯ ದಾರುಣತೆ, ಸೀತಾಲಕ್ಷ್ಮಣರ ಈ ಸನ್ನಿವೇಶದಲ್ಲಿ ನೆನೆಯಲು ಯೋಗ್ಯವಾದದ್ದು) ಸೀತೆಯ ಬಗ್ಗೆ ಈ ಕೆಲವೇ ಸಾಲುಗಳಲ್ಲಿ (11 ಸಾಲುಗಳಲ್ಲಿ) ಮೂರು ಸಾರಿ 'ಅನಾಥೆ', 'ಗಂಡನಿಲ್ಲದವಳು' ಎಂಬ ಪ್ರಯೋಗವಿದೆ. ಸೀತೆಯ ಕತೆ ರಾಮಾಯಣದಲ್ಲಿ 'ಅನಾಥೆ'ಯ ಕತೆ; ಹುಟ್ಟಿನಿಂದಲೇ ಅನಾಥೆಯಾದ ಸೀತೆ ಮದುವೆಯಾದವಳೇ ಕಾಡಿನಲ್ಲಿ 'ವಿರಹಿ'; ಆನಂತರ ರಾವಣನಿಂದ ಅಪಹೃತಳಾಗಿ 'ವಿಧವೆ'; ಈಗ ಲಕ್ಷ್ಮಣನಿಂದ ಪರಿತ್ಯಕ್ತಳಾಗಿ 'ಅನಾಥೆ'.

ಈ ಸಂದರ್ಭದಲ್ಲಿ ರಾಮನಿಗೆ ಸೀತೆಯ ಬಗ್ಗೆ ಇರುವ ಉಪೇಕ್ಷೆಯನ್ನು ಕುರಿತು ಕೆಲವು ಸಮಯಗಳನ್ನು ನೆನೆಯಬೇಕು. ರಾಜ್ಯವನ್ನು ಬಿಡುವುದನ್ನುದ್ದೇಶಿಸಿ ರಾಮನು ಹೀಗೆನ್ನುತ್ತಾನೆ: "ನನ್ನ ರಾಜ್ಯವನ್ನಷ್ಟೇ ಅಲ್ಲ, ನನ್ನ ಹೆಂಡತಿಯನ್ನೂ ಸಂತೋಷದಿಂದ ನನ್ನಷ್ಟಕ್ಕೆ ನಾನೇ ಭರತನಿಗೆ ಕೊಡುತ್ತಿದ್ದೆ." ಆಮೇಲೆ ಸೀತೆಯನ್ನು ಕಾಡಿಗಟ್ಟುವಾಗ ತಮ್ಮಂದಿರನ್ನು ಕುರಿತು ಹೀಗೆ ಹೇಳುತ್ತಾನೆ: "ಅಪವಾದದ ಭಯಕ್ಕಾಗಿ ಪ್ರಾಣವನ್ನಾದರೂ ತೊರೆದೇನು, ನಿಮ್ಮನ್ನಾದರೂ ತ್ಯಜಿಸಿಯೇನು ಇನ್ನು ಜಾನಕಿಯ ಮಾತೇನು" (ಜನಕಾತ್ಮಜಂ ಕಿಂ ಪುನಃ)?

ಅಷ್ಟೇ ಅಲ್ಲ, ವಿರಾಧನು ಸೀತೆಯನ್ನು ತೊಡೆಗೆ ಕೈ ಹಾಕಿ ("ಅಂಕೇನಾದಾಯ") ಎಳೆದಿಟ್ಟುಕೊಂಡಾಗ, ಸೀತೆ ದಿಗ್ಭ್ರಾಂತಳಾಗಿ ಬಿರುಗಾಳಿಗೆ ಸಿಕ್ಕ ಬಾಳೆಯ ಗಿಡದಂತೆ ನಡುಗುತ್ತಿರುವಾಗ ರಾಮನು ಉದ್ವಿಗ್ನನಾಗುವುದಿಲ್ಲ; ವಿಷಾದದಲ್ಲಿ ನಿಂತು ಶೋಕವನ್ನು ಮೆಲುಕು ಹಾಕುತ್ತಾನೆ.

("ಲಕ್ಷ್ಮಣಾ") ಜನಕ ಮಹಾರಾಜನ ಮಗಳೂ ಸದಾಚಾರ ಸಂಪನ್ನಳೂ ಆದ ನಿನ್ನ ಪತ್ನಿಯೂ ವಿರಾಧನ ತೊಡೆ ಸೇರಿರುವುದನ್ನು ('ವಿರಾಧಾಂಕೇ ಪ್ರವೇಶಿತಾಮ್') ನೋಡು ಇವಳು ಸಮೃದ್ಧಿಯಿಂದ ಬೆಳೆದ ರಾಜಪುತ್ರಿ. ಕೀರ್ತಿಶಾಲಿನಿಯಾಗಿ ಬೆಳಗಿದವಳು. ಲಕ್ಷ್ಮಣ ಕೈಕೇಯಿಯ ಅಪೇಕ್ಷೆ ಕೈಗೂಡಿಹೋಯಿತು..... ವೈದೇಹಿಗೆ ಪರ ಪುರುಷನ ಸ್ಪರ್ಶವಾಯಿತೆಂಬುದಕ್ಕಿಂತ ನನಗೆ ಹೆಚ್ಚು ದುಃಖಕರವಾಗಿದ್ದು ಇನ್ನೊಂದಿಲ್ಲ; ಪಿತೃವಿಯೋಗಕ್ಕಿಂತಲೂ ರಾಜ್ಯಭ್ರಂಶಕ್ಕಿಂತಲೂ ನನಗೆ ಹೆಚ್ಚು ಸಂಕಟವಾಗುತ್ತಿದೆ" ರಾಮನು ಅಳಲು ಪ್ರಾರಂಭಿಸುತ್ತಾನೆ. ಆದರೆ ಲಕ್ಷ್ಮಣನಾದರೋ ಒಡನೆಯೇ 'ಸಂಕ್ರುದ್ಧನಾಗಿ ಕೆಣಕಿದ ಕೃಷ್ಣಸರ್ಪದಂತೆ ಪೂತ್ಕರಿಸುತ್ತ' (ಇಲ್ಲಿ, ಈ ಉಪಮೇಯ ಲೈಂಗಿಕ ಸೂಚನೆಯ ಸೂಕ್ತತೆಯನ್ನು ಗಮನಿಸಿ) ವಿರಾಧನನ್ನು ಕೊಲ್ಲಲು ಆರ್ಭಟಿಸುತ್ತಾನೆ.

ಆದ್ದರಿಂದಲೇ ಸೀತೆ ಮುಂದೆ ರಾವಣನು ತನ್ನನ್ನು ಹೊತ್ತುಕೊಂಡು ಹೋಗುವಾಗ "ಹಾ ಲಕ್ಷ್ಮಣ! ಮಹಾಬಾಹು!" ಎಂದು ಲಕ್ಷ್ಮಣನ "ಮಹಾಬಾಹುತ್ವ"ವನ್ನು ಸಂಬೋಧಿಸಿ ಕೂಗುತ್ತಾಳೆ. ರಾಮನನ್ನಾದರೊ "ಧರ್ಮ" ರಕ್ಷಕನೆಂದು ನೆನೆದುಕೊಳ್ಳುತ್ತಾಳೆ.

ವಿರಾಧನು ಸೀತೆಯನ್ನು ತೊಡೆಯೇರಿಸಿಕೊಂಡ ಸಂದರ್ಭದಲ್ಲಿ ರಾಮನು ಪುರುಷ ಸಹಜವಾದ ರೋಷವನ್ನಾಗಲಿ ಕ್ಷಾತ್ರವನ್ನಾಗಲೀ ತೋರದೆ ವಿಷಾದವನ್ನು ಮೆಲುಕುಹಾಕಿ ಶೋಕಭಾಷಣ ಮಾಡಿದಂತೆಯೇ. ಮುಂದೆ ಮಾರೀಚನು, "ಹಾ ಸೀತೆ, ಹಾ ಲಕ್ಷ್ಮಣಾ" ಎಂದು ಕೂಗಿ ಸತ್ತಾಗ "ಸೀತೆಯು ಏನಾಗುವವಳೋ" ಎಂದು ಕಳವಳಿಸಿ "ತೀವ್ರವಾಗಿ ಭಯಗೊಂಡ ರಾಮನು ಕೂಡಲೇ ಹಿಂದಿರುಗುವುದಿಲ್ಲ; ಇನ್ನೊಂದು ಜಿಂಕೆಯನ್ನು ಕೊಲ್ಲುತ್ತಾನೆ; ಅದರ ಮಾಂಸವನ್ನು ಸಂಗ್ರಹಿಸುತ್ತಾನೆ." ಅನಂತರ 'ತ್ವರೆ(!)'ಯಿಂದ ಆಶ್ರಮಕ್ಕೆ ಬರುತ್ತಾನೆ!

ರಾಮಾಯಣದ ಈ ರಾಮ-ಸಂದರ್ಭಗಳನ್ನು ಪರಿಶೀಲಿಸುವ ನಿಮಗೆ, ರಾಮನು ಸೀತೆಗೆ ಕಾಡಿಗೆ ಬರಬೇಡವೆಂದಾಗ ಸೀತೆ ರಾಮನನ್ನು ಕುರಿತು "ಪುರುಷ ರೂಪದ ಸ್ತ್ರೀ" (ಸ್ತ್ರೀಯಂಪುರುಷವಿಗ್ರಹಂ) ಎಂಬ ಕೊಂಕು ನುಡಿ ಕೇವಲ ಮರ್ಮಭೇದಕವಾದದ್ದಷ್ಟೇ ಅಲ್ಲ, ಭೀಕರವಾದ ಭವಿಷ್ಯವಾಣಿಯೂ ಹೌದು. ಸತಿಯಾದ ಸೀತೆ ಗಂಡನ ಭೋಗದಿಂದ ಉದ್ದಕ್ಕೂ ವಂಚಿತಳೇ. ಅವಳ ಪಾಲಿಗೆ ರಾಮ "ಧರ್ಮ"; ರಾಮನನ್ನು ಕುರಿತ ಅವಳ ಸಂಬೋಧನೆಗಳೆಲ್ಲಾ "ಧರ್ಮ" ಶಬ್ದದ ಸಂಯೋಜನೆಗಳೇ. ಆದರೆ ಲಕ್ಷ್ಮಣ "ಮಹಾಬಾಹು"; "ಮಹಾಬಾಹು" ಆಗಿಯೇ ಲಕ್ಷ್ಮಣ ಅವಳನ್ನು ಕಾಯುತ್ತಾನೆ, "ಪುರುಷನಾಗುತ್ತಾನೆ; "ಧರ್ಮಿ"ಯಾದ ರಾಮನೂ ಲಕ್ಷ್ಮಣನ ಪೌರುಷವನ್ನು ಕಂಡುಕೊಂಡೇ ಅವನನ್ನು "ಮಹಾಬಾಹು" ಎಂದು ಸಂಬೋಧಿಸುತ್ತಾನೆ. ವಿವಾಹದಿಂದ ರಾಮ ಸೀತೆಗೆ ಗಂಡನಾದರೂ ಬಾಳಿನ ನಿಜ… ಲಕ್ಷ್ಮಣ ಅವಳಿಗೆ "ಪುರುಷ" ಸದೃಶ; ಈ ಸತ್ಯ… ಒತ್ತಿ ಹೇಳುವಂತೆ ವಿರಾಧ "ನಿಮ್ಮಿಬ್ಬರಿಗೆ ಅವ… ಹೆಂಡತಿ" ಎನ್ನುತ್ತಾನೆ. ಆ ರಾಮಾಯಣದ ಓದುಗನ… ಈ ಸಾದೃಶತೆ ಗುಪ್ತವಾಗಿಯಾದರೂ ಅನಿಸಿರಲು ಸಾ… ಈ ಅನಿಸಿಕೆ ಎಷ್ಟು ಪ್ರಬಲವಾಗಿರಬಹುದೆಂದರೆ (… ಶೈಲಜಾರವರು 'ವನಿತಾ' ಸೆಪ್ಟೆಂಬರ್ (198… ಸಂಚಿಕೆಯಲ್ಲಿ ಸೂಚಿಸಿರುವಂತೆ) "ಕೂತಾ… ರಾಮಾಯಣದ ಪ್ರಕಾರ ಸೀತೆ ರಾಮ ಲಕ್ಷ್ಮಣರಿಬ್ಬರಿಗ… ಹೆಂಡತಿ"; ಅಲ್ಲದೆ ಸೀತೆ ರಾವಣನ ದೌರ್ಜನ್ಯ… ಸಮಯದಲ್ಲೆಲ್ಲಾ ಸಾಮಾನ್ಯವಾಗಿ ರಾಮ-ಲಕ್ಷ್ಮಣ… ನನ್ನನ್ನು ಕಾಯುತ್ತಾರೆ, ನಿನ್ನನ್ನು ಸಂಹರಿಸುತ್ತಾರೆ ಎಂದ… ಅವರಿಬ್ಬರ ಹೆಸರನ್ನು ಜಂಟಿಯಾಗಿ ಉಪಯೋಗಿಸುತ್ತಾ…


ಹೀಗೆ "ನಾಥ"ನಿದ್ದೂ "ಅನಾಥ"ಳಾದ ಸೀತೆಯ… ದುರಂತ ಎಲ್ಲಿ ಈ "ಅನಾಥ"ತೆಯ ಪರಮಾವಧಿಯ… ಮುಟ್ಟುತ್ತದೆ ಎಂದರೆ ರಾಮನು ಸೀತೆಯನ್ನು ಕಾಡಿ… ಅಟ್ಟುವಲ್ಲಿ, ಆಗ, ನಾಥನಿಂದ ಪರಿತ್ಯಕ್ತಳಾದ ಪರಮಾವ… ಯಲ್ಲಿ, ಸೀತೆಗೆ, ಇಲ್ಲಿಯವರೆಗೂ ತನ್ನ ಇಂಗಿತ… ಆಳದಲ್ಲಿ "ನಾಥ"ನಾಗಿದ್ದವನೂ, ಈಗ "ನಾಥ… ನಾಗಬಲ್ಲವನೂ ಲಕ್ಷ್ಮಣನೊಬ್ಬನೇ. ಆದ್ದರಿಂದಲೇ ಸೀ… ನಾಥನೊಬ್ಬನಿಗೆ ನೋಡಲು ಯೋಗ್ಯವಾದ ಋತುಕಾ… ನಿಂತ ಪ್ರದೇಶವನ್ನು, ಅದು ನಾಥನಿಗೆ ಕೊಡುವ ಸತೀತ್ವ… ಕೊಡುಗೆಯೋ ಎನ್ನುವಂತೆ, ಸಾಂಕೇತಿಕ ಸತೀತ್ವವಾ… ನೋಡಲು-ಅಲ್ಲ "ನಿರೀಕ್ಷಿ"ಸಲು, ಅಂದರೆ ನೋಡು… ಕ್ರಿಯೆಯೇ ಐಂದ್ರಿಕವಾಗಿ ಭೋಗ ಕ್ರಿಯೆಯೂ ಆಗಲ… ಕಣ್ಣಾರೆ ನೋಡಲು, ಒಡ್ಡುತ್ತಾಳೆ. ಆದರೆ ಲಕ್ಷ್ಮಣ ಈ… "ಸತೀತ್ವ"ದ. ಕೊಡುಗೆಗೆ ಹಿಮ್ಮೆಟ್ಟಿ ಗಂಗಾನದಿಯ… "ಆ" ತೀರದಲ್ಲಿದ್ದಾನೆ. ಜೀವ(ನ)ದ ಸಂಕೇತವಾ… ಹರಿಯುವ ಗಂಗೆಯೇ ಈ ಗುಪ್ತಪ್ರೇಮಿಗಳನ್ನು ಬೇ… ಬೇರೆ 'ತಟಸ್ಥರನ್ನಾಗಿ' ಮಾಡಿಬಿಟ್ಟಿದೆ. ಇಬ್ಬರೂ ಪರಸ್ಪ… "ತಿರುತಿರುಗಿ" ನೋಡುತ್ತಾರೆ; ಗೋಳಿಡುತ್ತಾರ… ಸ್ವಲ್ಪಕಾಲದ ಮುಂಚೆ ಇಬ್ಬರನ್ನೂ ಒಂದಾಗಿಸಿ, ಒಂದು… ದಡದಿಂದ ಇನ್ನೊಂದು ದಡಕ್ಕೆ ವಾಹನವಾಗಿ ಒಡ್ಡಿಕೊಂ… ಗಂಗಾಪ್ರವಾಹ ಈಗ ಒಬ್ಬರಿಂದೊಬ್ಬರನ್ನಗಲಿಸಿ… ಸರಹದ್ದಾಗಿ ಬಿಡುತ್ತದೆ. ಜೀವನಕ್ಕೆ ಅಂಜಿದ ಪ್ರೇಮಿಗಳ… ಜೀವದ ಸಂಕೇತವಾದ ಗಂಗೆಯನ್ನು ದಾಟಲಾರ… ಗಂಗೆಯಿಂದಲೇ, ಜೀವ(ನ)ದಿಂದಲೇ ಬೇರ್ಪಡುತ್ತಾರ…

ಇದು ನೀತಿಪಾಠದ ವಾಚ್ಯ ರಾಮಾಯಣ ಬಚ್ಚಿಟ್ಟ… ಮಾನವೀಯ-ದಾರುಣತೆಯ ಸೂಚ್ಯ 'ಸೀತಾಯಣ… ನನ್ನ ಈ ವಿಚಾರಗಳಿಂದ ಪ್ರೇರಿತರಾದ ಚಂದ್ರಶೇಖ… ಪಾಟೀಲರು, ತಮ್ಮ ಕವನವನ್ನು ಸೂಕ್ತವಾ… "ಸೀತಾಯಣ" ಎಂದು ಕರೆದಿದ್ದಾರೆ. ರಾಮಾಯಣದ… ಸೀತಾಯಣವನ್ನು ಗುರುತಿಸುವುದೇ ಓದುಗ… ಸಹೃದಯತೆಗೆ ಸಾಕ್ಷಿ.

ನಾವು ರಾಮಾಯಣವನ್ನು ಪೂಜಿಸುತ್ತೇವೆ; ಬರಿ… ರಾಮಾಯಣ ಎನ್ನುವುದಿಲ್ಲ; ಶ್ರೀಮದ್ರಾಮಾಯಣ… ಎನ್ನುತ್ತೇವೆ; ಕುವೆಂಪು ಅವರೂ ಅದಕ್ಕೆ "ಶ್ರೀ… ರಾಮಾಯಣ ದರ್ಶನಂ" ಎಂದಿದ್ದಾರೆ. ಹಿರಿಯರಾದ… ಗುಂಡಪ್ಪ, ಮಾಸ್ತಿಯವರೂ ವಿಮರ್ಶೆಯ ಹೆಸರಿನ… ಯಥಾವತ್ತಾದ ಪೂಜೆ ಪುರಸ್ಕಾರಗಳನ್ನು ರಾಮಾಯಣ… ಸಲ್ಲಿಸಿದ್ದಾರೆ. ಆದರೆ ಕುರ್ತಕೋಟಿಯವರಂಥ ಕೆಲ… ವಿಮರ್ಶಕರೂ ಈ ಪೂಜಾಸಂಪ್ರದಾಯಕ್ಕೆ ಸಿಕ… ರಾಮಾಯಣದಲ್ಲಿ ಅತ್ಯಂತ ಅಮೂಲ್ಯವಾದ… ಮಾನವೀಯತೆ, ಜೀವಸಂಕೀರ್ಣತೆ, ದಾರುಣತೆಯನ್ನು… ಗುರುತಿಸದಿರುವುದು ತುಂಬಾ ಶೋಚನೀಯ.

ಸೀತೆಯನ್ನು ಮಹಾಸತಿಯೆಂದು ಸ್ವಾಮಿ… ವಿವೇಕಾನಂದರು ಹೀಗೆಂದಿದ್ದಾರೆ: **There can be a hundred Ramas, but there can be only one Sita.** ಕುವೆಂಪು ಅವರು ಈ ಮಾತನ್ನು… ಸಮರ್ಥಿಸುತ್ತಾ ಹೆಲೆನ್‌ನಂತಹ ಹೆಣ್ಣನ್ನು ಕೊಟ್ಟ… ಹೋಮರ್ ಕತೆ ಸೀತೆಯಂತಹ 'ಶುಚಿ' ಹೆಂಗಸನ್ನು… ಕಲ್ಪಿಸಲಾರ ಎಂದು ತಮ್ಮ "ಹೋಮರ್" ಎಂಬ… ಕವಿತೆಯಲ್ಲಿ ಹೇಳಿದ್ದಾರೆ. ಈ ಮಾತುಗಳು, ರಾಮಾಯಣ… ವನ್ನು ಕೇವಲ ಪಾರಾಯಣ ಮಾಡಿದ್ದರಿಂದ ಬಂದಂತ… ಹವು; ಪಠಿಸಿದ್ದರಿಂದಲ್ಲ. ಸೀತೆ, ದ್ರೌಪದಿಗಿಂತಲೂ… ಒಂದು ಹೆಜ್ಜೆ ಮುಂದೆ ನಿಂತ ದಿಟ್ಟ ಹೆಂಗಸು… ಲಕ್ಷ್ಮಣನನ್ನು ಬಯ್ಯುವಲ್ಲಿ ಲಕ್ಷ್ಮಣನೂ ಅವಳನ್ನು 'ದುಷ್ಟೆ… ಎನ್ನುತ್ತಾನೆ- ಮಾಯಾಜಿಂಕೆಯನ್ನು ಕಾಮಿಸುವಲ್ಲಿ -"ನಾನು ಈ ರುದ್ರ ಕಾಮದಲ್ಲಿ ಹೆಂಗಸಲ್ಲ" ಎಂದು… ಸೀತೆಯೇ ರಾಮನಿಗೆ ಹೇಳುತ್ತಾಳೆ-ಎಲ್ಲಕ್ಕಿಂತಲೂ… ಕೊನೆಯಲ್ಲಿ ಲಕ್ಷ್ಮಣ ತನ್ನನ್ನು ಬಿಟ್ಟು ಹೋಗುವಾಗ… ತನ್ನ ಸ್ತ್ರೀತ್ವವನ್ನೆ ಒಡ್ಡಿ ಅವನನ್ನು ದಿಗ್ಭ್ರಮೆಗೊಳಿಸಿ… ಅವನ ಪೌರುಷದ ಅಸ್ತಿತ್ವಕ್ಕೇ ಸವಾಲನ್ನು ಹಾಕಿದಾಗ… ಸೀತೆ ಮಹಾಸತಿಯಾಗುವುದಿಲ್ಲ; 'ಪುರುಷ'ಕ್ಕೆ ಪ್ರತಿಯಾಗಿ… ನಿಂತ 'ಪ್ರಕೃತಿ'ಯಾಗುತ್ತಾಳೆ; ಗಂಡಸಿಗೆ ಸವಾಲಾದ… ಹೆಂಗಸಾಗುತ್ತಾಳೆ. ದೇವಿಯಾಗುವುದಿಲ್ಲ; ಮಾನವಳಾಗು… ತ್ತಾಳೆ.

(ಮುಂದುವರೆಯುತ್ತದೆ)



ದೋಹಾ ಪ್ರತ್ಯಕ್ಷ ವರದಿ

ಏಷ್ಯನ್ ಎಷ್ಟು? ಗೇಮ್ಸ್ ಎಷ್ಟು?

ಕೇವಲ ದೋಹಾ ಕ್ರೀಡಾಕೂಟ ಮಾತ್ರವಲ್ಲ ದೋಹಾ ನಗರವೇ ಪಶ್ಚಿಮದಿಂದ ಉದುರಿಬಿದ್ದಂತೆ ಕಾಣುತ್ತದೆ. ಖತಾರ್ ದೇಶದಲ್ಲಿರುವ ಅಪಾರವಾದ ತೈಲ ಮತ್ತು ನೈಸರ್ಗಿಕ ಅನಿಲದ ಉತ್ಪಾದನೆಯಿಂದ ಬರುವ ಅಪಾರ ಸಂಪನ್ಮೂಲವನ್ನು ಆಧರಿಸಿ ಎಮೀರ್ ದೊರೆ ಪಾಶ್ಚಿಮಾತ್ಯ ಬಡಿವಾರವನ್ನು ಈ ಮಧ್ಯಮಯುಗದ ದೇಶದ ಮೇಲೆ ಹೇರುತ್ತಿದ್ದಾರೆ.

ಇತ್ತೀಚೆಗೆ ದೋಹಾದಲ್ಲಿ ನಡೆದ 15ನೇ ಏಷ್ಯನ್ ಗೇಮ್ಸ್‌ಗಾಗಿ ಖತಾರ್ ಸರ್ಕಾರ 2.8 ಬಿಲಿಯನ್ ಡಾಲರ್ ಎಂದರೆ 12 ಸಾವಿರದ 600 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿತ್ತು. ಇದರಲ್ಲಿ ಅತೀ ಮುಖ್ಯವಾದದ್ದು ಗೇಮ್ಸ್‌ಗಳು ನಡೆದ ದೋಹಾದ ಸುಂದರೀಕರಣ. ಇದು ಖತಾರ್‌ನ ರಾಜಧಾನಿ: ಇಲ್ಲಿ ಖತಾರ್ ದೇಶದ ಒಟ್ಟು ಜನಸಂಖ್ಯೆಯಾದ 8 ಲಕ್ಷದ ಶೇ. 80ರಷ್ಟು ಜನ ವಾಸಿಸುತ್ತಾರೆ.

ಖತಾರ್ ದೇಶದಲ್ಲಿ ಆಳುವ ಎಮೀರ್ ದೊರೆಯ ಮಾತೇ ಕಾನೂನು. 1940ರಲ್ಲಿ ಆ ದೇಶದಲ್ಲಿ ತೈಲ ದೊರಕುತ್ತದೆಂಬುದು ತಿಳಿಯುವ ತನಕ ಆ ದೇಶ ಬದುಕಿದ್ದೇ ಮೀನುಗಾರಿಕೆ ಮತ್ತು ರತ್ನ ಶೋಧನೆಯನ್ನು ಆಧರಿಸಿ. ಹೀಗಾಗಿ 44 ದೇಶಗಳು ಭಾಗವಹಿಸಿದ ಇಂತಹ ದೊಡ್ಡ ಕ್ರೀಡಾಕೂಟವನ್ನು ನಡೆಸುವ ಕನಸನ್ನೂ ಆಗ ಖತಾರ್ ಕಾಣಲು ಸಾಧ್ಯವಾಗಿರಲಿಲ್ಲ. ಏಷ್ಯನ್ ಗೇಮ್ಸ್‌ಅನ್ನು ನಡೆಸುವಷ್ಟು ಮೂಲ ಸೌಕರ್ಯಗಳೂ ಖತಾರಿನಲ್ಲಿರಲಿಲ್ಲ. 1990ರಲ್ಲಿ ಖತಾರ್ ಏಷ್ಯನ್ ಗೇಮ್ಸ್ ನಡೆಸುವುದಾಗಿ ಬಿಡ್ ಕೂಗಿದಾಗ ಮಾತ್ರವಲ್ಲ 2002ರಲ್ಲಿ ಅದು ಬಿಡ್‌ಅನ್ನು ಗೆದ್ದಾಗಲು ಇಲ್ಲಿ ನಿಜಕ್ಕೂ ಕ್ರೀಡಾಕೂಟ ನಡೆಯುವುದೇ ಎಂಬ ಸಂಶಯ ಎಲ್ಲರ ಮನಸ್ಸಿನಲ್ಲಿತ್ತು.

ಆಗ ಬಂತು ಎಮೀರ್ ದೊರೆಯ ಆದೇಶ. 'ಹಳೆಯ ರಸ್ತೆಗಳನ್ನು ಕೆಡವಿ-ಹೊಸದನ್ನು ಕಟ್ಟಿ. ರಸ್ತೆಗಳೇ ಇಲ್ಲದ ಕಡೆ ಹೈವೇಗಳನ್ನು ನಿರ್ಮಿಸಿ. ಆಧುನಿಕ ತಂತ್ರಜ್ಞಾನದ ಸೌಕರ್ಯಗಳನ್ನು ಹೊಂದಿದ ಸೌಲಭ್ಯಗಳನ್ನು ನಿರ್ಮಿಸಿ.' ಉದಾಹರಣೆಗೆ: ಏಷ್ಯನ್ ಗೇಮ್ಸ್‌ಗೆಂದೇ ನಿರ್ಮಿಸಲಾದ ಅತ್ಯಾಧುನಿಕವಾದ ಆಸ್ಟ್ರೋ ಟರ್ಫ್ ಅನ್ನು ಹೊಂದಿರುವ ಅಲ್‌ರಯಾನ್ ಹಾಕಿ ಸ್ಟೇಡಿಯಂ ಅನ್ನು ಏಷ್ಯನ್ ಗೇಮ್ಸ್‌ನ ಹಾಕಿ ಆಟಕ್ಕೆಂದೇ ನಿರ್ಮಿಸಲಾಯಿತು. ಆದರೆ ಈಗ ಅದನ್ನು ಕೆಡವಿ ಹಾಕಲಾಗುತ್ತಿದೆ. ಏಕೆಂದರೆ ಖತಾರ್ ದೇಶದಲ್ಲಿ ಹಾಕಿ ಆಡುವುದಿಲ್ಲ....!

ಏಷ್ಯನ್ ಕ್ರೀಡಾಕೂಟಕ್ಕೆಂದು ಏಷ್ಯಾದ ಕ್ರೀಡಾ ಪಟುಗಳು, ವಿಶ್ವದ ಕ್ರೀಡಾ ಪತ್ರಕರ್ತರು ದೋಹಾದಲ್ಲಿ ಬಂದಿಳಿದಾಗ ಅಲ್ಲಿನ ಸೌಲಭ್ಯ ಸೌಕರ್ಯಗಳನ್ನು ಕಂಡು ದಿಗ್ಮೂಢರಾದೆವು. ಅಥ್ಲೆಟ್ ಕ್ರೀಡಾಗ್ರಾಮ, ಮಾಧ್ಯಮಕೇಂದ್ರ, ಮಾಧ್ಯಮ ಟವರ್‌ಗಳು, ಸಾರಿಗೆ ಸೌಲಭ್ಯ ಹಾಗೂ ಎಲ್ಲಕ್ಕಿಂತ ಮಿಗಿಲಾಗಿ ತಿಂಡಿ-ತಿನಿಸುಗಳು ನಿಜಕ್ಕೂ ಗಾಬರಿ ಹುಟ್ಟಿಸುವಂತಿದ್ದವು: ಎಷ್ಟೆಂದರೆ ಡೈನಿಂಗ್ ಸೆಂಟರಿನಲ್ಲಿ ಯಾವ್ಯಾವ ಕೌಂಟರಿನಲ್ಲಿ ಏನೇನು ತಿನಿಸುಗಳಿವೆ ಎಂದು ಕಣ್ಣಾಡಿಸಲು ಕನಿಷ್ಟ ಇಪ್ಪತ್ತು ನಿಮಿಷಗಳು ಬೇಕಾಗುತ್ತಿತ್ತು. ಪುರುಷನೊಬ್ಬನ ಹೃದಯವನ್ನು ಗೆಲ್ಲಬೇಕೆಂದರೆ ಅವನ ಹೊಟ್ಟೆಯ ಮೂಲಕ ಗೆಲ್ಲಬೇಕೆಂಬುದೊಂದು ಗಾದೆ ಮಾತು. ನಾವೂ ಕೂಡ ಅಷ್ಟೇ. ಇವೆಲ್ಲವನ್ನೂ ಕಂಡು 2006ರ ದೋಹಾದಲ್ಲಿ ಏಷ್ಯನ್ ಕ್ರೀಡಾಕೂಟದ ಇತಿಹಾಸದಲ್ಲೇ ಅತ್ಯುತ್ತಮ ಮತ್ತು ಅತೀ ದೊಡ್ಡದಾದ ಕ್ರೀಡಾಕೂಟವೆಂದು ಬಣ್ಣಿಸಿದೆವು.



ಖತಾರ್ ದೊರೆಯ ಮಿಲಾಖತ್!

ಎಲ್ಲರ ಕಣ್ಣಿಗೂ ರಾಚುವಂತಿದ್ದ ಮತ್ತೊಂದು ಪ್ರಮುಖ ಸಂಗತಿಯೆಂದರೆ ದೋಹಾದ ಈ ಏಷ್ಯನ್ ಕ್ರೀಡಾಕೂಟದ ಎಲ್ಲಾ ಸಂಘಟನಾ ಸಮಿತಿಗಳಲ್ಲಿ ಬಿಳಿಯರ ಪ್ರಾತಿನಿಧ್ಯ ಅತ್ಯಧಿಕವಾಗಿದ್ದುದು. ಸಮಿತಿಗಳ ಮುಖ್ಯಸ್ಥನಾಗಿದ್ದ ಎಮೀರ್ ದೊರೆಯ ಮಗನೊಬ್ಬನನ್ನು ಬಿಟ್ಟರೆ ಅಥವಾ ಇನ್ನೊಂದಿಬ್ಬರನ್ನು ಬಿಟ್ಟರೆ ಇಡೀ ದೋಹಾ ಕ್ರೀಡಾಕೂಟದ ಯೋಜನೆ ಮತ್ತು ಅನುಷ್ಠಾನದ ಸಂಪೂರ್ಣ ನಿರ್ವಹಣೆ ಮಾಡಿದವರು ನೂರಾರು ಸಂಖ್ಯೆಯಲ್ಲಿದ್ದ ಪಾಶ್ಚಿಮಾತ್ಯರೇ ಆಗಿದ್ದರು. ಕೊನೆಗೆ ಇಡೀ ಕೂಟದ ಪ್ರಮುಖ ಹಾಗೂ ಅತ್ಯಾಕರ್ಷಣೆಯ ನೋಟವಾಗಿದ್ದ ಶಬ್ದ, ಬೆಳಕು ಮತ್ತು ಗ್ರಾಫಿಕ್‌ಗಳ ಮೂಲಕ ಮನಸೂರೆಗೊಂಡ ಕ್ರೀಡಾಕೂಟದ ಉದ್ಘಾಟನಾ ಹಾಗೂ ಸಮಾರೋಪ ಸಮಾರಂಭಗಳ ಯೋಜನೆ ಮತ್ತು ನಿರ್ವಹಣೆ ಮಾಡಿದ್ದು ಸಿಡ್ನಿ ಒಲಂಪಿಕ್ಸ್‌ನಲ್ಲಿ ಅದನ್ನು ಸಂಘಟಿಸಿದ್ದ ಒಂದು ಆಸ್ಟ್ರೇಲಿಯನ್ ಕಂಪನಿಯೇ. ಮಾಧ್ಯಮ ಸೇವೆಗಳಿಂದ ಹಿಡಿದು ಯೋಜನಾ ನಿರ್ವಾಹಕರ ವರೆಗೆ ಪ್ರತಿಯೊಂದು ಕೇಂದ್ರದಲ್ಲೂ ಮೇಲುಸ್ತುವಾರಿಗೆಂದು ಇದ್ದವರು ಪಾಶ್ಚಿಮಾತ್ಯರೇ ಆಗಿದ್ದರು. ಆದ್ದರಿಂದಲೇ ಇಡೀ ದೋಹಾ ಕ್ರೀಡಾಕೂಟದ ಯಶಸ್ಸಿಗಾಗಿ ಆಸ್ಟ್ರೇಲಿಯನ್ನರಿಗೆ ಕೃತಜ್ಞತೆ ಅರ್ಪಿಸಬೇಕೆಂದು ಯಾರೋ ಒಬ್ಬ ಕ್ರೀಡಾ ಪತ್ರಕರ್ತ ಉದ್ಘರಿಸಿದ.



ಕೇವಲ ದೋಹಾ ಕ್ರೀಡಾಕೂಟ ಮಾತ್ರವಲ್ಲ ದೋಹಾ ನಗರವೇ ಪಶ್ಚಿಮದಿಂದ ಉದುರಿಬಿದ್ದಂತೆ ಕಾಣುತ್ತದೆ. ಖತಾರ್ ದೇಶದಲ್ಲಿರುವ ಅಪಾರವಾದ ತೈಲ ಮತ್ತು ನೈಸರ್ಗಿಕ ಅನಿಲದ ಉತ್ಪಾದನೆಯಿಂದ ಬರುವ ಅಪಾರ ಸಂಪನ್ಮೂಲವನ್ನು ಆಧರಿಸಿ ಎಮೀರ್ ದೊರೆ ಪಾಶ್ಚಿಮಾತ್ಯ ಬಡಿವಾರವನ್ನು ಈ ಮಧ್ಯಮಯುಗದ ದೇಶದ ಮೇಲೆ ಹೇರುತ್ತಿದ್ದಾರೆ.

ಖತಾರ್ ದೇಶದ ರಾಜಕೀಯಾರ್ಥಿಕತೆ ತುಂಬ ಸರಳವಾಗಿದೆ. ರಷ್ಯಾ ಮತ್ತು ಇರಾನ್ ದೇಶಗಳು ಅತ್ಯಧಿಕ ಮಟ್ಟದ ನೈಸರ್ಗಿಕ ಅನಿಲವನ್ನು ಹೊಂದಿವೆ. ರಷ್ಯಾ ಪಾಶ್ಚಿಮಾತ್ಯ ದೇಶಗಳೊಂದಿಗೆ ಒಳ್ಳೆಯ ಸಂಬಂಧಗಳನ್ನು ಹೊಂದಿಲ್ಲ, ಇರಾನ್ ಅಂತೂ ಹೆಚ್ಚೂಕಡಿಮೆ ಅಮೆರಿಕ ಮತ್ತದರ ಮಿತ್ರರೊಡನೆ ಯುದ್ಧವನ್ನೇ ಹೂಡಿದೆ. ಹೀಗಾಗಿ ಪಶ್ಚಿಮದ ದೇಶಗಳಿಗೆ ಖತಾರ್ ತುಂಬ ಮುಖ್ಯವಾಗುತ್ತದೆ. ಖತಾರ್ ಕೂಡ ಡಾಲರ್ ಇದ್ದರೆ ಸಾಕು ಸೈತಾನನೊಂದಿಗೂ ಸ್ನೇಹದಿಂದಿರಲು ಕಾತುರದಿಂದಿದೆ.

ಆದ್ದರಿಂದಲೇ ಈ ದೇಶದ ಶೇಖುಗಳು ಅತ್ಯಾಧುನಿಕವಾದ ಫೆರಾರಿ, ಲ್ಯಾಂಬೋರ್, ಬಿಎಂಡಬ್ಲ್ಯೂ ಮತ್ತು ಹಮ್ಮರ್‌ಗಳಂತಹ ಐಶಾರಾಮಿ ಕಾರುಗಳಲ್ಲಿ ವಿನಾಕಾರಣ ಓಡಾಡುತ್ತಿರುವುದನ್ನು ನೋಡಬಹುದು. ಇದಕ್ಕಾಗಿಯೆಂದೇ ಅಲ್ಲಿ ಬೆಂಗಳೂರಿನ ಎಂಜಿ ರಸ್ತೆಯಂತಹ ಹದಿನಾಲ್ಕು ಕಿಲೋಮೀಟರ್ ಉದ್ದದ ಕಾರ್ನಿಚ್ ಎಂಬ ರಸ್ತೆಯೊಂದನ್ನು ನಿರ್ಮಿಸಲಾಗಿದೆ. ಇದೊಂದು ಪ್ರವಾಸೀ ಕೇಂದ್ರವೂ ಹೌದು. ಒಬ್ಬ ಮೂರನೇ ವಿಶ್ವದ ನೋಡುಗನ ಕಣ್ಣಿನಿಂದ ನೋಡಿದರೆ ಈ ಅತಿವೇಗದ ಕಾರುಗಳು ದೋಹಾದಲ್ಲಿ ಅನಗತ್ಯ. ಏಕೆಂದರೆ ನಿಜಕ್ಕೂ ಅವರು ಅಷ್ಟೊಂದು ಅವಸರವಸರವಾಗಿ ಹೋಗುವ ಅಗತ್ಯವೇನೂ ಇರುವುದಿಲ್ಲ.

ಅವರ ಕಾರ್ಮಿಕರು-ಇಂಜಿನಿಯರುಗಳು, ತಂತ್ರಜ್ಞರು ಮತ್ತು ಕೂಲಿಗಳು, ಇಂಡಿಯಾ, ಪಾಕಿಸ್ತಾನ, ಬಾಂಗ್ಲಾ ದೇಶ, ಶ್ರೀಲಂಕಾ ಮತ್ತು ಫಿಲಿಪ್ಪೈನ್ಸ್‌ಗಳಿಂದ ಬಂದವರು. ಇವರ ಶ್ರಮದಿಂದಲೇ ನೈಸರ್ಗಿಕ ಅನಿಲ ಅವಿರತವಾಗಿ ಹೊರ ಹೋಗುತ್ತಿರುತ್ತದೆ, ಡಾಲರ್‌ಗಳು ಅವಿರತವಾಗಿ ಒಳ ಸುಳಿಯುತ್ತಿರುತ್ತವೆ.

ವಾಸ್ತವವಾಗಿ ಖತಾರ್‌ಗಳ ಮನೋಧರ್ಮವನ್ನು ಪಾಶ್ಚಿಮಾತ್ಯರ ಮೋಡಿ ಹಿಡಿದಿಟ್ಟುಕೊಂಡಿದೆ. ಅದರ ನಡುವೆಯೂ ಲೆಬನಾನ್ ಮತ್ತು ಪ್ಯಾಲೆಸ್ತೀನ್‌ರ ಕ್ರೀಡಾಪಟುಗಳನ್ನು ಕಂಡಾಗ ಅವರೊಳಗಿರುವ ಇಸ್ಲಾಮಿಕ್ ಭ್ರಾತೃತ್ವ ಜಾಗೃತಗೊಂಡು ಸೋದರತೆಯ ಉದ್ಗಾರಗಳನ್ನು ಹೊರಡಿಸುತ್ತವೆ. ಒಂದೆಡೆ ಅವರು ಬಿಳಿ ವರ್ಣದವರನ್ನು ಆರಾಧಿಸಿದರೆ, ಭಾರತ ಉಪಖಂಡವನ್ನು ಕೂಲಿಗಳನ್ನು ನಿರಂತರವಾಗಿ ಸರಬರಾಜು ಮಾಡುವ ದೇಶವನ್ನಾಗಿ ಕಾಣುತ್ತಾರೆ. ಏಷ್ಯನ್ ಕ್ರೀಡಾಕೂಟದಲ್ಲಿ ಭಾರತೀಯರು ಬಸ್ ಡ್ರೈವರ್‌ಗಳಾಗಿ ಅಥವಾ ಮನೆ ಕೆಲಸದವರಾಗಿ ಮಾತ್ರ ಕಂಡುಬಂದರು.

ಕ್ರೀಡಾಕೂಟದ ಘೋಷಿತ ಉದ್ದೇಶವಾದ ಏಷ್ಯನ್ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಆಶಯವೂ ಪಾಶ್ಚಿಮಾತ್ಯ ವಾಸನೆ ಹೊಡೆಯುತ್ತಿತ್ತು. ನಮ್ಮಲ್ಲಿ ದೇಸೀ ತಬಲವನ್ನು ಬಾರಿಸುತ್ತಾ, ದೇಸೀ ಸಂಸ್ಕೃತಿಯನ್ನು ಸಾರುವ ಉಸ್ತಾದ್ ಜಾಕೀರ್ ಹುಸೇನ್ ಅಲ್ಲಿ ನುಡಿಸಿದ್ದು ಏನು ಗೊತ್ತೇ? ಜಾರುಫ್ ಸಂಗೀತವನ್ನು! 'ಜಾಕೀರ್ ಹುಸೇನರು ಯಾವಾಗಲೂ ಭಾರತದ ಶ್ರೀಮಂತ ಶಾಸ್ತ್ರೀಯ ಸಂಪ್ರದಾಯವನ್ನು ಪಾಶ್ಚಿಮಾತ್ಯ ಸಮುದಾಯಗಳಿಗೆ ಉಣಬಡಿಸಲು ಸೃಜನಶೀಲ ಮಾದರಿಗಳನ್ನು ಹುಡುಕಾಡುತ್ತಿರುತ್ತಾರೆ' ಎಂಬುದು ಅದಕ್ಕೆ ಸಂಘಟನಾ ಸಮಿತಿ ಕೊಟ್ಟ ಸಮಜಾಯಿಷಿ.

ಹೀಗೆ ಈ ದೇಶದ ಅರೇಬಿಯನ್ ನೈಟ್‌ಗಳ ಮತ್ತು ಡಿಸ್ನಿ ಲ್ಯಾಂಡ್‌ಗಳ ಈ ಸೋಜಿಗದ ಕೂಡಾವಳಿಯ ಮಾಂತ್ರಿಕತೆಯ ಎದುರು ಮಂತ್ರಮುಗ್ಧರಾದ ನಾವು ಬಂದ ಉದ್ದೇಶವಾದ ಕ್ರೀಡೆಯನ್ನೇ ಮರೆತುಬಿಟ್ಟೆವು. ಕ್ರೀಡೆಗಳು ಮತ್ತು ಪದಕ ಪ್ರಧಾನ ಸಮಾರಂಭಗಳನ್ನು ಹೊರತುಪಡಿಸಿದರೆ ಕ್ರೀಡೆಯನ್ನು ನೆನಪಿಸುವ ಸಂಗತಿಗಳೇ ಇರಲಿಲ್ಲ. ನಾನು ಅಲ್ಲಿಗೆ ಹೋದಾಗ ವಿವಿಧ ಖಂಡಗಳ, ವಿವಿಧ ಸಮುದಾಯಗಳು ಬೆರೆಯುವ ಸಂಭ್ರಮವನ್ನು ನಿರೀಕ್ಷಿಸಿದ್ದೆ. ಆದರೆ ಅಲ್ಲಿ ಅಂತಹ ಬೆರಗೇನೂ ಸಂಭವಿಸಲಿಲ್ಲ. ಆ ಬಗೆಯ ಸಂತೋಷ-ಸಂಭ್ರಮಗಳು, ಆಯಾ ದೇಶದ ತಂಡಗಳ ಮತ್ತು ಆಟಗಾರರ ಕೂಟಗಳಿಗೆ ಮಾತ್ರ ಸೀಮಿತಗೊಂಡಿತ್ತು. ಹಾಗೆ ನೋಡಿದರೆ ಆಟಗಳು ನಡೆಯುವಾಗಲೂ ಅಂತಹ ದೊಡ್ಡ ಗುಂಪೇನೂ ಕೂಡಿರಲಿಲ್ಲ. ಬಹುಪಾಲು ಭಾರತೀಯರು ಟೆನ್ನಿಸ್ ಸೆಂಟರ್‌ನಲ್ಲಿ ಗುಂಪುಗೂಡಿದ್ದರು. ಟೆನ್ನಿಸ್‌ನನ್ನು ನೋಡಲಲ್ಲ: ಸಾನಿಯಾಳನ್ನು ನೋಡಲು! ಉಳಿದ ಕ್ರೀಡೆಗಳು ನಡೆಯುವಾಗ ನೋಡುಗರ ಗ್ಯಾಲರಿ ಹೆಚ್ಚೂಕಡಿಮೆ ಖಾಲಿ ಹೊಡೆಯುತ್ತಿದ್ದವು.

ಕ್ರೀಡಾಕೂಟ ನಡೆದ ಆ ಹದಿನೈದು ದಿನಗಳಲ್ಲಿ ನಾವುಗಳೂ ಸಹ ಅಂತಹ ಕ್ರೀಡಾಧರ್ಮವನ್ನೇನೂ ಪ್ರದರ್ಶಿಸಲಿಲ್ಲ. ಲೆಬನಾನ್‌ನಿಂದ ಹಿಡಿದು ಜಪಾನ್‌ವರೆಗೆ ವಿವಿಧ ದೇಶಗಳಿಂದ ಬಂದಿದ್ದ ಅಂತಾರಾಷ್ಟ್ರೀಯ ಸಮುದಾಯದ ಜನತೆಯ ನಡುವೆ ಅಂತಹ ವಿಶೇಷ ಮಾತುಕತೆ, ಬೆರೆಯುವುದು ಇವೇನೂ ಕಂಡುಬರಲಿಲ್ಲ. ದುರಾದೃಷ್ಟವೆಂದರೆ ಯಾರು ಸ್ನೇಹದಿಂದ ಬೆರೆಯಬೇಕೆಂದು ಕೊಂಡಿದ್ದರೋ ಅವರಿಗೂ ಹಾಗೆ ಇರಲಾಗಲಿಲ್ಲ. ಏಕೆಂದರೆ ಅವರಿಗೆ ಇಂಗ್ಲಿಷ್ ಬರುತ್ತಿರಲಿಲ್ಲ ಮತ್ತು ಇಂಗ್ಲಿಷ್ ಚೆನ್ನಾಗಿ ಬರುತ್ತಿದ್ದವರು ಮಾತ್ರ ಥೇಟ್ ಇಂಗ್ಲಿಷರಂತೇ ನಡೆದುಕೊಂಡರು.

-ಗುಮ್ಮಡಿ ಗೌತಮ

ಹಯ್‌ಕುಗಳು

ಬಾವಿಯಲ್ಲಿ ಬೆಳದಿಂಗಳ ಚಂದ್ರ
ಒಂದು ಕಲ್ಲೆಸೆತಕ್ಕೆ
ಚಂದ್ರ ಚೂರು

ತಿಳಿಗೊಳದ ಮೇಲೆ ಚಂದ್ರ
ಸುಲಭ; ಪುಟ್ಟ ಆಮೆಗೆ
ಚಂದ್ರಯಾನ

ಬಾನ ಚಂದಿರನ ಕಲೆ
ಸರೋವರದಲ್ಲಿ ಮಾಯ
ಚಂದ್ರ ಸುಂದರ ಮುಖಿ

ಕೊಕ್ಕರೆಯ ಕೊಕ್ಕಿನಲ್ಲಿರುವ ಎರೆಹುಳಕೆ
ಸಂಭ್ರಮದ ದಿಗಿಲು
ಕೊನೆಗೂ ಹಾರಬಹುದು!

ಅವರು ಕವನಗಳನ್ನೋದಿ
ತಕ್ಷಣ ಮೆಚ್ಚಿ ಹೊಗಳುತ್ತಾರೆ
ಅದು ನನ್ನ ಕಾವ್ಯದ ಮಿತಿ

ಬೆಂಗಳೂರಿನ ಬೀದಿಯಲ್ಲಿ ನಡೆದಾಗ
ತೊಗರಿ ಸಾಲಿನ ನೆನಪು
ನರಕದಲ್ಲಿ ಚೂರು ಸ್ವರ್ಗ

-ಡಾ. ಸಿ. ರವೀಂದ್ರನಾಥ್



ಮಲೆನಾಡಿನ ನಿಜವಾದ ಸಮಸ್ಯೆ-ಸಂಘ ಪರಿವಾರ!

ಅಣಕ

ಕನ್ನಡ ಸಾಹಿತ್ಯ ಸಮ್ಮೇಳನ ಅನ್ನುವ ಕನ್ನಡ ಜಾತ್ರೆಗೆ ಜನ ಯಾಕೆ ಹೋಗ್ತಾರೋ ಗೊತ್ತಿಲ್ಲ. ಗೋಷ್ಠಿಗಳಲ್ಲಿ ಭಾಗವಹಿಸೋರಲ್ಲಿ ಕೆಲವರು ಏನೇನೋ ಮಸಲತ್ತು ಮಾಡಿ ಒಳಗೆ ನುಸಳಿರ್ತಾರೆ. ಅಂತಹವರ ಮಾತು ಬಿಡಿ. ಪಾಪ ಬಹಳಷ್ಟು ಶ್ರಮವಹಿಸಿ ಪಡೆದ ಗೌರವದಿಂದ ಪುಳಕಿತರಾಗಿ ತಮ್ಮ ಅಮೋಘ ಚಿಂತನೆಗಳನ್ನು (ಕೆಲವರು ಬಾಲಿಶ ಅಂದುಕೊಂಡರೂ ಪರವಾಗಿಲ್ಲ) ಬಿತ್ತರಿಸಲು ಇಂತಹ ವೇದಿಕೆ ಸಿಕ್ಕಿತಲ್ಲಾ ಅಂತ ಬಂದಿರುತ್ತಾರೆ. ಮುಂದೆ ತಮ್ಮ ಬಯೋಡಾಟಾದಲ್ಲಿ ಇಂತಹ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿ ಇಂತಹ ಲೇಖನ ಮಂಡಿಸಿದೆ ಅಂತ ಬರೆದುಕೊಳ್ಳೋಕೆ ಒಂದು ಚಾನ್ಸು! ನಿಜಕ್ಕೂ ಸಾಹಿತಿಗಳಾದವರು, ಸಾಂಸ್ಕೃತಿಕ ಚಿಂತಕರಾದವರು ಇವರ ಆಟಾಟೋಪದ ಮುಂದೆ ಎಗರಿ ಹೋಗೋದೇ ಹೆಚ್ಚು. ಇಂತಹವರ ವಿಚಾರ ಅಲ್ಲ ನಾನು ಹೇಳ್ತಿರೋದು. ಯಾವುದೇ ಅಧಿಕೃತ ಆಹ್ವಾನ ಇಲ್ಲದೆ ಸಾಹಿತ್ಯ ಸಮ್ಮೇಳನ ನಡೆಯುತ್ತಿದೆ ಎಂದು ತಿಳಿದೇ ಜನ ಯಾಕೆ ಹೋಗ್ತಾರೆ ಅಂತ. ನಾನು ಶಿವಮೊಗ್ಗ ಸಮ್ಮೇಳನಕ್ಕೆ ಹೋದದ್ದು ಗೆಳೆಯರು ಸಿಕ್ಕಿದರೆ ಹರಟೆ ಹೊಡೆಯೋಕೆ, ಕನ್ನಡದಲ್ಲಿ ಬಂದಿರುವ ಇತ್ತೀಚಿನ ಪುಸ್ತಕಗಳನ್ನು ನೋಡಿ ಕಣ್ತುಂಬಿಸಿಕೊಳ್ಳೋಕೆ.

ಸಮ್ಮೇಳನದ ಆರಂಭದಲ್ಲೇ ಎಡವಟ್ಟಾಯಿತು. ಸಭೆ ಅರ್ಧಗಂಟೆ ತಡವಾಗಿ ಪ್ರಾರಂಭವಾಯಿತು. ನಿರೂಪಕರೇನೋ 'ರಾಜಕಾರಣಿಗಳ ಸಭೆ ಎಂದರೆ ಎರಡು ಮೂರು ಗಂಟೆ ತಡವಾಗಿ ಪ್ರಾರಂಭ ಆಗುತ್ತೆ, ಆದರೆ ಇಲ್ಲಿ ಹಾಗಲ್ಲ, ಕೆಲವೇ ಕ್ಷಣಗಳಲ್ಲಿ ಪ್ರಾರಂಭ ಆಗೇಬಿಡುತ್ತೆ' ಅಂತ ಹೇಳ್ತಾನೆ ಇದ್ದರು. ಆದರೆ ಆದದ್ದು ಏನು ಅಂತೀರಿ, ಪ್ರತಿಯೊಂದು ಗೋಷ್ಠಿಯೂ ಮುಗಿಯಬೇಕಾದ ವೇಳೆಗೆ ಪ್ರಾರಂಭವಾದರೆ ಪುಣ್ಯ! ಆರೂವರೆಗಂಟೆಗೆ ಪ್ರಾರಂಭವಾಗಬೇಕಿದ್ದ ಕವಿಗೋಷ್ಠಿ ಆಗಿದ್ದು ರಾತ್ರಿ ಒಂಭತ್ತು ಗಂಟೆಗೆ! ಅದು ಕೊನೆಗೊಂಡದ್ದು ಮಧ್ಯರಾತ್ರಿಗೆ! ಬೆಳದಿಂಗಳ ಕವಿಗೋಷ್ಠಿ ಅಂತ ಕೇಳಿದ್ದೊ, ಇಲ್ಲಿ ನಡೆದದ್ದು ಮಧ್ಯರಾತ್ರಿಯ ನೀರಸ ಕವಿಗೋಷ್ಠಿ! ಅದಾದನಂತರ ಮಕ್ಕಳಿಂದ ನೃತ್ಯ ಪ್ರದರ್ಶನ ಇತ್ತೂ ಅಂತ ಕಾಣಿಸುತ್ತೆ, ಪಾಪ ಶಾಲಾ ಮಕ್ಕಳು ಡ್ರೆಸ್ ಮಾಡಿಕೊಂಡು ತೂಕಡಿಸುತ್ತಾ ಇದ್ದದ್ದು ನೇಪಥ್ಯದ ಕಡೆ ನೋಡಿದವರಿಗೆ ಅಯ್ಯೋ ಅನ್ನುವ ಹಾಗೆ ಮಾಡಿಸಿತ್ತು. ಈ ಮಕ್ಕಳ ಕಡೆಯವರು, ಗೋಷ್ಠಿಯಲ್ಲಿ ಭಾಗವಹಿಸಿದ್ದ ಕವಿಗಳ ಆಪ್ತರು ಬಿಟ್ಟರೆ ವೈಭವಯುತ ಸಭಾಂಗಣದಲ್ಲಿನ ಖಾಲಿ ಕುರ್ಚಿಗಳದೇ ಮೆರೆದಾಟ. ಅಲ್ಲಿ ಇದ್ದವರಲ್ಲೂ ಕೆಲವರು ಸುಖವಾಗಿ ನಿದ್ರಾದೇವಿಯ ಆಲಿಂಗನದಲ್ಲಿರುವುದನ್ನು ಹಾಳಾದ ಟಿವಿ ಚಾನೆಲ್‌ನವರು ಮತ್ತೆಮತ್ತೆ ತೋರುಸ್ತಾನೆ ಇದ್ದರು!

ಸ್ವಾಗತ ಭಾಷಣ ಮಾಡಿದ ಉಪಮುಖ್ಯಮಂತ್ರಿ ಯಡಿಯೂರಪ್ಪನವರು ಈ ಸಮ್ಮೇಳನ 'ನ ಭೂತೋ ನ ಭವಿಷ್ಯತಿ' ಅನ್ನುವ ಹಾಗೆ ಮಾಡ್ತೀವಿ ಅಂದರು. ಅದಕ್ಕೆ ಉತ್ತರಿಸಿದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಚಂಪಾ ಅವರು 'ನಭೂತೋ ಏನೋ ಸರಿ ಇಷ್ಟೊಂದು ಅದ್ದೂರಿಯಾದ ಸಮ್ಮೇಳನವನ್ನು ನನ್ನ ಜೀವಿತ ಅವಧಿಯಲ್ಲಿ ಕಂಡೇ ಇಲ್ಲ, ಆದರೆ 'ನಭವಿಷ್ಯತಿ' ಅಂತ ಹೇಳುವುದಕ್ಕಾಗುವುದಿಲ್ಲ, ಮುಂದಿನ ಸಮ್ಮೇಳನಗಳು ಇದಕ್ಕೂ ಮಿಗಿಲಾಗಿ ನಡೆಸುವವರು ಬರಬಹುದು' ಎಂಬರ್ಥದ ಮಾತುಗಳನ್ನು ಆಡಿದರು. ಆದರೆ ಕವಿಗೋಷ್ಠಿ ಸರಿ ರಾತ್ರಿಯವರೆಗೂ ಎಳೆದುಕೊಂಡು ಹೋದದ್ದನ್ನು ನೋಡಿದರೆ 'ನಭೂತೋನಭವಿಷ್ಯತಿ' ಅಂದ ಯಡಿಯೂರಪ್ಪನವರೇ ಸರಿ ಅನ್ನಿಸುತ್ತೆ!

ಚಂದ್ರೇಗೌಡರ ಜೊತೆ ಹರಟೆ ಹೊಡೀತಾ ಪುಸ್ತಕದ ಮಳಿಗೆಗಳ ಬಳಿ ಸುಳಿದಾಡ್ತಾ, ಸ್ವಾಮಿ ಆನಂದ್ ಅವರ ನೈಸರ್ಗಿಕ ಕೃಷಿ ಮಳಿಗೆಗೆ ಬಂದೊ, ಅಲ್ಲಿ ಗೌಡರ ನಾಟಕ 'ಕಡಿದಾಳು ಶಾಮಣ್ಣ' ಮಾರಾಟಕ್ಕಿತ್ತು. ಅದನ್ನು ನೋಡಿದ ಒಬ್ಬರು 'ರೈತ ನಾಯಕ' ಅಂತ ಇದೆಯಲ್ರಿ, 'ನಕ್ಸಲೀಯ ನಾಯಕ' ಅಂತ ಇರಬೇಕಾಗಿತ್ತು ಅಂದ್ರಂತೆ! ಅದನ್ನ ಅಂಗಡಿಯಲ್ಲಿ ಇದ್ದ ಹುಡುಗ ಹೇಳಿದ. ಅಲ್ಲ, ಕಾಮಾಲೆ ಕಣ್ಣಿನವರಿಗೆ ಎಲ್ಲ ಹಳದಿಯಾಗೆ ಕಾಣಿಸುತ್ತೆ ಅಂತಾರೆ; ಈ ಸಂಘ ಪರಿವಾರದವರ ಕಣ್ಣಿಗೆ, ಸ್ವಲ್ಪ ಜನಪರ ಚಿಂತನೆ ಮಾಡಿದರೂ ಸರಿ ನಕ್ಸಲೀಯರ ತರಹಾನೆ ಕಾಣ್ತಾರಲ್ಲ ಅಂತ! ಕಲ್ಕುಣಿ ವಿಠಲ ಹೆಗಡೆ ನಕ್ಸಲೀಯ! ಗೌರಿ ಲಂಕೇಶ್ ನಕ್ಸಲೀಯ!

'ನಕ್ಸಲೀಯ ಪ್ರಣೀತ'ರಿಗೆ ವೇದಿಕೆ ನೀಡಬಾರದು ಅಂತ ಈ ಪರಿವಾರದವರು ಅಪ್ಪಣೆ ಮಾಡಿದ್ದರಂತೆ. ಆದರೂ ನೀಡಿದ್ದಾರಲ್ಲ ಅನ್ನೋ ಕೋಪಕ್ಕೆ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿನ ಪಡ್ಡೆ ಹೈಕಳು ಸಮ್ಮೇಳನಾಧ್ಯಕ್ಷರ ಮೆರವಣಿಗೆಯ ದಿವಸವೇ ಪ್ರತಿಭಟಿಸಿದರು. ಪ್ರತಿಭಟನೆ ಮಾಡಲಿ. ಅವರ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೂ ಬೆಲೆ ಇದೆ. ಆದರೆ ಕಲ್ಕುಣಿ ಭಾಗವಹಿಸಿದ್ದ ಗೋಷ್ಠಿಯಲ್ಲಿ ವೇದಿಕೆಗೇ ನುಗ್ಗಿ ಕಾರ್ಯ ಕಲಾಪಗಳಿಗೆ ಅಡ್ಡಿಪಡಿಸುವುದು ಯಾವ ಶಿಷ್ಟಾಚಾರ? ಇವರು ಬಯಸಿದ ವಾಕ್‌ಸ್ವಾತಂತ್ರ್ಯ ಕಲ್ಕುಣಿಗೆ ಬೇಡ ಅಂದರೆ ಹೇಗೆ? ವಿಭಿನ್ನ ಚಿಂತನೆಗಳ ಚಿಂತನ ಮಂಥನ ಆಗಲಿ ಎಂದರೆ ಇವಕ್ಕೆ ಬೇರೆಯವರ ಅಭಿಪ್ರಾಯ ಕೇಳುವ ಮನಸ್ಸೇ ಇರಲಿಲ್ಲ! ಅವರು ಹಿಡಿದ ಮೊಲಕ್ಕೆ ಮೂರೇ ಕಾಲು! ಇದರಿಂದ ನೊಂದವರು ಅಂದರೆ ಶಿವಮೊಗ್ಗದ ಸಭ್ಯ ನಾಗರಿಕರು. ಗೋಷ್ಠಿಯಲ್ಲಿ ಭಾಗವಹಿಸಿದ್ದ ಸಾಹಿತಿ ನಾ. ಡಿಸೋಜ ಅವರು ಪದೇಪದೇ 'ಈ ಘಟನೆಯಿಂದ ದಯವಿಟ್ಟು ಯಾರೂ ವಿಚಲಿತರಾಗಬೇಡಿ. ಶಿವಮೊಗ್ಗೆಯ ಜನ ಸಭ್ಯರು, ನಾಗರಿಕರು, ಶಿಷ್ಟಾಚಾರವಿರುವವರು' ಎಂದು ಹೇಳಬೇಕಾಗಿ ಬಂದಿತು!

ಸಂಘ ಪರಿವಾರದವರು ಈ ಘಟನೆಯ ನಂತರ ಸಹಜವಾಗಿಯೇ 'ನಾವು ಶಾಂತರೀತಿಯಿಂದ ಪ್ರತಿಭಟನೆ ನಡೆಸುತ್ತಿದ್ದೆವು. ಆದರೆ ಕೋಮು ಸೌಹಾರ್ದ ವೇದಿಕೆಯವರು ನಮ್ಮನ್ನು ಹೊಡೆಯಲೆಂದೇ ಸಿದ್ಧರಾಗಿ ಬಂದಿದ್ದರು. ಪೊಲೀಸರೂ ಅವರೊಡನೆ ಸೇರಿದರು' ಎಂದು ಪ್ರತಿಕ್ರಿಯಿಸಿದ್ದಾರೆ. ಅಂದರೆ ಶಾಂತರೀತಿಯಿಂದ ವೇದಿಕೆಗೆ ಏರಿ ಗಲಭೆ ಎಬ್ಬಿಸಿದೆವು! ಸೌಜನ್ಯಯುತವಾಗಿ ಕಲ್ಕುಣಿಗೆಗೆ ತದುಕಬೇಕು ಅಂತ ಇದ್ದೆವು ಅಂತ!

ಈ ಗಲಭೆ ನಡೆದಾಗ ನಡೆಯುತ್ತಿದ್ದ ಗೋಷ್ಠಿ: 'ಮಲೆನಾಡಿನ ವಾಸ್ತವಿಕ ಸಮಸ್ಯೆಗಳು!' ಇದನ್ನೆಲ್ಲ ನೋಡಿದವರಿಗೆ ಅನ್ನಿಸಿದ್ದು ಎಂದರೆ-ಮಲೆನಾಡಿನ ನಿಜವಾದ ಸಮಸ್ಯೆ ಅಂದರೆ ಈ ಸಂಘ ಪರಿವಾರದವರು!

* * * * * * * *

ಘನ ಸರ್ಕಾರ ಜಿ.ಎಸ್. ಶಿವರುದ್ರಪ್ಪ ಅವರನ್ನು ರಾಷ್ಟ್ರಕವಿ ಅಂತ ಘೋಷಿಸಿತಲ್ಲಾ... ಹತ್ತು ಲಕ್ಷ ರೂಪಾಯಿ ನೀಡುವುದಾಗಿ ಬೊಗಳೆ ಹೊಡೆಯಿತಲ್ಲಾ... ಈಗ ಏನು ಮಾಡಿದೆ ಅಂದರೆ ಅದರಬದಲು ಕವಿವರ್ಯರು ಬದುಕಿರುವ ತನಕ ಐದು ಸಾವಿರ ರೂಪಾಯಿ ಮಾಶಾಸನ ನೀಡುತ್ತಂತೆ! ಹತ್ತು ಲಕ್ಷ ರೂಪಾಯಿ ಯಾಕೆ ನೀಡುವುದಿಲ್ಲ ಅಂದರೆ ಅದನ್ನು ಖರ್ಚು ಮಾಡಿಬಿಡುವರಂತೆ! ಅಂದರೇನಾಯಿತು? ಕವಿಗಳಿಗೆ ಹಣ ವಿನಿಯೋಗದ ಮಾರ್ಗ ತಿಳಿದಿಲ್ಲ! ರಾಷ್ಟ್ರಕವಿಗಳೇನೋ ತಮ್ಮ ಎಂದಿನ ಮೃದು ಮಾತಿನಿಂದ ಇದನ್ನು ದೊಡ್ಡದಾಗಿ ಬೆಳೆಸಬೇಡಿ ಎಂದು ಹೇಳಿದ್ದಾರೆ. ಆದರ[...] ಇದು ಸಮ್ಮೇಳನದಲ್ಲಿ ಪ್ರಸ್ತಾಪಕ್ಕೆ ಬಂತು. ಕ್ರಿಕೆ[...] ಆಟಗಾರರಿಗೆ ಲಕ್ಷ ಲಕ್ಷ ಸುರಿಯುವ ಸರ್ಕಾರಕ್ಕೆ ಇದ[...] ಮಾತ್ರ ಹೊರೆಯಾಗಿದೆಯೇ? ಎಂಬ ಮಾತ[...] ಕೇಳಿಬಂದಿತು. ಸ್ವಾಗತ ಸಮಿತಿ ಅಧ್ಯಕ್ಷ ಯಡಿಯೂರಪ[...] ತಮ್ಮ ಸರ್ಕಾರ ಈ ಹಿಂದೆ ಘೋಷಿಸಿದಂತೆ ಹತ[...] ಲಕ್ಷ ರೂಪಾಯಿ ನೀಡುವುದಾಗಿ ಭರವಸೆ ನೀಡಿದರು. ಆದರೆ ಈ ಸುದ್ದಿ ಹೊರಬಂದದ್ದು ಹೇಗೆ? 'ಯಾರೋ ಕಿಡಿಗೇಡಿ ಅಧಿಕಾರಿಗಳ ಕೆಲಸ ಇದು' ಎಂಬುದು ಯಡ್ಡಿ ಉತ್ತರ! ಹಾಗಾದರೆ ಸರ್ಕಾರ ನಡೆಸುತ್ತಿರುವವರು ಯಾರು? ಅಧಿಕಾರಿಗಳಾ? ಇವರಾ?

* * * * * * * *

ಮುಖ್ಯಮಂತ್ರಿ-ಚಂಪಾ ಜಟಾಪಟಿ ನಡೆಯುತ್ತಲ[...] ಇದೆ. ಸಮ್ಮೇಳನ ಹೇಗೆ ನಡೆಸಬೇಕು, ಯಾರನ[...] ಆಹ್ವಾನಿಸಬೇಕು ಅನ್ನುವುದು ಪರಿಷತ್ತಿನ ಹಕ್ಕು ಅಂ[...] ಚಂಪಾ; ರಾಜ್ಯ ಮುಖ್ಯಮಂತ್ರಿಯ ಸ್ಥಾನಕ್ಕೆ ನೀಡಬೇಕಾ[...] ಗೌರವ ನೀಡಿಲ್ಲ ಅಂತ ಮುಖ್ಯಮಂತ್ರಿ. ಅಧಿಕೃ[...] ಆಹ್ವಾನ ನೀಡಿ ಕರೆಯಬೇಕಾಗಿದ್ದು ಪರಿಷತ್ತಿನ ಗೌರವ[...] ಯುತ ನಡವಳಿಕೆ. ಪರಿಷತ್ತಿನ ಅಧ್ಯಕ್ಷರೇ ಸ್ವತಃ ಬಂದಾ[...] (ಕೊನೆ ಗಳಿಗೆಯಲ್ಲಾದರೂ) ಅವರನ್ನು ಕುಳಿತುಕೊಳ್ಳಲ[...] ಹೇಳುವುದು ಮುಖ್ಯಮಂತ್ರಿಯವರ ಸೌಜನ್ಯಯುತ[...] ನಡವಳಿಕೆ ಆಗಬೇಕಾಗಿತ್ತು. ಎರಡೂ ಆದದ್ದು ಹೊರಕ್ಕೆ ಹಾಕು ಅನ್ನುವಂತೆ ವರ್ತಿಸುವುದು ನಿಮಗೆ ಸರಿಯಾಗಿ ಕಾಣಿಸುತ್ತಿದೆಯೆ?

ಕ್ಯೂನಲ್ಲಿ ನಿಂತಿದ್ದೆ


ಪತ್ರಿಕೆಗಳಲ್ಲೂ ಅದೇ ಸುದ್ದಿ. ಟಿವಿಯಲ್ಲೂ ಅದೇ ಸುದ್ದಿ. ಘಮಘಮಿಸುವ ಅಚ್ಚುಕಟ್ಟಾದ ತಿಂಡಿಯ ಸುದ್ದಿ!

ಸಮ್ಮೇಳನಕ್ಕೆ ಬಂದಿದ್ದ ಒಬ್ಬರನ್ನು ಕೇಳಿದೆ: 'ಸಮ್ಮೇಳನ ಹೇಗಿತ್ತು?'

'ಕ್ಯೂನಲ್ಲಿತ್ತು' ಎಂದರು ಅವರು!

ವಿವಿಧ ಭಕ್ಷಗಳ ವಿವರ ತಿಳಿದಿದ್ದ ಅವರು ಬೆಳಿಗ್ಗೆ ತಿಂಡಿಗೆ, ಮಧ್ಯಾಹ್ನ, ರಾತ್ರಿ ಊಟಕ್ಕೆ ಅಂತ ಕನಿಷ್ಠ ಐದಾರು ಗಂಟೆ ಕ್ಯೂನಲ್ಲೇ ನಿಂತಿದ್ದರಂತೆ. ಹೀಗಾಗಿ ಇಡೀ ಸಮ್ಮೇಳನ ಕ್ಯೂನಲ್ಲೇ ಕಳೆದುಹೋಯಿತಂತೆ!

-ಎಚ್.ಎಲ್. ಕೇಶವಮೂರ್ತಿ




ಕೋಮುವಾದವನ್ನು ಧಿಕ್ಕರಿಸಿ ನಾಟಿ ಗೋವು ರಕ್ಷಿಸಬೇಕು

ಹೊಸ ತೇಗ ಟಿಕಿ

'ಪವಿತ್ರ ಗೋವು' ಕುರಿತಾದ ಲೇಖನಕ್ಕೆ ಪ್ರತಿಕ್ರಿಯೆ: ಗೋವು ಪವಿತ್ರ(Conselled)ವೆಂದು ಭಾವಿಸುವುದಕ್ಕೆ ಧಾರ್ಮಿಕ ಕಾರಣಗಳಿರಬಹುದು. ಆದರೆ ಹಸುವಿಗೆ 'ಪಾವಿತ್ರ್ಯತೆ' ದೊರೆತಿರುವುದು ತಾನು ನೀಡುವ ಹಾಲು, ಮೊಸರು, ಮಜ್ಜಿಗೆ, ಬೆಣ್ಣೆ, ತುಪ್ಪಗಳಿಂದ ಮಾನವ ಕುಲವನ್ನು ಪೋಷಿಸುವ-ಪೊರೆಯುವ ಸಾಮರ್ಥ್ಯವನ್ನು ಪಡೆದಿರುವುದರಿಂದಾಗಿ; ಭೂಮಿಗೂ, ಮಾನವನ ಆರೋಗ್ಯಕ್ಕೂ ಮತ್ತು ಹಸುವಿಗೂ ಇರುವ ಅವಿನಾಭಾವ ಸಂಬಂಧದಿಂದಾಗಿ.

ಹಸು ಸಾಂಪ್ರದಾಯಿಕ ಕೃಷಿಯ ತಳಹದಿಯಾಗಿದೆ. ಪ್ರಾಚೀನ ಭಾರತದ ಸಮೃದ್ಧ ಕೃಷಿ ಸಂಸ್ಕೃತಿ ಗೋವು ಸಂಸ್ಕೃತಿಯೇ ಆಗಿತ್ತು, ನಮ್ಮ ಜಮೀನಿನ ಉಳುಮೆಗೆ ಬೇಕಾದಂಥ ಶಕ್ತಿ ಸಾಮರ್ಥ್ಯಗಳುಳ್ಳ ಎತ್ತುಗಳು ನಮ್ಮ ಹಸುಗಳಿಂದಲೇ ಬರುತ್ತವೆ. ನಮ್ಮ ಜಮೀನನ್ನು ಉಪಯುಕ್ತ ಜೀವಾಣುಗಳು, ಅಸಂಖ್ಯ ಜೀವ-ಜಂತುಗಳಿಂದ ಸಮೃದ್ಧಗೊಳಿಸುವುದಕ್ಕೆ ಅತ್ಯಗತ್ಯವಾದ ಸಗಣಿ, ಗಂಜಳ ಇತ್ಯಾದಿಗಳನ್ನು ನಮ್ಮ ಹಸುಗಳು ನೀಡುತ್ತವೆ. ಹಸುವಿನ ಸಗಣಿ-ಗಂಜಳಗಳು ಅನಂತಕೋಟಿ ಜೀವಾಣುಗಳ ಸಮೃದ್ಧ ಭಂಡಾರವಾಗಿವೆ.

'ಹಸಿರು ಭ್ರಾಂತಿ'ಯ ನೆಪದಲ್ಲಿ ರಾಸಾಯನಿಕಗೊಬ್ಬರ, ಕೀಟನಾಶಕ ಮತ್ತು ಕಳೆನಾಶಗಳ ವಿವೇಕರಹಿತ ಬಳಕೆಯಿಂದಾಗಿ ಅಮೂಲ್ಯ ಜೀವ-ಜಂತುಗಳು ವಿನಾಶಗೊಂಡಿವೆ. ಈ ಅಮೂಲ್ಯ ಜೀವ-ಜಂತುಗಳು ಪುನಃ ನಿರ್ಮಾಣವಾಗಬೇಕೆಂದರೆ ಮತ್ತೆ ನಮ್ಮ ಜಮೀನುಗಳಲ್ಲಿ ನಾಟಿ ಹಸುಗಳ ಸಗಣಿ-ಗಂಜಳ ಬಳಕೆಯಾಗಬೇಕು.



At this rate the projected figure for 2011 is 20
(Source: Livestock Census 2003, Dept.of Animal Husbandry, Govt.of India.)

ನಮ್ಮ ಜಮೀನನ್ನು ಬರಡು-ಬಂಜೆಯನ್ನಾಗಿಸಿರುವ, ಫಲವತ್ತತೆ ಮತ್ತು ಉತ್ಪಾದನೆಯನ್ನು ಕುಗ್ಗಿಸಿರುವ ರಾಸಾಯನಿಕ ಕೃಷಿಗೆ ಪರ್ಯಾಯ ಪರಿಹಾರವಾಗಿರುವುದು ನಮ್ಮ ನಾಟಿ ಹಸುಗಳ ಸಗಣಿ, ಗಂಜಳ ಮಾತ್ರವೆಂಬುದನ್ನು ಸುಭಾಷ್ ಪಾಳೇಕರರ ನೈಸರ್ಗಿಕ ಕೃಷಿ ವಿಧಾನ ತೋರಿಸಿಕೊಟ್ಟಿದೆ. ವಿಜ್ಞಾನ ಎಷ್ಟೇ ಮುಂದುವರೆದಿದ್ದರೂ ಇವುಗಳಿಗೆ ಸಮನಾದ ಅನ್ಯ ಪರಿಹಾರ ಮಾರ್ಗಗಳಿಲ್ಲವೆಂಬುದು ನಗ್ನಸತ್ಯ. ಈ ಹಿನ್ನೆಲೆಯಲ್ಲಿಯೇ ದೇಸಿ ಗೋವಂಶಗಳನ್ನು ಉಳಿಸಿಕೊಳ್ಳುವುದು, ಅವುಗಳ ವೃದ್ಧಿಯಾಗುವಂತೆ ನೋಡಿಕೊಳ್ಳುವುದು, ಅವುಗಳನ್ನು ನಮ್ಮ ಕೃಷಿಯಲ್ಲಿ ಬಳಸಿಕೊಳ್ಳುವುದು ಹಿಂದೆಂದಿಗಿಂತಲೂ ಇಂದು ಅತ್ಯಗತ್ಯವಾಗಿದೆ.

ಕೆಲವೇ ವರ್ಷಗಳ ಕೆಳಗೆ 70 ಕ್ಕಿಂತ ಅಧಿಕವಾಗಿದ್ದ ನಮ್ಮ ದೇಸಿ ಗೋವಂಶಗಳಲ್ಲಿ ಬಹುಪಾಲು ಗೋವಂಶಗಳು ಹೇಳಹೆಸರಿಲ್ಲದಂತೆ ಗತಿಸಿಹೋಗಿ ನಿರ್ನಾಮವಾಗಿವೆ. ಈಗ ನಮ್ಮಲ್ಲಿ ಉಳಿದಿರುವುದು ಕೇವಲ 33 ಬಗೆಯ ನಾಟಿ ಹಸುಗಳು.

ಸಂಪೂರ್ಣವಾಗಿ ಕೃಷಿ ಪ್ರಧಾನ ದೇಶವಾಗಿರು[...] ನಮ್ಮ ಭಾರತ ಪಶುಸಂಪತ್ತಿನಲ್ಲಿ ಎಲ್ಲ ದೇಶಗಳಿಗಿಂ[...] ಹಿಂದುಳಿದಿದೆಯೆಂಬುದು ವಿಪರ್ಯಾಸಕರ ಸತ್ಯವಲ್ಲವೆ[...] ಇದು ಅಭಿವೃದ್ಧಿಗೆ ಮಾರಕವಲ್ಲವೆ?

ಭಾರತ ಸರ್ಕಾರದ ಪಶುಸಂಗೋಪನೆ ಇಲಾಖೆಯವರು 2003 ರಲ್ಲಿ ನಡೆಸಿರುವ ಪಶುಸಂಪತ್ತಿನ ಸಮೀಕ್ಷೆಯ ಪ್ರಕಾರ 1951 ರಲ್ಲಿ ಸಾವಿರ ಜನಸಂಖ್ಯೆಗೆ 430 ರಷ್ಟು ಪಶುಸಂಪತ್ತು ಇತ್ತು. 2001 ನೇ ಇಸವಿಯ ಹೊತ್ತಿಗೆ ಇದು 110 ಕ್ಕೆ ಇಳಿದಿದ[...] ಇನ್ನು 5 ವರ್ಷಗಳಲ್ಲಿ ಇದು 20 [...] ಇಳಿಯಲಿದೆಯೆಂಬುದು ತಜ್ಞ[...] ಅಂದಾಜು. ಹೀಗಾದರೆ ನಮ್ಮ ಕೃ[...] ಬದುಕಿನ ಗತಿ ಏನು?

ಗೋರಾಜಕಾರಣ ಮಾಡುತ್ತ ಕೋಮು[...]ಗಳ ನಡುವೆ ಅಸಹನೆ ಹೆಚ್ಚಿಸುವವರಿಂದ ದೂರವಿದ್ದು[...] ಕೋಮುದಳ್ಳುರಿ ಸೃಷ್ಟಿಸುವ ಮತಾಂಧ ಫ್ಯಾಸಿಸ[...] ಶಕ್ತಿಗಳನ್ನು ಉಗ್ರವಾಗಿ ಖಂಡಿಸುತ್ತ, ಕೋಮು[...] ಸೌಹಾರ್ದತೆಯನ್ನು ಕಾಪಾಡುವುದು ಎಲ್ಲ ಪ್ರಜ್ಞಾವಂತರ[...] ಕರ್ತವ್ಯ ಎಂಬುದರಲ್ಲಿ ಎರಡು ಮಾತಿಲ್ಲ.

ಇದರೊಂದಿಗೆ ಧರ್ಮ, ಧೇವರು, ಮೂ[...] ಗ್ರಂಥಗಳಿಂದಾಚೆಗೆ ಬಂದು ನಮ್ಮ ಕೃಷಿಗೆ ಅಗತ್ಯ[...]ಗಿರುವ ನಾಟಿಹಸುಗಳ ತಳಿಗಳನ್ನೂ ಉಳಿಸಿಕೊಳ್ಳಬೇ[...]ರುವುದು ಇಂದಿನ ತುರ್ತಾಗಿದೆ.

-ಡಾ.ಎಂ.ಬಿ. ರಾಮಮೂರ್ತಿ
ಬೆಂಗಳೂರು

ಕಾನೂನು ರಾಷ್ಟ್ರಗಳ ತಿಳುವಳಿಕೆಗಳ ಮಧ್ಯೆ ಒಂದು ಸೇತುವೆಯನ್ನು ನಿರ್ಮಿಸುತ್ತದೆ -ಜರೋ ಮಾಯ್ಡ್

ದೇವರ ಚಿತ್ರದಲ್ಲಿ ನಟಿಸಿದ ನಂತರ ದೆವ್ವದ ಚಿತ್ರದಲ್ಲಿ ನಟಿಸಿದ್ದನ್ನು ನೆನಪಿಸಿಕೊಂಡರೆ ನನಗೆ ನಗು ಬರುತ್ತದೆ. ಆಶ್ಚರ್ಯವೂ ಆಗುತ್ತದೆ. ಅಂದಹಾಗೆ ಇಲ್ಲಿ ಹಲವು ವೈರುಧ್ಯಗಳನ್ನು ಗಮನಿಸಿ: 'ಶಿವಮೆಚ್ಚಿದ ಕಣ್ಣಪ್ಪ' ಚಿತ್ರ ನಿರ್ಮಾಣವಾಗುತ್ತಿದ್ದ ಸಂದರ್ಭದುದ್ದಕ್ಕೂ ಹಲವಾರು ಅವಾಂತರಗಳು, ಗಂಡಾಂತರಗಳು ನಡೆದವು. ಆದ್ದರಿಂದ ಇನ್ನು ಈ ದೆವ್ವದ ಚಿತ್ರದಲ್ಲಿ ನಟಿಸುವಾಗ ಇನ್ನೆಷ್ಟು ಅಡೆತಡೆಗಳು ಎದುರಾಗುತ್ತವೋ ಎಂದು ಹೆದರಿದ್ದೆ. ಆದರೆ ಆಗಿದ್ದೇ ಬೇರೆ!

'ಸಂಯುಕ್ತ' ಚಿತ್ರ ನನ್ನ ಪಾಲಿಗೆ ಒಂದು ಪಿಕ್ನಿಕ್‌ನಂತೆ ನಡೆಯಿತು. ಈ ಚಿತ್ರ ಯಾವಾಗ ಶುರುವಾಯಿತು, ಯಾವಾಗ ಮುಗಿಯಿತು ಎಂದು ನಮಗ್ಯಾರಿಗೂ ಗೊತ್ತೇ ಆಗಲಿಲ್ಲ. ಈ ಚಿತ್ರದಲ್ಲಿ ನಾಯಕನಟನಾಗಿ ನಟಿಸಿದ ನಾನು, ಬಾಲು ಮತ್ತು ಗುರು ಒಂದೇ ವಯಸ್ಸಿನವರಾಗಿದ್ದರಿಂದ ಚಿತ್ರೀಕರಣದ ಸೆಟ್‌ನಲ್ಲಿ ಸಖತ್ ಮಜಾ ಉಡಾಯಿಸುತ್ತಿದ್ದೆವು. ನಮ್ಮೊಂದಿಗೆ ನಾಯಕಿಯಾಗಿ ರಾಜಶೇಖರ ಮೂರ್ತಿಯವರ ಮೊಮ್ಮಗಳು ವೀಣಾ ಕೂಡಾ ಚೆನ್ನಾಗಿ ಹೊಂದಿಕೊಂಡಿದ್ದರು. ಒಟ್ಟಾರೆಯಾಗಿ ಹೇಳುವುದಾದರೆ ಇದು ಯಂಗ್‌ಬ್ಲಡ್ ಚಿತ್ರವಾಗಿದ್ದರಿಂದ ನಾವು ಸಾಕಷ್ಟು ತಮಾಷೆ ಮತ್ತು ಕೀಟಲೆ ಮಾಡುತ್ತಿದ್ದೆವು.

ನನ್ನ ತಮಾಷೆಗೆ ಇನ್ನೊಂದು ಕಾರಣವೆಂದರೆ ನಾನು 'ಶಿವಮೆಚ್ಚಿದ ಕಣ್ಣಪ್ಪ' ಚಿತ್ರ ಮಾಡುವಾಗ ತುಂಬಾ ಗಂಭೀರವಾಗಿರುತ್ತಿದ್ದೆ. ಆ ಪಾತ್ರಕ್ಕಾಗಿ ನಾನು ಧ್ಯಾನ ಮತ್ತು ಯೋಗವನ್ನು ಮಾಡುತ್ತಿದ್ದೆ. ಅಲ್ಲಿ ಎಲ್ಲವನ್ನೂ ನನ್ನ ಮುಖಭಾವ ಮತ್ತು ಕಣ್ಣುಗಳಲ್ಲಿ ತೋರಿಸಬೇಕಾಗಿತ್ತು. ಅದರ ಜೊತೆಗೆ ಅಪ್ಪಾಜಿಯೂ ಕೂಡ ನಮ್ಮ ಜೊತೆ ಸೆಟ್‌ನಲ್ಲಿ ಇರುತ್ತಿದ್ದುದರಿಂದ ನನ್ನ ತುಂಟಾಟಗಳಿಗೆ ನಾನೇ ಬ್ರೇಕ್ ಹಾಕಿಕೊಳ್ಳಬೇಕಾಯಿತು. ಇದೆಲ್ಲಕ್ಕಿಂತ ಮುಖ್ಯವಾಗಿ ಇದು ಅಪ್ಪಾಜಿ ನಟಿಸಿದ ಮೊದಲನೇ ಚಿತ್ರ. ಹೀಗಾಗಿ ಆ ಪಾತ್ರಕ್ಕೆ ನಾನು ನ್ಯಾಯ ದೊರಕಿಸಿ ಕೊಡಬೇಕು ಎಂಬ ಪ್ರಜ್ಞೆ ನನ್ನಲ್ಲಿ ಸದಾ ಜಾಗೃತವಾಗಿರುತ್ತಿತ್ತು.

ಆದರೆ ಅಂತಹ ನಿರ್ಬಂಧಗಳು 'ಸಂಯುಕ್ತ' ಚಿತ್ರದ ಸಂದರ್ಭದಲ್ಲಿ ಇರಲಿಲ್ಲ. ಇದು 'ಮುಸುಕು' ಎಂಬ ಕಾದಂಬರಿ ಆಧಾರಿತ ಚಿತ್ರ. ಇದನ್ನು ನಿರ್ದೇಶಿಸಿದವರು ಚಂದ್ರಶೇಖರ ಶರ್ಮಾ. ಅವರು ಅಪ್ಪಾಜಿಯ ಅನೇಕ ಚಿತ್ರಗಳಿಗೆ ಅಸಿಸ್ಟೆಂಟ್ ಡೈರೆಕ್ಟರ್ ಆಗಿ ಕೆಲಸ ಮಾಡಿದ್ದರು. ಹೀಗಾಗಿ ಅವರು ನನಗೆ ಬಾಲ್ಯದಿಂದಲೂ ಪರಿಚಿತರು. ಇದರ ಪರಿಣಾಮವಾಗಿ ನಮ್ಮ ತಮಾಷೆ ಮತ್ತು ಹಾಸ್ಯಪ್ರಜ್ಞೆಯನ್ನು ಅವರೂ ಕೂಡ ಕ್ರೀಡಾ ಮನೋಭಾವದಿಂದ ಸ್ವೀಕರಿಸುತ್ತಿದ್ದರು. ಈ ಚಿತ್ರದ ಇನ್ನೊಂದು ವಿಶೇಷವೆಂದರೆ, ಸಿಂಗೀತಂ ಶ್ರೀನಿವಾಸ್ ಇದಕ್ಕೆ ಸಂಗೀತ ನಿರ್ದೇಶನ ಮಾಡಿದ್ದು. ಅಷ್ಟೇ ಅಲ್ಲ ಚಿತ್ರಕತೆಯಲ್ಲಿ ಕೂಡ ಸಾಕಷ್ಟು ಕೈಯಾಡಿಸಿದ್ದರು.

'ಸಂಯುಕ್ತ' ಚಿತ್ರ ಬಿಡುಗಡೆಗೊಂಡಾಗ ಗಾಂಧಿನಗರದವರಿಗೆ ಈ ಸಿನಿಮಾದ ಬಗ್ಗೆ ಸ್ವಲ್ಪ ಅನುಮಾನಗಳಿದ್ದವು. ಇದಕ್ಕೆ ಕಾರಣ 'ಶಿವಮೆಚ್ಚಿದ ಕಣ್ಣಪ್ಪ' ನೂರು ದಿನಗಳ ಕಾಲ ಓಡದಿದ್ದದ್ದು. ಆದರೆ ನನಗೆ ಮಾತ್ರ ಈ ಸಸ್ಪೆನ್ಸ್ ಥ್ರಿಲ್ಲರ್ ಬಗ್ಗೆ ಸಿಕ್ಕಾಪಟ್ಟೆ ಕಾನ್ಫಿಡೆನ್ಸ್ ಇತ್ತು. ಚಿತ್ರ ಬಿಡುಗಡೆಯಾದ ನಂತರ ನನ್ನ ನಿರೀಕ್ಷೆಯೇ ಸರಿಯಾಯಿತು. ಹನ್ನೆರಡು ಥಿಯೇಟರುಗಳಲ್ಲಿ ಈ ಚಿತ್ರ ಶತದಿನೋತ್ಸವವನ್ನು ಕಂಡಿತು.

ಈ ಚಿತ್ರದ ಮುಖಾಂತರ ಖಳನಾಯಕನಾಗಿ ಆಗಲೇ ದೊಡ್ಡ ಹೆಸರು ಮಾಡಿದ್ದ ಅವಿನಾಶ್ ಎಂಬ ಅಪ್ಪಟ ಪ್ರತಿಭಾವಂತ ನಮ್ಮ ಬ್ಯಾನರಿಗೆ ಸೇರಿಕೊಂಡರು. ಅವಿನಾಶ್ ಅವರನ್ನು ಈ ಚಿತ್ರಕ್ಕೆ ಹಾಕಲೇಬೇಕು ಎಂದು ವರದಪ್ಪನವರು ಹಠ ಮಾಡಿದ್ದರು. ಅದಕ್ಕೆ ಕಾರಣ,

'ಸಂಯುಕ್ತ' ಚಿತ್ರ ಬಿಡುಗಡೆಗೊಂಡಾಗ ಗಾಂಧಿನಗರದವರಿಗೆ ಈ ಸಿನಿಮಾದ ಬಗ್ಗೆ ಸ್ವಲ್ಪ ಅನುಮಾನ ಗಳಿದ್ದವು. ಇದಕ್ಕೆ ಕಾರಣ 'ಶಿವಮೆಚ್ಚಿದ ಕಣ್ಣಪ್ಪ' ನೂರು ದಿನಗಳ ಕಾಲ ಓಡದಿದ್ದದ್ದು. ಆದರೆ ನನಗೆ ಮಾತ್ರ ಈ ಸಸ್ಪೆನ್ಸ್ ಥ್ರಿಲ್ಲರ್ ಬಗ್ಗೆ ಸಿಕ್ಕಾಪಟ್ಟೆ ಕಾನ್ಫಿಡೆನ್ಸ್ ಇತ್ತು.



ಆತಂಕವಾಗಿತ್ತು. ನಾನು ಕಾದಂಬರಿ ಆಧಾರಿತ ಚಿತ್ರಗಳಿಂದ ಬಂದವನು. ಪಂಚೆ ಉಟ್ಟುಕೊಂಡು ಗ್ರಾಮೀಣ ನಾಯಕನಾಗಿ ಗೆದ್ದವನು. ಈ ಮಧ್ಯೆ ಪೌರಾಣಿಕ ಪಾತ್ರದಲ್ಲೂ ಕಾಣಿಸಿಕೊಂಡವನು. ಈಗ ದಿಢೀರನೆ ಲಾಜಿಕ್ಕಿಲ್ಲದ ಈ ಆ್ಯಂಗ್ರಿ ಯಂಗ್‌ಮನ್ ಪಾತ್ರವನ್ನು ಜನ ಸ್ವೀಕರಿಸುತ್ತಾರೆಯೇ? ಎಂದು ನನ್ನನ್ನು ನಾನೇ ಪ್ರಶ್ನಿಸಿಕೊಂಡಿದ್ದೆ. ಆದರೆ ನನ್ನ ಜಾಯಮಾನ ನಿಮಗೆ ಗೊತ್ತಲ್ಲ? ನಾನು ಎಂದೂ ನನ್ನ ಸಂಶಯಗಳನ್ನು ಬೇರೆಯವರೊಂದಿಗೆ ಹಂಚಿಕೊಂಡವನಲ್ಲ,

ಸಂಯುಕ್ತದಿಂದ ರಣರಂಗದವರೆಗೆ


ಅವಿನಾಶ್ ಪ್ರತಿಭೆ. He dosen't look villanish ಆದರೆ ಅವರು ಒಂಥರಾ ಸಾಫ್ಟ್ ವಿಲನ್. ಈ ಕಾರಣದಿಂದ ಅವಿನಾಶ್ ನನ್ನ ಅಪ್ಪಾಜಿ ಮತ್ತು ವರದಪ್ಪನವರ ಮನಸ್ಸನ್ನು ಗೆದ್ದಿದ್ದರು. ಅವರು ಮತ್ತು ರೂಪಾ ಈ ಚಿತ್ರದಲ್ಲಿ ಜೋಡಿಯಾಗಿ ನಟಿಸಿದರು.

'ಸಂಯುಕ್ತ' ಗೆದ್ದಮೇಲೆ ಮುಂದೇನು ಎಂದು ನಾನು ಆಲೋಚಿಸಲು ಸಮಯವೇ ಇರಲಿಲ್ಲ. ಇದಕ್ಕೆ ಕಾರಣವೇನು ಗೊತ್ತೆ? ಅಷ್ಟೊತ್ತಿಗೆಲ್ಲಾ ನಿರ್ದೇಶಕ ಸೋಮಶೇಖರ್‌ರವರು ಅಮ್ಮನ ಬಳಿ ಬಂದು 'ಅಕ್ಕಾ... ಶಿವಣ್ಣನನ್ನು ಹಾಕಿಕೊಂಡು ಸಿನಿಮಾ ಮಾಡಬೇಕೆಂದಿದ್ದೀನಿ. ಒಂದು ಕಥೆಯಿದೆ. ಅದು ಆ್ಯಕ್ಷನ್ ಫಿಲಂ' ಎಂದು ಹೇಳಿದ್ದರು. ಸೋಮಶೇಖರ್ ಕೂಡಾ ನನ್ನ ಅಪ್ಪಾಜಿಯ ಅನೇಕ ಚಿತ್ರಗಳನ್ನು ಮಾಡಿ ಯಶಸ್ವಿ ನಿರ್ದೇಶಕ ಎಂದೆನಿಸಿಕೊಂಡವರು. ಅವರ ನಿರ್ದೇಶನದ 'ಶಂಕರ್‌ಗುರು' ಚಿತ್ರ ಬಾಕ್ಸಾಫೀಸಿನಲ್ಲಿ ದಾಖಲೆ ನಿರ್ಮಿಸಿತ್ತು. ಈ ಎಲ್ಲ ಕಾರಣದಿಂದ ಸೋಮಶೇಖರ್ ಮೇಲೆ ಅಮ್ಮನಿಗೆ ವಿಶೇಷವಾದ ವಿಶ್ವಾಸವಿತ್ತು. ಹೀಗಾಗಿ ಆ್ಯಕ್ಷನ್ ಫಿಲಂಗೆ ಓಕೆ ಎಂದರು. ಆಗ ಆರಂಭವಾದದ್ದೇ 'ರಣರಂಗ'!

"ಇದು ಔಟ್ ಅಂಡ್ ಔಟ್ ಕಮರ್ಷಿಯಲ್ ಚಿತ್ರ. ಇದರಲ್ಲಿ ಲಾಜಿಕ್ಕೂ ಇರುತ್ತೆ ಜೊತೆಗೆ ಇಲ್ಲಾಜಿಕ್ಕೂ ಇರುತ್ತೆ" ಎಂದಿದ್ದ ನಿರ್ದೇಶಕ ಸೋಮಶೇಖರ್‌ರವರು "ಈ ಚಿತ್ರದ ಮುಖಾಂತರ ನಿನ್ನನ್ನು ಆ್ಯಂಗ್ರಿ ಯಂಗ್‌ಮನ್ ಆಗಿ ತೋರಿಸುತ್ತೇನೆ" ಎಂದಿದ್ದರು ಕೂಡ.

ಈ ಕಾರಣದಿಂದ ಚಿತ್ರದ ಆರಂಭದಲ್ಲಿ ನನಗೆ

ನಿರೂಪಣೆ: ಸದಾಶಿವ ಶೆಣೈ



ಚರ್ಚಿಸಿದವನೂ ಅಲ್ಲ. ಅದೇನಿದ್ದರೂ ನನ್ನ ಹೃದಯದಲ್ಲಿ ಮಂಥನವಾಗುತ್ತಲೇ ಇರಬೇಕು. ಆದರೂ ನಾನು ನನ್ನನ್ನು ಚಿತ್ರದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡೆ.

ಆ ಸಂದರ್ಭದಲ್ಲಿ ಈ ಚಿತ್ರದ ಬಗ್ಗೆ ಗಾಂಧಿನಗರದಲ್ಲಿ ಒಳ್ಳೆಯ ಮಾತು ಮತ್ತು ನಿರೀಕ್ಷೆ ಹುಟ್ಟಲು ಶುರುವಾಯಿತು. ಸೋಮಶೇಖರ್ ಯಶಸ್ವಿ ಕಮರ್ಷಿಯಲ್ ನಿರ್ದೇಶಕರಾಗಿದ್ದು, ನಾನು ಯಶಸ್ವಿ ಹೀರೋ ಆಗಿದ್ದು ಈ ಹೈಪ್‌ಗೆ ಕಾರಣವಾಗಿದ್ದಿರಬಹುದು. ಇವೆರಡರ ಜೊತೆಗೆ ಹಂಸಲೇಖಾ ಮೊದಲ ಬಾರಿಗೆ ನಮ್ಮ ಸಂಸ್ಥೆಯ ಚಿತ್ರಕ್ಕೆ ಸಂಗೀತ ನಿರ್ದೇಶಕರಾಗಿ ಬಂದಿದ್ದರಿಂದ ಆಡಿಯೋ ವಲಯದಲ್ಲಿ ಕೂಡಾ ದೊಡ್ಡ ನಿರೀಕ್ಷೆ ಸೃಷ್ಟಿಯಾಯಿತು. ಹಂಸಲೇಖಾ ಅಂಕಲ್ ಅಷ್ಟೊತ್ತಿಗೆಲ್ಲಾ ಅತ್ಯಂತ ಜನಪ್ರಿಯ ಸಂಗೀತ ನಿರ್ದೇಶಕ ಎಂಬ ಪಟ್ಟವನ್ನು ಅಲಂಕರಿಸಿದ್ದರಿಂದ ಈ ನಿರೀಕ್ಷೆ ಸಹಜವಾಗಿತ್ತು. ಈ ಎಲ್ಲ ಅಂಶಗಳಲ್ಲದೆ, ಸ್ವಲ್ಪ ಗ್ಯಾಪ್ ನಂತರ ನಾನು ಮತ್ತು ಸುಧಾರಾಣಿ ಮತ್ತೊಮ್ಮೆ ಜೊತೆಯಾಗಿ ನಟಿಸುತ್ತಿದ್ದದ್ದೂ ಕುತೂಹಲವನ್ನು ಹೆಚ್ಚಿಸಿತ್ತು.

ಅಷ್ಟೊತ್ತಿಗೆಲ್ಲಾ ಶಿವಣ್ಣ-ಸುಧಾರಾಣಿ ಬೆಸ್ಟ್ ಪೇರ್ ಎಂದು ಪ್ರೇಕ್ಷಕರೂ, ಉದ್ಯಮದವರೂ ತೀರ್ಮಾನಿಸಿದ್ದರು. ನಾವಿಬ್ಬರೂ ಒಟ್ಟಿಗೆ ನಟಿಸಿದರೆ ಆ ಚಿತ್ರ ಗೆಲ್ಲುವುದು ಗ್ಯಾರಂಟಿ ಎಂದೂ ಜನ ಹೇಳಲಾರಂಭಿಸಿದರು. ಅಷ್ಟೇ ಅಲ್ಲ ನನ್ನ ಮತ್ತು ಸುಧಾರಾಣಿ ಜೋಡಿಯನ್ನು ಅಪ್ಪಾಜಿ ಮತ್ತು ಭಾರತಿ ಜೋಡಿಗೆ ಹೋಲಿಸಲು ಶುರುಮಾಡಿದರು.

ಈ ಚಿತ್ರದ ಇನ್ನೊಂದು ವಿಶೇಷತೆ ಯಾವುದೆಂದರೆ, ಆ ಕಾಲಕ್ಕೆ ಇದು ಸ್ವಲ್ಪ ದುಬಾರಿ ಬಜೆಟ್ಟಿನ ಚಿತ್ರವಾಗಿತ್ತು. ನಮ್ಮ ಸಂಸ್ಥೆಯಲ್ಲಿ ನಾವು ಯಾವುದೇ ಸಿನಿಮಾಕ್ಕೆ ಅಷ್ಟೊಂದು ಹಣವನ್ನು ಸುರಿದಿರಲಿಲ್ಲ. ಹೀಗಾಗಿ ನಾನು ತುಂಬ ಜವಾಬ್ದಾರಿ ಮತ್ತು ಆತಂಕದಿಂದಲೇ ಈ ಪಾತ್ರವನ್ನು ನಿರ್ವಹಿಸಿದೆ.

'ರಣರಂಗ'ದಲ್ಲಿ ನಾನು ಹಿನ್ನೆಲೆ ಗಾಯಕನಾಗಿ ಎಂಟ್ರಿಮಾಡಿದ್ದು ಇನ್ನೊಂದು ವಿಶೇಷ. ನಾನು ಯಾವತ್ತಾದರೂ ಹಿನ್ನೆಲೆ ಗಾಯಕನಾಗುತ್ತೇನೆಂದು ಕನಸು ಕಂಡವನೇ ಅಲ್ಲ. ಆದರೆ ಹಂಸಲೇಖಾ ಅಂಕಲ್ ನನ್ನಲ್ಲಿ ಹುದುಗಿದ್ದ ಪ್ರತಿಭೆಯನ್ನು ಗುರುತಿಸಿ ನಾನು ಹಾಡುವಂತೆ ಮಾಡಿದ್ದರು. 'ಐ ಲವ್ ಯೂ....' ಎಂಬ ಹಾಡನ್ನು ಅವರು ನನ್ನಿಂದ ಹಾಡಿಸಲು ಒಂದು ಕಾರಣವೂ ಇತ್ತು.

ವಾಸ್ತವವಾಗಿ ಶಿವಪ್ಪಕಾಯ್ದದಲ್ಲಿದ್ದ ನನ್ನ ಅಂಕಲ್ ಶ್ರೀನಿವಾಸ್ ಅವರ ಫ್ರೆಂಡ್ ಪ್ರಶಾಂತ್ ಅವರ ಹೆಂಡತಿಗೆ ತುಂಬಾ ಒಳ್ಳೆಯ ಧ್ವನಿ ಇದೆ. ಅವರಿಗೆ ಹಾಡಲು ಒಂದು ಅವಕಾಶ ಕೊಡಿ ಎಂದು ಕೇಳಲು ಹಂಸಲೇಖಾ ಅವರು ರೆಕಾರ್ಡಿಂಗ್‌ನಲ್ಲಿದ್ದ ಸ್ಟುಡಿಯೋಗೆ ಹೋಗಿದ್ದೆ. ನನ್ನ ಮಾತಿಗೆ ಓಗೊಟ್ಟ ಹಂಸಲೇಖಾ ಅವರು "ಕರ್ಕೊಂಡ್ ಬನ್ನಿ. ಧ್ವನಿ ಚೆನ್ನಾಗಿದ್ರೆ ಹಾಡಿಸೋಣ" ಎಂದರು. ಹಾಗೆ ಹೇಳಿದ ನಂತರ ಅವರು ರಾಗ ಸಂಯೋಜಿಸುತ್ತಿದ್ದ 'ಐ ಲವ್ ಯೂ....' ಹಾಡಿಗೆ ಅವರ ತಂಡ ಹಾಡುತ್ತಿದ್ದಾಗ "ಅವರೊಂದಿಗೆ ನಾನೊಮ್ಮೆ ಹಮ್ಮಿಂಗ್ ಮಾಡಲೇ?" ಎಂದು ಅವರನ್ನು ತಮಾಷೆಗಾಗಿ ಕೇಳಿದೆ. ಅವರು "ಓಕೆ" ಅಂದರು. ನಾನು ಹತ್ತು ಜನರೊಂದಿಗೆ "ಐ ಲವ್ ಯೂ..." ಅಂದೆ ಅಷ್ಟೇ....! ಸ್ಟುಡಿಯೋದಿಂದ ಹೊರಬಂದ ಹಂಸಲೇಖಾ ಅವರು "ಶಿವಣ್ಣ... ಈ ಹಾಡನ್ನು ನೀನು ಹಾಡ್ತಿಯಾ, ಅಷ್ಟೇ" ಅಂದರು. ನಾನು "ಏ ಅಂಕಲ್... ನಾನು ಸುಮ್ನೆ ಹಾಡ್ದೆ, ತಮಾಷೆ ಮಾಡ್ಬೇಡಿ" ಎಂದು ಹೇಳಿದೆ. "ನಿನ್ನ ವಾಯ್ಸ್ ಎಷ್ಟು ಚೆನ್ನಾಗಿದೆ ಗೊತ್ತಾ? ಕೇಳು.." ಎಂದು ಆಗಲೇ ರೆಕಾರ್ಡ್ ಮಾಡಿದ್ದ ನನ್ನ ವಾಯ್ಸ್‌ಅನ್ನು ನನ್ನ ಮುಂದಿಟ್ಟರು. ಅಲ್ಲಿಗೆ 'ಐ ಲವ್ ಯೂ....' ಎಂದು ಹೇಳುತ್ತಾ ನಾನು ಹಿನ್ನೆಲೆ ಗಾಯಕನಾದೆ.

'ರಣರಂಗ' ಬಿಡುಗಡೆಯಾಯಿತು. ಅಪ್ಪಾಜಿ ನನ್ನ ಜೊತೆ ಅಪರ್ಣಾ ಥಿಯೇಟರಿಗೆ ಸಿನಿಮಾ ನೋಡಲು ಬಂದರು. ನಾನು ಆ್ಯಂಗ್ರಿ ಯಂಗ್‌ಮನ್ ಪಾತ್ರದಲ್ಲಿ ಹೇಗೆ ಕಾಣಿಸಿಕೊಂಡಿದ್ದೆ? ಎಂಬ ಕುತೂಹಲ ಅವರಿಗೂ ಇತ್ತು. ನಾನು ಮತ್ತು ಅಪ್ಪಾಜಿ ಅಪರ್ಣಾಗೆ ಬರುವ ಸುದ್ದಿ ಹೇಗೆ ಬಹಿರಂಗವಾಯಿತೋ ಗೊತ್ತಿಲ್ಲ, ಮೆಜೆಸ್ಟಿಕ್ ವಲಯದಲ್ಲಿ ಟ್ರಾಫಿಕ್ ಬಂದ್ ಆಗಿಬಿಟ್ಟಿತು. ಆನಂದರಾವ್ ಸರ್ಕಲ್ಲಿನಿಂದ ಅಪರ್ಣಾ ಥಿಯೇಟರ್ ತನಕ ಜನಜಂಗುಳಿಯೇ ಸೇರಿತು. ಜನರನ್ನು ಮತ್ತು ಟ್ರಾಫಿಕ್‌ಅನ್ನು ಹತೋಟಿಗೆ ತರಲು ಪೊಲೀಸರು ಹರಸಾಹಸ ನಡೆಸುತ್ತಿದ್ದರು. ಆ ಸಂತೆಯ ನಡುವೆಯೂ ನಾವಿಬ್ಬರೂ ಕಾರಿನಲ್ಲಿ ಕುಳಿತು ಅಪರ್ಣಾ ಕಡೆಗೆ ಹೋಗುತ್ತಿದ್ದುದು ಅದೃಷ್ಟವಶಾತ್ ಯಾರಿಗೂ ಗೊತ್ತಾಗಲಿಲ್ಲ. "ಏನ್ ಕಂದಾ... ಇಷ್ಟೊಂದು ಜನ ಸೇರಿದ್ದಾರೆ.... ಹೊಸ ಅವತಾರದಲ್ಲಿ ನಿನ್ನನ್ನು ನೋಡಲು ಜನ ಹೇಗೆ ಸೇರಿದ್ದಾರೆ ನೋಡು" ಎಂದು ಅಪ್ಪಾಜಿ ನನಗೆ ಹುರಿದುಂಬಿಸಿದರು. ಇನ್ನೇನು ನಾವು ಅಪರ್ಣಾ ಥಿಯೇಟರ್ ತಲುಪಬೇಕು ಆಗ ಕಾರಿನಲ್ಲಿ ನಾವಿಬ್ಬರೂ ಇದ್ದುದು ಅಲ್ಲಿನ ಅಭಿಮಾನಿಗಳಿಗೆ ಗೊತ್ತಾಗಿಬಿಟ್ಟಿತು. ಆಗ ಏನಾಯಿತು ಗೊತ್ತೇ?

(ಮುಂದುವರೆಯುತ್ತದೆ)



ಅರ್ಧಕರ್ಧ ಕಟ್!

'ಈ ರಾಜೀವ್....' ಎಂಬ ಅರ್ಥರಹಿತ ಟೈಟಲ್ ಚಿತ್ರವನ್ನು ನೋಡಿ ಸುಸ್ತಾದ ಸೆನ್ಸಾರ್‌ನವರು ಆರು ಸಾವಿರ ಅಡಿ ರೀಲ್ ಕಟ್ ಮಾಡಲು ಹೇಳಿದ್ದಾರೆ ಎಂಬುದನ್ನೂ 'ಶ್ರೀವತ್ಸ' ಪ್ರಚಾರಕ್ಕೆ ಬಳಸಿಕೊಳ್ಳಲು ನೋಡುತ್ತಿದ್ದಾನೆಯೇ?

ಸಾಮಾನ್ಯವಾಗಿ ಸಿನಿಮಾಗಳಿರುವುದೇ 12 ಸಾವಿರ ಅಡಿಗಳಷ್ಟು ಉದ್ದ. ಅದರಲ್ಲಿ ಅರ್ಧಕರ್ಧ ಗಬ್ಬಾಗಿದೆಯೆಂದರೆ ಉಳಿದದ್ದಾದರೂ ಏನು? 'ರಂಭಾ'ಳಿಗೆ ಕಾಂಪೀಟ್ ಮಾಡಲೂ ಅಯೋಗ್ಯವಾಗಿದೆಯಂತೆ 'ಈ ರಾಜೀವ್....!


ಎಚ್ಚರಿಕೆ: ಇದು ಚಿನ್ನದ ಬೇಟೆ!

'ತೆನಾಲಿರಾಮ' ಎಂಬ ಕಾಮಿಡಿ ಮೂವಿ ಜಗ್ಗೇಶ್ ಕಾರಣದಿಂದ ಒಂದಿಷ್ಟು ಪ್ರೇಕ್ಷಕರನ್ನು ಸೆಳೆಯುತ್ತಿದೆ. ತಮಿಳು, ತೆಲುಗು ಮುಗಿಸಿ ಇಲ್ಲಿಗೆ ಬಂದಿರುವ 'ತೆನಾಲಿರಾಮ'ನನ್ನು ಎತ್ತಿ ಹಿಡಿಯಲು ಥಿಯೇಟರ್‌ಗಳಲ್ಲಿ ಅದೃಷ್ಟವಂತರಿಗೆ ಚಿನ್ನ ನೀಡುತ್ತಿದ್ದಾರೆ. ಟಿವಿಗಳಲ್ಲಿನ 'ಬಾಳೆ ಬಂಗಾರ', 'ಬಂಗಾರದ ಬೇಟೆ' ಕಾರ್ಯಕ್ರಮಗಳಲ್ಲಿ ... ಗ್ರಾಂ ಚಿನ್ನ ಗೆದ್ದವರು 6 ತಿಂಗಳು ಅಡ್ಡಾಡಿ, 10 ಗ್ರಾಂ ಚಿನ್ನದಷ್ಟು ಹಣ ಖರ್ಚು ಮಾಡಿ ಸುಸ್ತಾಗಿದ್ದಾರೆ. ಈಗ 'ತೆನಾಲಿರಾಮ'ನೂ ಚಿನ್ನದ ಬೇಟೆಗೆ ಬಂದಿದ್ದಾನೆ ಎಚ್ಚರಿ!



'ಲಂಚ್' ಸಾಮ್ರಾಜ್ಯ!

ಇದು 'ಲಂಚ ಸಾಮ್ರಾಜ್ಯ'ದ ಸ್ಟಿಲ್ಲು. ಲಂಚದ ವಿರುದ್ಧ ಧ್ವನಿ ಎತ್ತುವ ಘೋರ, ಭಯಂಕರ ಕತೆಯ ಈ ಸಾಮ್ರಾಜ್ಯದಲ್ಲಿ ಹಿರಣ್ಣಯ್ಯರ ಜೊತೆ ವೆಂಕಟಾಚಲರೂ ಅಭಿನಯಿಸಿದ್ದಾರಂತೆ. 'ಲಂಚ ಸಾಮ್ರಾಜ್ಯ'ದಲ್ಲಿ 'ಲಂಚ್' ಕೂಡಾ ಇದೆ ಎನ್ನಲು ಇಲ್ಲಿರುವ ಪೋಸ್ಟರೇ ಸಾಕು. ಮೆಜೆಸ್ಟಿಕ್‌ನಲ್ಲಿ ರಾರಾಜಿಸುತ್ತಿರುವ ಈ ಪೋಸ್ಟರು ಚಿತ್ರದ ಹೂರಣವೇನೆಂಬುದನ್ನು, ಹೂರಣ ಎಷ್ಟೆಂಬುದನ್ನು ಹೇಳುತ್ತದಲ್ಲವೆ?



ಕಾನೂನಿನ ಅಂತಿಮ ಸ್ವರೂಪವು ಆ ಸಂದರ್ಭದ ರಾಜಕೀಯ ಅಂಶಗಳ ಮೇಲೆ ಅವಲಂಬಿತವಾಗಿರುತ್ತದೆ-ಗುಟರಿಡ್ಜ್

R.B.P. LANKESH, Kannada Weekly Price Rs. 10/- 3-1-2007 RNI No. KARKAN2005/14648 Regd.No.KA/BG(S)/2036/20



ಕನ್ನಡದ ಹೂ ತಮಿಳರ ಮುಡಿಗೆ!

ಕನ್ನಡ ಚಿತ್ರರಂಗದ ಯಶಸ್ವಿ ನಾಯಕಿ ರಮ್ಯಾ ಕನ್ನಡದಿಂದ ದೂರವಾಗಿ ತಮಿಳು ಚಿತ್ರರಂಗದಲ್ಲಿ ಹೊಸವರ್ಷಕ್ಕೆ ಮೊಕ್ಕಾಂ ಹೂಡುವ ಸುದ್ದಿ ಕೇಳಿಬರುತ್ತಿದೆ. ಇದು ಆಕೆಯ ಅಭಿಮಾನಿಗಳಿಗೆ ಸಂತೋಷ ನೀಡಿದ್ದರೆ, ಕನ್ನಡ ಸಿನಿಮಾ ನಿರ್ಮಾಪಕರಲ್ಲಿ ಆತಂಕಮೂಡಿಸಿದೆ. "ಊರಿಗೊಬ್ಬಳೇ ಪದ್ಮಾವತಿ" ಎಂಬಂತೆ ಕನ್ನಡಕ್ಕಿದ್ದ ಒಬ್ಬಳೇ ನಾಯಕಿ ಕೂಡ ತಮಿಳಿಗೆ ಹೋದರೆ ನಾವೇನು ಮಾಡುವುದು ಎಂಬುದೇ ಅವರ ಆತಂಕಕ್ಕೆ ಕಾರಣವಾಗಿದೆ.

ತಮಿಳಿನ ಖ್ಯಾತ ನಿರ್ದೇಶಕ ಗೌತಮ್ ಮೆನನ್ ಅವರ ಹೊಸ ಚಿತ್ರಕ್ಕೆ ನಾಯಕಿಯಾಗಿ ಆಯ್ಕೆಯಾಗಿರುವ ರಮ್ಯ ಅದರಲ್ಲಿ ಜನಪ್ರಿಯ ನಟ ಸೂರ್ಯನೊಂದಿಗೆ ನಟಿಸುತ್ತಿದ್ದಾಳೆ. ರಮ್ಯಳ ಆಯ್ಕೆಯನ್ನು ಕುರಿತು ಅಲ್ಲಿನ ಸಿನಿಮಾ ಪತ್ರಿಕೆಗಳು "ಇದು ತಮಿಳಿಗೆ ಸಂದ ಲಾಭ-ಕನ್ನಡಕ್ಕೆ ಆದ ನಷ್ಟ" ಎಂದು ಬರೆಯಲಾರಂಭಿಸಿವೆ. ಇದರರ್ಥ ಈ ಚಿತ್ರ ಹಿಟ್ ಆದಮೇಲೆ ಆಕೆಗೆ ತಮಿಳಿನಲ್ಲಿ ಸಿಕ್ಕಾಪಟ್ಟೆ ಅವಕಾಶಗಳು ಸಿಗುವ ಸಾಧ್ಯತೆಯಿದೆ. ಯಾಕೆಂದರೆ ನಿರ್ದೇಶಕ ಗೌತಮ್ ಮೆನನ್‌ಗೆ ಅಲ್ಲಿ ಅಂತಹ ದೊಡ್ಡ ಸ್ಟಾರ್ ವ್ಯಾಲ್ಯೂ ಇದೆ.

ಆದರೆ ಈ ಬಗ್ಗೆ ರಮ್ಯಾ ಹೇಳುವುದು ಇಷ್ಟೇ: "ನಾನು ತಮಿಳಲ್ಲಿ ಸೆಟಲ್ ಆಗುವ ಪ್ರಶ್ನೆಯೇ ಇಲ್ಲ, ಕನ್ನಡದಲ್ಲಿ ಮುಂದಿನ ವರ್ಷ ಮೂರು ಚಿತ್ರಗಳಲ್ಲಿ ನಟಿಸಲು ಈಗಾಗಲೇ ಸಹಿ ಮಾಡಿದ್ದೇನೆ."

ಆದರೆ ಆಕೆಯ ತಮಿಳು ಚಿತ್ರ ಹಿಟ್ ಆದ ಮೇಲೆ ಕನ್ನಡದಲ್ಲಿ ಆಕೆ ತನ್ನ ಸಂಭಾವನೆಯನ್ನು ಹೆಚ್ಚಿಸುವ ಸಾಧ್ಯತೆ ಇರುವುದೇ ನಮ್ಮ ನಿರ್ಮಾಪಕರಲ್ಲಿ ಅಳುಕು ಮೂಡಿಸಿದೆ. ಈಗ ನಾಯಕ ನಟರ ಸಂಭಾವನೆಯಿಂದಾಗ ತಮಗೆ ನಷ್ಟವಾಗುತ್ತಿದೆ ಎಂದು ಗೊಣಗುತ್ತಿರುವ ನಿರ್ಮಾಪಕರು ಆಗ ನಟಿ ರಮ್ಯಳಿಂದ ತಮಗೆ ಭಾರಿ ಖರ್ಚಾಗುತ್ತಿದೆ ಎಂದು ದೂರಿದರೂ ಅಚ್ಚರಿ ಇಲ್ಲ ಅಲ್ಲವೇ.

ಹುಡುಗಿಯರ ಹಿಂದೆ ರೌಂಡ್!


'ತನನಂ ತನನಂ' ದಿನೇದಿನೇ ಮಹಿಳೆಯರು, ಕಾಲೇಜು ಯುವತಿಯರು, ಮಕ್ಕಳನ್ನು ಹೆಚ್ಚುಹೆಚ್ಚು ಆಕರ್ಷಿಸುತ್ತಿದೆ. ಈ ಕುರಿತು ಕವಿತಾ ಲಂಕೇಶರನ್ನು ಕೇಳಿದರೆ ಅವರು ನಗುತ್ತಾ ಹೇಳಿದರು: "ಕಾಲೇಜು ಕ್ಯಾಂಪಸ್ಸುಗಳಲ್ಲಿ ಹುಡುಗಿಯರ ಹಿಂದೆ ರೌಂಡ್ ಹೊಡೆಯುವ ಹುಡುಗರು, ಚಿತ್ರಮಂದಿರಕ್ಕೆ ಬರುವ ಮಹಿಳೆಯರು, ಹುಡುಗಿಯರ ಹಿಂದೆ ರೌಂಡ್ಸ್‌ಗೆ ಬಂದರೆ ಕಲೆಕ್ಷನ್ ಇನ್ನೂ ಹೆಚ್ಚಬಹುದು...."

ಬಂದಳು 'ನೀಲಿ...' ನಮಿತಾ!

ರವಿಚಂದ್ರನ್ ನಟಿಸಿದ ಚಿತ್ರಗಳು ಇತ್ತೀಚೆಗೆ ಸಾಲು ಸಾಲಾಗಿ ತೋಪಾಗುತ್ತಿರುವುದರಿಂದ ಈಗ ಬಿಡುಗಡೆಯಾಗಿರುವ 'ನೀಲಕಂಠ' ಚಿತ್ರದ ನಿರ್ದೇಶಕ ಸಾಯಿಪ್ರಕಾಶ್‌ರವರು, ರವಿಗಿಂತ ನಾಯಕ ನಟಿ ನಮಿತಾಳ ಮೇಲೆಯೇ ಹೆಚ್ಚು ನಂಬಿಕೆಯಿಟ್ಟಿರುವಂತಿದೆ. ಯಾಕೆಂದರೆ, ಈ ಚಿತ್ರದ ಪೋಸ್ಟರ್‌ಗಳು ಗರಂ ಆಗಿದ್ದ 'ಮಲ್ಲ'ನನ್ನು ಮೀರಿಸುವಂತಿವೆ!

ಹೇಳಿಕೇಳಿ ನಮಿತಾ ತಮಿಳು ಚಿತ್ರರಂಗದ 'ಸೆಕ್ಸ್ ಬಾಂಬ್'! ಟಿ. ರಾಜೇಂದ್ರನ್ ಎಂಬ ನಿರ್ದೇಶಕನ ಮೂಲಕ ಸಿನಿಮಾಕ್ಕೆ ಎಂಟ್ರಿ ಪಡೆದ ಈಕೆ ಮೊದಮೊದಲು ಒಂದೆರಡು ಸಿನಿಮಾಗಳಲ್ಲಿ ನಾಯಕಿಯಾಗಿ ನಟಿಸಿದ್ದರೂ ಆನಂತರ ಈಕೆಗೆ ದೊರೆತದ್ದು ಐಟಂ ಕುಣಿತಗಳೇ. ತಮಿಳಿನ ಸಿನಿಮಾಗಳಲ್ಲಿ ನಮಿತಾ ಅದ್ಯಾವ ಪರಿ ಬಟ್ಟೆ ಬಿಚ್ಚಿದ್ದಾಳೆಂದರೆ ಅಲ್ಲಿನ ಪಡ್ಡೆಗಳಿಗೆ ಈಕೆ ಕನಸಿನಲ್ಲೂ ಕಾಡುತ್ತಾಳಂತೆ.

ಅಂತಹ ನಮಿತಾ ರವಿಚಂದ್ರನ್ ಎದುರು ಹೀರೋಯಿನ್ ಎಂದರೆ 'ನೀಲಕಂಠ' ಎಷ್ಟು ಗರ್ಮಾ ಗರಂ ಆಗಿರಬೇಡ?! ಒಟ್ಟಾರೆ 'ನೀಲಕಂಠ'ನ ಕೈಚಳಕದಿಂದ 'ರಂಭಾ'ಳ ಕಲೆಕ್ಷನಿಗೆ ಕುತ್ತು ಗ್ಯಾರೆಂಟಿ!





ರಂಭಾ-ದಿ ಬೆಸ್ಟ್ ಮೂವಿ?


ಫುಲ್ ಸ್ವಿಂಗಲ್ಲವ್ವೆ 'ರಂಭಾ' ಎಂಬ ಸೆಕ್ಸ್‌ಬಾಂಬ್! ಪಕ್ಕಾ ಪೋಲಿ ಚಿತ್ರವಾದ 'ರಂಭಾ' 10 ನೇ ವಾರಕ್ಕೆ ಕಾಲಿಟ್ಟು ಗಾಂಧಿನಗರದ ಇನ್ನೊಂದು ಮುಖ ಪರಿಚಯಿಸಿದೆ.

ಇದರ ಬಗ್ಗೆ ವಿಮರ್ಶಕರ್‍ಯಾರೂ ಕೇರ್ ಮಾಡದ್ದನ್ನು ನೋಡಿದ 'ರಂಭಾ' ನಿರ್ದೇಶಕ ಹೌಸ್‌ಫುಲ್-ಗಿವ್ಸ್‌ಫುಲ್ ಎನ್ನೋ ಬದಲು 'ಉತ್ತಮ ಚಿತ್ರ' ಎಂದು ಜಾಹೀರಾತು ಜಡಿದೇ ಬಿಟ್ಟಿದ್ದಾನೆ!

ಬಪ್ಪರೆ ನಿರ್ದೇಶಕ!


ಪ್ರಕಾಶ್ ರೈಯ 'ಪೋಯಿ

ಪ್ರಕಾಶ್ ರೈ ನಿರ್ಮಿಸಿ, ನಟಿಸಿರುವ, ರೈ ಗುರು ಕೆ. ಬಾಲಚಂದರ್‌ರವರ ನಿರ್ದೇಶನವಿರುವ 'ಪೋಯಿ' ಬೆಂಗಳೂರಲ್ಲಿ ಕೇವಲ ಎರಡು, ಮೂರು ಥಿಯೇಟರಿನಲ್ಲಿ ಮಾತ್ರ ಬಿಡುಗಡೆ ಆಗಿರುವುದು ಬೇಜಾರಿನ ವಿಷಯ. ಅದೇ ಪ್ರಕಾಶ್ ರೈ ನಟಿಸಿದ ಬೊಮ್ಮರಿಲುನಂತಹ ಚಿತ್ರಗಳು ಏಳೆಂಟು ಥಿಯೇಟರ್‌ಗಳಲ್ಲಿ ಹೌಸ್‌ಫುಲ್ ಓಡುವಾಗ ರೈಯ ಸ್ವಂತ ಚಿತ್ರಕ್ಕೆ ಇನ್ನೊಂದಿಷ್ಟು ಥಿಯೇಟರ್‌ಗಳು ಸಿಗಬೇಕಿತ್ತಲ್ಲವೆ?



ಹಂಸ ಚಿತ್ರದಲ್ಲಿ ಶಿವು-ರಮ್ಯ-ರತ್ನಜ!

ಮೊನ್ನೆ ಮೊನ್ನೆಯಷ್ಟೇ ಮುದ್ದಿನ ಮಗಳು ನಂದಿನಿ ಐಟಂ ಸಾಂಗ್‌ನ್ನು ಹಾಡಿದ ಸಂತೋಷದಲ್ಲಿರುವ ಹಂಸಲೇಖ ಕ್ಯಾಂಪಿನಲ್ಲಿ ಈಗ ಹಬ್ಬದ ಸಡಗರ. ವಿಷಯವೇನೆಂದರೆ, ಹಂಸಲೇಖಾ ಈಗ ಶಿವರಾಜ್‌ಕುಮಾರ್-ರಮ್ಯಾ ಜೋಡಿಯ ಚಿತ್ರವನ್ನು ನಿರ್ಮಿಸಲು ಹೊರಟಿದ್ದಾರೆ. ಮಾರ್ಚ್ ತಿಂಗಳಲ್ಲಿ ಸೆಟ್ಟೇರಲಿರುವ ಈ ಚಿತ್ರದ ಹೆಸರು 'ಬಾಗಿನ'. ಇದನ್ನು ಹಂಸ್ ಶಿಷ್ಯ 'ನೆನಪಿರಲಿ' ಖ್ಯಾತಿಯ ರತ್ನಜ ನಿರ್ದೇಶಿಸಲಿದ್ದಾರೆ.



ಸುಮಾರು ಏಳೆಂಟು ವರ್ಷಗಳ ಹಿಂದೆ ತಮ್ಮ ಮನಗನನ್ನು ಹೀರೋ ಮಾಡುವ ಉದ್ದೇಶದಿಂದ ಸಿನಿಮಾ ನಿರ್ಮಾಣಕ್ಕೆ ಕೈಹಾಕಿದ್ದ ಹಂಸ್ 'ಸುಗ್ಗಿ' ಎಂಬ ಚಿತ್ರವನ್ನು ಮಾಡಿದ್ದರು. ಚಿತ್ರವೇನೋ ಚೆನ್ನಾಗಿ ಮೂಡಿಬಂದಿದೆ ಎಂದು ಹಲವರು ಹೇಳಿದ್ದರೂ ಗಾಂಧಿ ನಗರದಲ್ಲಿ ಅದನ್ನು ಖರೀದಿಸಲು ಯಾರೂ ಮುಂದೆ ಬಂದಿರಲಿಲ್ಲವಾದ್ದರಿಂದ ಹಂಸಲೇಖಾ ಒಂದು ಕೋಟಿ ರೂಪಾಯಿಗಳನ್ನು ಕಳೆದುಕೊಂಡಿದ್ದರು.



ಆದರೆ ಈ ಬಾರಿ ಹಂಸಲೇಖಾ ತುಂಬಾ ಸೇಫ್ ಆಟವನ್ನು ಆಡುತ್ತಿದ್ದಾರೆ. ಶಿವಣ್ಣ-ರಮ್ಯಾ-ರತ್ನಜ ಎಲ್ಲರೂ ಚಲಾವಣೆಯಲ್ಲಿರುವ ನಾಣ್ಯಗಳು.

ಪ್ರಥಮ ಚುಂಬನದಿಂದ ದಂತ ಭಗ್ನರಾದ ಹಂಸ್ ಈ ಬಾರಿ ನಗುವಂತಾಗಲಿ.

ಮಲ್ಲಿ ಪ್ರೇಮ....

ಒಂದು ಕಡೆ 'ಕಲ್ಲರಳಿ ಹೂವಾಗಿ' ಚಿತ್ರವಿರುವ ಥಿಯೇಟರ್ ಮುಂದೆ ಡೊಳ್ಳು ಕುಣಿತ ಏರ್ಪಡಿಸಿ ರಾಜ್ಯದ ಸಂಸ್ಕೃತಿ ಬಿಂಬಿಸುವ ಯತ್ನ ಮಾಡಲಾಗುತ್ತಿದ್ದರೆ, ಇನ್ನೊಂದು ಕಡೆ ಬಾಲಿವುಡ್‌ನ ಸೆಕ್ಸಿಡಾಲ್ ಮಲ್ಲಿಕಾ ಶೆರಾವತ್‌ಳನ್ನು ಬೆಂಗಳೂರಿಗೆ ಕರೆತಂದ ಪ್ರೇಮ್ ಗಲ್ಲಿಗಲ್ಲಿ ಸುತ್ತಿ ನ್ಯೂಸ್ ಮಾಡಿದ್ದಾರೆ. 'ಹಾಗೇಕೆ ಸುತ್ತಿದ್ದು?' ಎಂದರೆ 'ಪ್ರೀತಿ ಏಕೆ ಭೂಮಿ ಮೇಲಿದೆ?' ಅಂತಾ ಜನರನ್ನು ಕೇಳೋಕೆ ಹೋಗಿದ್ದೆವು ಅಂದ್ರಂತೆ! ಪಾಪ, ರಕ್ಷಿ ಪುಟ್ಟಿಗೆ ಅದೆಷ್ಟು ಬೇಜಾರಾಗಿದೆಯೊ?



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com, Printed at Rajhans Enterprises